ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಇ.ಪಿ.ಜಯರಾಜನ್

43,381
ಅತ್ಯಂತ ಹೆಚ್ಚಿನ ಮತ ಅಂತರ



ಸಂಪುಟ 10 | ಸಂಚಿಕೆ 22 | ಪುಟ 16 | ಮೇ 29, 2016 | ರೂ. 10/-

web: www.janashakthi.co.in e-mail : js_weekly@yahoo.com



ಕೇರಳ ಎಲ್‌ಡಿಎಫ್ ಜಯಭೇರಿ

ಮಲೆಗಾಂವ್ :



N.I.A. ತಿಪ್ಪರಲಾಗ ಓಕೆ, ಕರ್ಕರೆಗೆ ಅವಮಾನ ಯಾಕೆ?

ಬರ ಪರಿಹಾರ: ಕೇಂದ್ರಕ್ಕೆ ಸುಪ್ರೀಂ ಚಾಟಿ

ದಲಿತ ಟೆಂಡರ್ : ರಾಜ್ಯಪಾಲರ ನಡೆ ಸಲ್ಲ

ಎತ್ತಿನ ಹೊಳೆ ಬಂದ್ ಏಕೆ ಬೇಡ?



#DoSaalJantaBehaal

#2_ವರ್ಷ_ತರಲಿಲ್ಲ_ಹರ್ಷ

ಮಾಲೇಗಾಂವ್ ಸ್ಫೋಟದ ಆಪಾದಿತರಿಗೆ ಎನ್‌ಐಎ ಕ್ಲೀನ್ ಚಿಟ್
ಮೋದಿ ಸರಕಾರ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ದುರ್ಬಲಗೊಳಿಸುತ್ತಿದೆ
-ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಹಿಂದುತ್ವ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಆರೋಪಗಳನ್ನು ದುರ್ಬಲಗೊಳಿಸಿ ಈ ಬಿಜೆಪಿ ಸರಕಾರ ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟವನ್ನು ದುರ್ಬಲಗೊಳಿಸುತ್ತಿದೆ ಎಂಬುದು ಸುಸ್ಪಷ್ಟ, ಮಹಾರಾಷ್ಟ್ರ ಎಟಿಎಸ್ ಸಲ್ಲಿಸಿರುವ ಆರೋಪ ಪಟ್ಟಿಯ ಆಧಾರದಲ್ಲಿ ಸುಪ್ರಿಂ ಕೋರ್ಟ್ ಉಸ್ತುವಾರಿಯಲ್ಲಿ ಒಂದು ಸರಿಯಾದ ತನಿಖೆಯನ್ನು ಮತ್ತೆ ನಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಮಾಲೆಗಾಂವ್ ಭಯೋತ್ಪಾದಕ ದಾಳಿಯ ಆಪಾದನೆಗೆ ಗುರಿಯಾಗಿದ್ದ, ಅದಕ್ಕಾಗಿ ಬಂಧಿಸಲ್ಪಟ್ಟು ಸಪ್ಟಂಬರ್ 29, 2008 ರಂದು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಯ ಆರೋಪ ಪಟ್ಟಿಗೂ ಒಳಗಾಗಿದ್ದವರು ಈಗ ತಪ್ಪಿತಸ್ಥರಲ್ಲ ಎಂದು ಅದೇ ಎನ್‌ಐಎ ಹೇಳುತ್ತಿದೆ. ಈ ಆರೋಪಿಗಳನ್ನು ದೋಷಮುಕ್ತಗೊಳಿಸಿರುವ ರೀತಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಬಲವಾಗಿ ಖಂಡಿಸಿದೆ.

ಮೇ 13, 2016ರಂದು ಎನ್‌ಐಎ ಪ್ರಮುಖ ಆರೋಪಿ ಸಾಧ್ವಿ ಪ್ರಜ್ಞಾ ಸಿಂಗ್ ಮತ್ತು ಇತರ ಐವರ ಮೇಲಿನ ಆಪಾದನೆಗಳನ್ನು ಕೈಬಿಟ್ಟಿದೆ. ಅಲ್ಲದೆ ಇನ್ನೊಬ್ಬ ಪ್ರಮುಖ ಆರೋಪಿ ಲೆಫ್ಟಿನೆಂಟ್ ಕರ್ನಲ್ ಪುರೋಹಿತ್ ಮೇಲಿನ ಆಪಾದನೆಗಳನ್ನು ದುರ್ಬಲಗೊಳಿಸಿದೆ.

ಮಹಾರಾಷ್ಟ್ರದ ಭಯೋತ್ಪಾದಕ-ನಿರೋಧಕ ದಳ (ಎಟಿಎಸ್) ಈ ಭಯೋತ್ಪಾದಕ ದಾಳಿಯ ಮೂಲ ಹಿಂದುತ್ವ ಸಂಘಟನೆ 'ಅಭಿನವ ಭಾರತ' ವೆಂದು ಪತ್ತೆ ಹಚ್ಚಿ ಈ ಇಬ್ಬರು ಸೇರಿದಂತೆ 16 ಮಂದಿಯನ್ನು ಈ ಕೃತ್ಯಕ್ಕಾಗಿ ಹಿಡಿದು ಹಾಕಿತ್ತು.

ಮುಂಬೈ ಭಯೋತ್ಪಾದಕ ದಾಳಿಯ ವಿರುದ್ಧ ಹೋರಾಟ ದಲ್ಲಿ ಪ್ರಾಣಾರ್ಪಣೆ ಮಾಡಿದ್ದ ಪ್ರಖ್ಯಾತ ಪೋಲಿಸ್ ಅಧಿಕಾರಿ ಹೇಮಂತ ಕರ್ಕರೆ ನೇತೃತ್ವದಲ್ಲಿ ಈ ಬಗ್ಗೆ ವಿವರವಾದ ತನಿಖೆ ನಡೆದಿತ್ತು ಎಂಬುದನ್ನು ನೆನಪಿಸಿರುವ ಸಿಪಿಐ(ಎಂ) ಈಗ ಎನ್‌ಐಎ ಅವರ ನೆನಪಿಗೆ ಅಪಮಾನ ಮಾಡಿದೆ, ಕೆಲವು ತಿಂಗಳ ಹಿಂದೆ, ಈ ಕೇಸಿನ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದವರು ಈ ಕೇಸನ್ನು ದುರ್ಬಲಗೊಳಿಸಲಾಗುತ್ತಿದೆ ಮತ್ತು ಬುಡಮೇಲು ಮಾಡಲಾಗುತ್ತಿದೆ ಎಂದು ಎಚ್ಚರಿಸಿದ್ದರು. ಅದೀಗ ನಿಜವಾಗಿದೆ ಎಂದು ಅಭಿಪ್ರಾಯ ಪಟ್ಟಿದೆ.

ಮಾಲೆಗಾಂವ್ ಭಯೋತ್ಪಾದಕ ದಾಳಿಯ ತನಿಖೆಯ ಜಾಡು ಹಿಡಿದು ಹೊರಟಾಗ ಅಜ್ಮೇರ್ ಶರೀಫ್, ಹೈದರಾಬಾದಿನ ಮಕ್ಕಾ ಮಸೀದಿ ಮತ್ತು ಸಮಝೌತ ಎಕ್ಸ್‌ಪ್ರೆಸ್ ಭಯೋತ್ಪಾದಕ ದಾಳಿಗಳಲ್ಲೂ ಹಿಂದುತ್ವ ಭಯೋತ್ಪಾದಕ ಸಂಘಟನೆಗಳ ಪಾತ್ರ ಇದ್ದದ್ದು ಕಂಡು ಬಂತು. ಈಗಿರುವ ಬಿಜೆಪಿ ಕೇಂದ್ರ ಸರಕಾರದ ಅಡಿಯಲ್ಲಿ ಈ ಎಲ್ಲ ತನಿಖೆಗಳೂ ಮೊಟಕಾಗುತ್ತವೆ ಎಂಬುದು ಸ್ಪಷ್ಟ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟದಲ್ಲಿ ಚೌಕಾಶಿಗೆ ಸ್ಥಾನವಿಲ್ಲ, ಅದರಲ್ಲಿ ಯಾವುದೇ ರಾಜಿ ಸಾಧ್ಯವಿಲ್ಲ ಎಂದು ಭಾರತೀಯ ಸಂಸತ್ತು ಮತ್ತೆ-ಮತ್ತೆ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಗೊಳಿಸಿದೆ; ಭಯೋತ್ಪಾದನೆಗೆ ಧರ್ಮವಿಲ್ಲ, ಅದು ಸಂಪೂರ್ಣವಾಗಿಯೂ ರಾಷ್ಟ್ರ-ವಿರೋಧಿ ಎಂದು ಮತ್ತೆ-ಮತ್ತೆ ಒತ್ತಿ ಹೇಳಿದೆ. ಆದ್ದರಿಂದ ಯಾವುದೇ ಸರಕಾರ ಬಂದರೂ ಭಯೋತ್ಪಾದನೆ ಯಾವುದೇ ಮೂಲದಿಂದ ಸಂಭವಿಸಿದರೂ ಅದನ್ನು ಎದುರಿಸಿ ನಿರ್ಮೂಲಗೊಳಿಸಲು ಕರ್ತವ್ಯಬದ್ಧವಾಗಿವೆ. ಆದರೆ ಈ ಬಿಜೆಪಿ ಸರಕಾರ ಹಿಂದುತ್ವ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಆರೋಪಗಳನ್ನು ದುರ್ಬಲಗೊಳಿಸಿ ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟವನ್ನು ದುರ್ಬಲಗೊಳಿಸುತ್ತಿದೆ ಎಂಬುದು ಸುಸ್ಪಷ್ಟ ಎಂದು ಸಿಪಿಐ(ಎಂ) ಟೀಕಿಸಿದೆ.

ಮಹಾರಾಷ್ಟ್ರ ಎಟಿಎಸ್ ಸಲ್ಲಿಸಿರುವ ಆರೋಪ ಪಟ್ಟಿಯ ಆಧಾರದಲ್ಲಿ ಸುಪ್ರಿಂ ಕೋರ್ಟ್ ಉಸ್ತುವಾರಿಯಲ್ಲಿ ಒಂದು ಸರಿಯಾದ ತನಿಖೆಯನ್ನು ಮತ್ತೆ ನಡೆಸಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಆಗ ಮಾತ್ರವೇ ನ್ಯಾಯ ಒದಗಿಸಲು ಸಾಧ್ಯ ಮತ್ತು ಭಯೋತ್ಪಾದನೆಯ ಬೆಳವಣಿಗೆಯನ್ನು ಎದುರಿಸಲು ಸಾಧ್ಯ ಎಂದಿದೆ. (ಪುಟ 12ನ್ನೂ ನೋಡಿ)

'ಋಜುತ್ವ ಮತ್ತು ಕಾರ್ಯಕ್ಷಮತೆ'ಯ ಹೆಸರಲ್ಲಿ ಕೇಂದ್ರೋದ್ದಿಮೆಗಳಲ್ಲಿ
ಮೋದಿ ಸರಕಾರದ ಕಡ್ಡಾಯ ನಿವೃತ್ತಿ ಹುನ್ನಾರ
ದೇಶವ್ಯಾಪಿ ಪ್ರತಿಭಟನೆಗೆ ಸಿಐಟಿಯು ಕರೆ

ನರೇಂದ್ರ ಮೋದಿ ಸರಕಾರ ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳು ತಮ್ಮ ಉದ್ಯೋಗಿಗಳ ವರ್ತನೆ, ಶಿಸ್ತು ಮತ್ತು ಅಪೀಲು(ಸಿಡಿಎ) ನಿಯಮಗಳು ಮತ್ತು/ಸೇವಾ ನಿಯಮಗಳಲ್ಲಿ ಶಿಕ್ಷಾ ಕ್ರಮಗಳನ್ನು ಸೇರಿಸಬೇಕು ಎಂದು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮೂಲಕ ನಿರ್ದೇಶನ ಕಳಿಸಿದೆ ಎಂದು ವರದಿಯಾಗಿದೆ. ಇದು 'ಋಜುತ್ವ ಮತ್ತು ದಕ್ಷತೆ ಇರುವಂತೆ' ಮಾಡುವ ಹೆಸರಿನಲ್ಲಿ ನೌಕರರನ್ನು ಬಲವಂತವಾಗಿ ನಿವೃತ್ತಗೊಳಿಸುವ ನಿರಂಕುಶ ಅಧಿಕಾರವನ್ನು ಆಡಳಿತ ಮಂಡಳಿಗೆ ಕೊಡಮಾಡುವ ಹುನ್ನಾರ ಎಂದು ಸಿಐಟಿಯು ಬಲವಾಗಿ ಖಂಡಿಸಿದೆ.

ಮೋದಿ ಸರಕಾರ ಈ ಕಡ್ಡಾಯ ನಿವೃತ್ತಿಯ ಬರ್ಬರ ಕ್ರಮವನ್ನು ಜಾರಿಮಾಡಲು ಪಣ ತೊಟ್ಟಂತಿದೆ. ಈ ಬಗ್ಗೆ ಎಲ್ಲ ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳು ತಮ್ಮ ನಿಯಮಗಳಲ್ಲಿ ಬದಲಾವಣೆಗಳನ್ನು ಸೇರಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಈ ಬಗ್ಗೆ ವರದಿ ಒಪ್ಪಿಸಬೇಕು ಎಂದು ನಿರ್ದೇಶಿಸಲಾಗಿದೆಯಂತೆ. ಒಬ್ಬ ನೌಕರನ ವಯಸ್ಸು 50/55 ವರ್ಷ ತಲುಪುವ, ಅಥವ 30ವರ್ಷಗಳ ಸೇವೆ ಮುಗಿಸುವ ಆರುತಿಂಗಳ ಮೊದಲು ಈ ಪ್ರಕ್ರಿಯೆ ಆರಂಭಿಸಬೇಕಂತೆ. ಉಕ್ಕು ಪ್ರಾಧಿಕಾರ ಮತ್ತು ಬೆಮೆಲ್ ಈಗಾಗಲೇ ಈ ಕ್ರಮಗಳನ್ನು ಸೇರಿಸಿದ್ದು ಅದಕ್ಕೆ ಅಲ್ಲಿನ ಕಾರ್ಮಿಕ ಸಂಘಟನೆಗಳಿಂದ ಬಲವಾದ ಪ್ರತಿಭಟನೆ ವ್ಯಕ್ತವಾಗಿದೆ.

ಇದು ನೌಕರರ ಮೂಲಭೂತ ಹಕ್ಕು ಮತ್ತು ಸ್ವಾಭಾವಿಕ ನ್ಯಾಯದ ನಿರಾಕರಣೆ ಎಂದು ಸಿಐಟಿಯು ಇದನ್ನು ವಿರೋಧಿಸಿದೆ. ಕಾರ್ಯದಕ್ಷತೆ, ಸಾಮರ್ಥ್ಯ, ಋಜುತ್ವ ಮುಂತಾದವುಗಳನ್ನು ಹೆಚ್ಚಿಸಲು, ಅಥವ ಈ ವಿಷಯದಲ್ಲಿ ಶಿಕ್ಷಾ ಕ್ರಮಗಳಿಗೆ ಈಗಾಗಲೇ ಸೇವಾ ನಿಯಮಗಳಲ್ಲಿ ಅವಕಾಶವಿದೆ. ಆದರೂ ಈಗ ಈ ನಿರ್ದೇಶನಗಳನ್ನು ನೀಡಿರುವುದರ ಉದ್ದೇಶ ಆಡಳಿತ ಮಂಡಳಿಗಳಿಗೆ ತಮ್ಮ ನೌಕರರನ್ನು ಹೊರಗೆಸೆಯಲು ಲಂಗುಲಗಾಮಿಲ್ಲದ ಅಧಿಕಾರಗಳನ್ನು ನೀಡುವುದು ಮತ್ತು ನೌಕರರಿಗೆ ತಮ್ಮನ್ನು ರಕ್ಷಿಸಿಕೊಳ್ಳುವ ಯಾವ ಅವಕಾಶವೂ ಇಲ್ಲದಂತೆ ಮಾಡುವುದು. **ಲಂಗುಲಗಾಮಿಲ್ಲದ ಅಧಿಕಾರ ತನ್ನೊಂದಿಗೇ ದುಷ್ಟ ಉದ್ದೇಶಗಳನ್ನೂ ತರುತ್ತದೆ ಎಂದು ಎಚ್ಚರಿಸಿರುವ ಸಿಐಟಿಯು ಇದು ನೌಕರರನ್ನು ಗುಲಾಮರಾಗಿಸುವ ಕ್ರಮ ಎಂದು ವರ್ಣಿಸಿದೆ, ಮತ್ತು ಇದರ ಉದ್ದೇಶ ಕಾರ್ಮಿಕ ಆಂದೋಲನವನ್ನು ಮಟ್ಟ ಹಾಕುವುದು ಎಂದು ಹೇಳಿದೆ.**

ಇದು ನರೇಂದ್ರ ಮೋದಿ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯ, ಕಾರ್ಮಿಕ ಸುಧಾರಣೆಯ ಹೆಸರಿನಲ್ಲಿ ಕಾರ್ಮಿಕರಿಗೆ ರಕ್ಷಣೆ ನೀಡುವ ಕಾನೂನುಗಳನ್ನು ಧ್ವಂಸ ಮಾಡುವ ಧೋರಣೆಯ ಅಭಿನ್ನ ಭಾಗ. ಅಲ್ಲದೆ ಕೇಂದ್ರೀಯ ಸಾರ್ವಜನಿಕ ವಲಯದ 'ಮಹಾ ಆಯಕಟ್ಟಿನ ಮಾರಾಟ'ಕ್ಕೆ ಹೊರಟಿರುವ ಸಂದರ್ಭದಲ್ಲಿ ಖಾಸಗೀ ವಲಯದ ದಮನಕಾರೀ ಸಂಸ್ಕೃತಿಯನ್ನು ಸಾರ್ವಜನಿಕ ವಲಯದಲ್ಲಿ ತಂದು ಅದನ್ನು ಮಾರಿ ತಿನ್ನುವುದಕ್ಕೆ ವಿರೋಧವನ್ನು ಕುಂಠಿತಗೊಳಿಸುವ ದುಷ್ಟ ಉದ್ದೇಶವೂ ಇದರ ಹಿಂದಿದೆ ಎಂದು ಸಿಐಟಿಯು ಹೇಳಿದೆ.

ಒಬ್ಬ ಉದ್ಯೋಗಿ 50/55 ವರ್ಷ ತಲುಪುವ ವೇಳೆಗೆ ಒಂದೆಡೆಯಲ್ಲಿ ಹೆಚ್ಚಿನ ಕುಶಲತೆ ಮತ್ತು ಅನುಭವ ಗಳಿಸಿದ್ದರೆ, ಇನ್ನೊಂದೆಡೆಯಲ್ಲಿ ತನ್ನ ಕುಟುಂಬಕ್ಕೆ ಸಂಬಂಧಪಟ್ಟಂತೆ ಅತೀ ಹೆಚ್ಚು ಸಾಮಾಜಿಕ ಜವಾಬ್ದಾರಿ ಹೊರಬೇಕಾಗಿರುವ ಘಟ್ಟ. ಆದ್ದರಿಂದ ಈ ಘಟ್ಟದಲ್ಲಿ ಕಡ್ಡಾಯ ನಿವೃತ್ತಿಯ ಯೋಜನೆ ಉದ್ದಿಮೆಯ ದಕ್ಷತೆಯ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ.

ವಾಸ್ತವವಾಗಿ ಇಂತಹ ಪ್ರತಿಗಾಮಿ ನಿರ್ದೇಶನಗಳು ಆಡಳಿತದ ಉನ್ನತ ಸ್ಥಾನಗಳಲ್ಲಿರುವವರ 'ಋಜುತ್ವ ಮತ್ತು ಕಾರ್ಯಕ್ಷಮತೆ'ಯ ಮುಂದೆಯೇ ಪ್ರಶ್ನೆ ಚಿಹ್ನೆ ಇಟ್ಟಿವೆ ಎಂದಿರುವ ಸಿಐಟಿಯು ಕೇಂದ್ರೀಯ ಸಾರ್ವಜನಿಕ ವಲಯದ ನೌಕರರು ಮತ್ತು ಅಧಿಕಾರಿಗಳು ಕೂಡ ತಮ್ಮ ಸೇವಾ ನಿಯಮಗಳಿಗೆ ಇಂತಹ ಘೋರ ಬದಲಾವಣೆಯನ್ನು ತರುವ ಸರಕಾರದ ಇಂತಹ ಪ್ರತಿಗಾಮಿ ಕ್ರಮವನ್ನು ತೆಪ್ಪಗೆ ಸ್ವೀಕರಿಸಬಾರದು, ಅದರ ವಿರುದ್ಧ ಸಿಡಿದೇಳಬೇಕು ಎಂದು ಕರೆ ನೀಡಿದೆ.

ಈ ನೌಕರ-ವಿರೋಧಿ ನಿರ್ಧಾರವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಸಿಐಟಿಯು ಆಗ್ರಹಿಸಿದೆ. ಸಾರ್ವಜನಿಕ ವಲಯದ ನೌಕರರು ಮತ್ತು ಅವರ ಸಂಘಟನೆಗಳು ಒಟ್ಟಾಗಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಇಂತಹ ನಿರ್ದೇಶನಗಳು ಮತ್ತು ಇಂತಹ ನಿರ್ದೇಶನಗಳನ್ನು ಪಾಲಿಸಲು ಮುಂದಾಗುವ ಸಾರ್ವಜನಿಕ ವಲಯದ ಉದ್ದಿಮೆಯ ಆಡಳಿತ ಮಂಡಳಿಗಳ ವಿರುದ್ಧ ಬಲವಾದ ಪ್ರತಿಭಟನೆಗಳನ್ನು ಸಂಘಟಿಸಬೇಕು, ಕಡ್ಡಾಯ ನಿವೃತ್ತಿಗಳನ್ನು ಬಲವಾಗಿ ಪ್ರತಿರೋಧಿಸಬೇಕು ಎಂದು ಕರೆ ನೀಡಿದೆ. ○

aAiAvEAzAgEEzAA

ಮನುಷ್ಯರು ತಮ್ಮ ಚರಿತ್ರೆಯನ್ನು ತಾವೇ ರೂಪಿಸುತ್ತಾರೆ; ಆದರೆ ತಾವು ಎಣಿಸಿದ ಬಗೆಯಲ್ಲಿ, ತಾವು ಇಚ್ಛೆಸುವ ಪರಿಣಾಮಗಳಿಗಾಗಿಯಲ್ಲ. ಭೂತಕಾಲದಿಂದ ಬಂದ ಈಗಾಗಲೇ ಇರುವ ಪರಿಸ್ಥಿತಿಗಳಲ್ಲಿ.. ಭೂತದ ಪೀಳಿಗೆಗಳ ಪರಂಪರೆ ವರ್ತಮಾನದಲ್ಲಿ ಬದುಕುತ್ತಿರುವರಿಗೆ ದುಸ್ವಪ್ನದಂತೆ ಕಾಡುತ್ತದೆ. ಅವರು ತಮ್ಮನ್ನು ಮತ್ತು ತಮ್ಮ ಸುತ್ತಲಿನ ಜಗತ್ತನ್ನು ಕ್ರಾಂತಿಕಾರಕವಾಗಿ ಬದಲಾಯಿಸುವ ತೊಡಗಿರುವಾಗಲೇ, ಹಿಂದೆ ಇಲ್ಲದ ಏನಾದರೂ ಒಂದನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುವಾಗಲೇ, ಅಂತಹ ಕ್ರಾಂತಿಕಾರಿ ಬಿಕ್ಕಟ್ಟಿನ ಸಂಕ್ರಮಣ ಕಾಲದಲ್ಲೇ; ಅವರು ಗತದ ಗೋರಿಯಿಂದೆದ್ದ ಪಾತ್ರಗಳು, ಅವರ ಹೆಸರುಗಳು, ಯುದ್ಧ ಘೋಷಣೆಗಳು, ಭಾಷೆಗಳನ್ನು ಬಳಸುತ್ತಾ ಹಳೆಯ ಪೋಷಾಕುಗಳನ್ನು ತೊಟ್ಟು ವರ್ತಮಾನದ ರಂಗದಲ್ಲಿ ಹೊಸ ಆಟವನ್ನು ಆಡುತ್ತಾರೆ.

-ಕಾರ್ಲ್ ಮಾರ್ಕ್ಸ್


ಮಹಿಳಾ ವಿಶ್ವವಿದ್ಯಾಲಯದ ವಿಚಾರ ಸಂಕಿರಣಕ್ಕೆ ಜಗ್ಮತಿ ಸಂಗ್ವಾನ್ ಆಹ್ವಾನ ರದ್ದು
-ಹರಿಯಾಣ ಮುಖ್ಯಮಂತ್ರಿಗಳ ಹಸ್ತಕ್ಷೇಪ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಪ್ರಧಾನ ಕಾರ್ಯದರ್ಶಿ ಜಗ್ಮತಿ ಸಂಗ್ವಾನ್ ಅವರನ್ನು ಹರಿಯಾಣಾದ ಖಾನ್ಪುರ್ ಕಲಾನ್‌ನಲ್ಲಿರುವ ಬಿಪಿಎಸ್ ಮಹಿಳಾ ವಿಶ್ವವಿದ್ಯಾಲಯ ಒಂದು ವಿಚಾರ ಸಂಕಿರಣಕ್ಕೆ ಆಹ್ವಾನಿಸಿತ್ತು. ಚರ್ಚೆಯ ವಿಷಯ: ಭಾರತದಲ್ಲಿ ಸಾಮಾಜಿಕ ಉದ್ಯಮಶೀಲತೆ ಮತ್ತು ತಾಳಿಕೆಯ ಅಭಿವೃದ್ಧಿ. ಮೇ 13ರಂದು ಈ ಕಾರ್ಯಕ್ರಮ ನಡೆಯಲಿತ್ತು. ಮೇ12 ರ ರಾತ್ರಿ ಕಾರ್ಯಕ್ರಮದ ಸಂಘಟಕರು ಜಗ್ಮತಿಯವರಿಗೆ ಫೋನ್ ಮಾಡಿ ಹರಿಯಾಣ ಮುಖ್ಯಮಂತ್ರಿಗಳ ಕಚೇರಿ ತಮ್ಮ ಹೆಸರನ್ನು ಭಾಷಣಕಾರರ ಪಟ್ಟಿಯಿಂದ ಕೈಬಿಡಲು ಹೇಳಿದ್ದಾರೆ ಎಂದರು.

ಯಥಾಪ್ರಕಾರ, ಜಗ್ಮತಿಯವರಿಗೆ ಆಹ್ವಾನವನ್ನು ಹಿಂತೆಗೆದುಕೊಂಡಿರುವಲ್ಲಿ ಮುಖ್ಯಮಂತ್ರಿಗಳ ಕಚೇರಿಯ ಪಾತ್ರವೇನೂ ಇಲ್ಲ ಎಂದರು; ತವಿಶ್ವವಿದ್ಯಾಕಯುದ ಉಪಕುಲಪತಿಗಳು ವಿವಿಯ ಆವರಣದಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದರ ಬಗ್ಗೆ ತನಗೇನೂ ತಿಳಿದಿಲ್ಲ ಎಂದರು. ಆದರೆ ಹರಿಯಾಣದ ಬುದ್ಧಿಜೀವಿಗಳು ಇವರ ಹೇಳಿಕೆಗಳನ್ನು ನಂಬಿಲ್ಲ. ಒಬ್ಬ ಕ್ರೀಡಾ ಪಾರಿತೋಷಕ ವಿಜೇತೆಯೂ ಆದ ಜಗ್ಮತಿಯವರಿಗೆ ನೀಡಿದ ಆಹ್ವಾನವನ್ನು ರದ್ದು ಪಡಿಸಿರುವುದರ ಬಗ್ಗೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಹರಿಯಾಣ ಸರಕಾರ ತಕ್ಷಣವೇ ಸ್ಪಷ್ಟೀಕರಣ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಕಾರ್ಯಕರ್ತರಿಗೆ ಶಿಕ್ಷಣ ಮತ್ತು ಕಲಿಕೆಯ ದಾರಿಗಳನ್ನು ಈ ರೀತಿ ಸರ್ವಾಧಿಕಾರಿಗಳಂತೆ ವರ್ತಿಸಿ ಮುಚ್ಚಲು ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಚಂಡೀಗಡದ ಸ್ನಾತಕೋತ್ತರ ವೈದ್ಯಕೀಯ ಶಾಸ್ತ್ರಗಳ ಅಧ್ಯಯನ ಸಂಸ್ಥೆಯ ನಿವೃತ್ತ ಹಿರಿಯ ಪ್ರಾಧ್ಯಾಪಕರೂ ಸೇರಿದಂತೆ ಹಲವು ಮಹಿಳಾ ಪ್ರಾಧ್ಯಾಪಕರು, ನಾಲ್ಕು ನಿವೃತ್ತ ಪ್ರಿನ್ಸಿಪಾಲರುಗಳು ಮತ್ತಿತರರು ಜಂಟಿ ಹೇಳಿಕೆ ನೀಡಿದ್ದಾರೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಪಂಚಾಯತು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಮೇಲೆ ಶರತ್ತುಗಳನ್ನು ಹಾಕಿದ್ದಕ್ಕೆ ಜಗ್ಮತಿಯವರು ಬಹಿರಂಗವಾಗಿ ಸವಾಲು ಹಾಕಿದ್ದರಿಂದ ಕುಪಿತರಾದವರ ಕೃತ್ಯ ಇದು ಎಂಬ ಬಗ್ಗೆ ಸಂದೇಹವಿಲ್ಲ.

ಮೇ 17ರಂದು ದಿಲ್ಲಿಯಲ್ಲಿ 'ಗುಮ್‌ನಾಮ್ ಸಾಹಸ್' ಎಂಬ ಡಾಕ್ಯುಮೆಂಟರಿ ಚಿತ್ರವನ್ನು ಬಿಡುಗಡೆ ಮಾಡಲಾಯಿತು. ಇದು ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣು ಮಕ್ಕಳನ್ನು ಛೇಡಿಸುವುದನ್ನು ಕುರಿತಾದ್ದು. ಇದನ್ನು ಒಂದು ಸಾಮಾಜಿಕ ಸಮಸ್ಯೆಯಾಗಿ ಕಂಡಿರುವ ಚಿತ್ರ ಸಮಾಜದ ಗೋಸುಂಬೆತನವನ್ನು ಪ್ರಶ್ನಿಸುತ್ತ ಬಾಲಕಿಯರ ಹೋರಾಟವನ್ನು ಚಿತ್ರಿಸಿದೆ, ಜತೆಗೆ ಮಹಿಳಾ ಸಹಾಯವಾಣಿಯ ಪರಿಸ್ಥಿತಿ ಮತ್ತು ಖಾಪ್ ಪಂಚಾಯತುಗಳ ಪಾತ್ರವನ್ನು ಚರ್ಚಿಸುವಂತೆ ಮಾಡಿದೆ.



ಈ ಚಿತ್ರದ ಪ್ರದರ್ಶನದ ನಂತರ ನಡೆದ ಸಂವಾದದಲ್ಲಿ ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಜಗ್ಮತಿ ಸಂಗ್ವಾನ್, ಪತ್ರಕರ್ತೆ ಟಿ.ಕೆ. ರಾಜಲಕ್ಷ್ಮಿ, ಲೇಖಕಿ ಶುಭಾ, ಪ್ರಖ್ಯಾತ ಚಿತ್ರ ಕಲಾವಿದೆ ಹೇಮ ಜ್ಯೋತಿಕ, ಇವರ ಜೊತೆಗೆ ಇತ್ತೀಚೆಗೆ ಹರಿಯಾಣಾದ ರೋಹ್ತಕ್‌ನಲ್ಲಿ ಇಂತಹ ಒಂದು ಘಟನೆ ಯಿಂದಾಗಿ ಆತ್ಮಹತ್ಯೆ ಮಾಡಿಕೊಂಡ ಮಧು ಮತ್ತು ನಿಕಿತಾ ಅವರ ಪಾಲಕರು ಹಾಗೂ ಬಸ್‌ನಲ್ಲಿ ಈ ರೀತಿ ಛೇಡಿಸಿದವರನ್ನು ಎದುರಿಸಿ ನಿಂತ ಧೀರ ಸೋದರಿಯರಾದ ಪೂಜಾ ಮತ್ತು ಆರತಿ ಕೂಡ ಭಾಗವಹಿಸಿದ್ದರು.

ಸಂಪಾದಕೀಯ

ದಲಿತರಿಗೆ ಟೆಂಡರ್: ರಾಜ್ಯಪಾಲರ ನಡೆ ಸಲ್ಲ

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಟೆಂಡರ್ ಇಲ್ಲದೆ ರೂ.50 ಲಕ್ಷ ಮೌಲ್ಯದವರೆಗಿನ ಕಾಮಗಾರಿಗಳ ಗುತ್ತಿಗೆಯನ್ನು ನೇರವಾಗಿ ನೀಡುವ ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ (ಕೆ.ಟಿ.ಪಿ.ಪಿ.) ಕಾಯಿದೆಗೆ ತಿದ್ದುಪಡಿ ತರಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿದ್ದು, ಈ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಿದೆ. ರೂ. 5 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಎಲ್ಲಾ ಕಾಮಗಾರಿಗಳ ಗುತ್ತಿಗೆಯನ್ನು ಟೆಂಡರ್ ಕರೆದೇ ನೀಡಬೇಕೆಂಬುದು ಕೆ.ಟಿ.ಪಿ.ಪಿ. ಕಾಯಿದೆಯ ನಿಯಮ. ರೂ. 5 ಲಕ್ಷಕ್ಕಿಂತ ಕಡಿಮೆ ಮೌಲ್ಯದ ಕಾಮಗಾರಿಯ ಗುತ್ತಿಗೆಯನ್ನು ಸಂಬಂಧ ಪಟ್ಟ ಅಧಿಕಾರಿಯ ವಿವೇಚನೆಯ ಮೇಲೆನೇ ನೀಡುವ ಕ್ರಮ ಈಗಲೂ ಇದೆ. ಈಗಿನ ತಿದ್ದುಪಡಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮಾತ್ರ ಈ ಮಿತಿಯನ್ನು ರೂ.50 ಲಕ್ಷ-ಕ್ಕೆ ಏರಿಸುತ್ತದೆ. ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ. 17.15 ರಷ್ಟು ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ. 6.95 ರಷ್ಟು ಮೀಸಲಾತಿ ನೀಡಲು ಸಹ ಸರಕಾರ ನಿರ್ಧರಿಸಿದೆ.

ಎಲ್ಲಾ ಕ್ಷೇತ್ರಗಳಲ್ಲಿ ದಲಿತ ಮತ್ತು ಬುಡಕಟ್ಟು ಜನರ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಇದು ಸರಿಯಾದ ಕ್ರಮ. ದಲಿತ ಮತ್ತು ಬುಡಕಟ್ಟು ಸಮುದಾಯದವರಿಗೆ ಶಿಕ್ಷಣ ಉದ್ಯೋಗಗಳಂತೆ ಉದ್ಯಮದ ಕ್ಷೇತ್ರಗಳಲ್ಲೂ 'ಸಮಾನವಾಗಿ ಸ್ಪರ್ಧಿಸಲು' ಚಾರಿತ್ರಿಕ ಕಾರಣಗಳಿಂದಾಗಿ ಸಾಧ್ಯವಾಗುತ್ತಿಲ್ಲ. ಟೆಂಡರ್ ಮೂಲಕ ಗುತ್ತಿಗೆ ಪಡೆಯಲು ಸಾಮಾನ್ಯವಾಗಿ ಬೇಕಾದ ಬಂಡವಾಳ, ಹಿಂದಿನ ಕೆಲಸದ ಅನುಭವ, ಇತರ ಸಂಪನ್ಮೂಲಗಳನ್ನು ಹೊಂದಿಸಬಹುದಾದ ಸಾಮರ್ಥ್ಯದ ಕೊರತೆಯೇ ಅವರಿಗೆ ಸವಾಲಾಗಿರುತ್ತದೆ. ಯಾವುದೇ ಗುತ್ತಿಗೆ ಸಿಗದೆ ಬಂಡವಾಳವಾಗಲಿ, ಹಿಂದಿನ ಕೆಲಸದ ಅನುಭವವಾಗಲಿ, ಇತರ ಸಂಪನ್ಮೂಲಗಳನ್ನು ಹೊಂದಿಸಬಹುದಾದ ಸಾಮರ್ಥ್ಯವಾಗಲಿ ಬರುವುದು ಸಾಧ್ಯವಿಲ್ಲ. ಇನ್ನು ಟೆಂಡರ್ ನಿಯಮದಂತೆ ಸ್ಪರ್ಧಾತ್ಮಕವಾಗಿ ಅತ್ಯಂತ ಕಡಿಮೆ ಮೌಲ್ಯಕ್ಕೆ ಗುತ್ತಿಗೆ ಪಡೆಯುವ ಮಾತಂತೂ ದೂರವೇ ಉಳಿಯಿತು. ಹಾಗೊಮ್ಮೆ ಅತ್ಯಂತ ಕಡಿಮೆ 'ಬಿಡ್' ಕೊಟ್ಟರೂ ಗುತ್ತಿಗೆ ಸಿಗುವುದು ಸಂಬಂಧಪಟ್ಟ ಅಧಿಕಾರಿಯ ಮನೋಧರ್ಮದ ಮೇಲೆ ಅವಲಂಬಿಸಿರುತ್ತದೆ. ನಮ್ಮ ಈಗಿನ ಪರಿಸ್ಥಿತಿಯಲ್ಲಿ ಅಧಿಕಾರಿ ಬೇರೆ ಯಾವುದೋ ಕಾರಣ ಕೊಟ್ಟು ಟೆಂಡರ್ ಅವರಿಗೆ ಕೊಡದಿರುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ಸರಕಾರಿ ಗುತ್ತಿಗೆಗಳ ಮೂಲಕ ಅವರಿಗೆ ಈ ಕ್ಷೇತ್ರಕ್ಕೆ ಪ್ರವೇಶಿಸಲು ಅನುವು ಮಾಡಿಕೊಡಲು ರಾಜ್ಯ ಸರಕಾರ ಅಗತ್ಯ ಕಾನೂನಾತ್ಮಕ ಕ್ರಮಗಳನ್ನು ಕೈಗೊಂಡಿರುವುದು ಸರಿಯಾದ ಕ್ರಮವೇ ಆಗಿದೆ. ಮೀಸಲಾತಿ ಸಿಗಬಹುದಾದ ಸರಕಾರಿ ಉದ್ಯೋಗಗಳು ಕಡಿಮೆಯಾಗುತ್ತಿರುವ, ಖಾಸಗಿ ಕ್ಷೇತ್ರದಲ್ಲಿ ತಾಂಡವವಾಡುತ್ತಿರುವ ಜಾತೀಯತೆ-ಅಸ್ಪೃಶ್ಯತೆಯ ಹಿನ್ನೆಲೆಯಲ್ಲಿ ಇದು ತುರ್ತಿನ ಅಗತ್ಯ ಕೂಡಾ.

ಉದ್ಯಮದ ಕ್ಷೇತ್ರದಲ್ಲಿ ದಲಿತರಿಗೆ ಪ್ರವೇಶ ಮಾಡಲು ಅನುವು ಮಾಡಿಕೊಡುವ ಕಾನೂನು ಕ್ರಮಗಳು ಅಗತ್ಯ ಎಂಬುದು ಹೊಸತೇನಲ್ಲ. ಬಹಳ ಹಿಂದೆಯೇ 1942ರಲ್ಲೇ ಡಾ. ಅಂಬೇಡ್ಕರ್ ಅವರು 'ಪರಿಶಿಷ್ಟರ ನೋವುಗಳು' ಎಂಬ ಬ್ರಿಟಿಶ್ ಸರಕಾರಕ್ಕೆ ಸಲ್ಲಿಸಿದ ಮನವಿ ಪತ್ರದಲ್ಲಿ ಈ ಪ್ರಸ್ತಾವವನ್ನು ಮಾಡಿದ್ದಾರೆ. "ಒಂದು ಗುತ್ತಿಗೆ ನಿರ್ದಿಷ್ಟಪಡಿಸಿದ ಗುತ್ತಿಗೆದಾರನೊಬ್ಬನಿಗೆ ಸಿಗುತ್ತದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸುವ ವಿವೇಚನಾಧಿಕಾರ ಸಂಬಂಧಪಟ್ಟ ಅಧಿಕಾರಿಗಷ್ಟೇ ಇರುತ್ತದೆ. ಅಧಿಕಾರಿಯ ವಿವೇಚನೆ ಪರಿಶಿಷ್ಟ ಗುತ್ತಿಗೆದಾರನ ಪರ ಇರುತ್ತದೆ ಎಂದುಕೊಳ್ಳುವುದು ಸಾಧ್ಯವಿಲ್ಲ.. ಯಾಕೆಂದರೆ ಪರಿಶಿಷ್ಟರ ಬಿಡ್ ಕಡಿಮೆ ಇರಬಹುದು. ಆದರೆ ಜಾತಿಪೀಡಿತ ಪೂರ್ವಗ್ರಹದ ಮನಸ್ಥಿತಿಯ ಕಾರಣದಿಂದ ಅಧಿಕಾರಿ ಆ ಪರಿಶಿಷ್ಟರ ಬಿಡ್ ಅನ್ನು ಒಪ್ಪದಿರಬಹುದು. ಸಲ್ಲಿಸಿದ ಕಡಿಮೆ ಬಿಡ್ ಗಿಂತ ಪರಿಶಿಷ್ಟರ ಬಿಡ್ ತುಸು ಹೆಚ್ಚಿರಬಹುದು. ಮತ್ತು ಇದನ್ನು ಒಪ್ಪಿಕೊಳ್ಳುವ ಮುಕ್ತ ಅವಕಾಶ ಸಂಬಂಧಪಟ್ಟ ಅಧಿಕಾರಿಗೆ ಇದ್ದೇ ಇರುತ್ತದೆ. ಆದರೂ ಆತ ಮೇಲ್ಕಾಣಿಸಿದ ಎರಡು ನಿಯಮಗಳ ಹಿನ್ನೆಲೆಯಲ್ಲಿ ತನ್ನ ವಿವೇಚನಾಧಿಕಾರ(?) ಬಳಸಿ ತಿರಸ್ಕರಿಸುತ್ತಾನೆ.. ..ನಿಜ, ಜಾತಿವಾರು ತಾರತಮ್ಯಕ್ಕೆ ಪರಿಹಾರವೇ ಇಲ್ಲ. ಆದ-ರೆ ನನಗನ್ನಿಸಿದಂತೆ ನಾವು ಮಾಡಬೇಕಾದ್ದೆಂದರೆ ಸಂಬಂಧ ಪಟ್ಟ ನಿಯಮಗಳಿಗೆ ತಿದ್ದುಪಡಿ ತರುವುದು." ಇದು ಡಾ. ಅಂಬೇಡ್ಕರ್ ಮನವಿಪತ್ರದಲ್ಲಿ ಮಂಡಿಸಿದ ಪ್ರಸ್ತಾವ. ರಾಜ್ಯ ಸರಕಾರದ ತಿದ್ದುಪಡಿ ಈ ದಿಕ್ಕಿನಲ್ಲಿದೆ ಎಂಬುದು ಸ್ಪಷ್ಟವಿದೆ.. ಈ ಕ್ರಮದಿಂದ ಬಹುಸಂಖ್ಯಾತ ದಲಿತರ ಸ್ಥಿತಿ-ಗತಿಯಲ್ಲಿ ಬದಲಾವಣೆ ಆಗುತ್ತದೆ ಎಂಬ ಭ್ರಮೆ ಯಾರೂ ಇಟ್ಟುಕೊಳ್ಳಬೇಕಾಗಿಲ್ಲ. ಇಂತಹ ಕ್ರಮಗಳ ಪ್ರಾಮಾಣಿಕ ಜಾರಿ ಬಗ್ಗೆ ಕಾಂಗ್ರೆಸ್ ಮತ್ತು ಅದರ ಸರಕಾರ ಎಷ್ಟರ ಮಟ್ಟಿಗೆ ಕಾಳಜಿ ವಹಿಸಬಹುದು ಎಂಬ ಬಗ್ಗೆಯೂ ಭ್ರಮೆ ಇರಬೇಕಿಲ್ಲ. ಕಾಂಗ್ರೆಸ್ ಮತ್ತು ಅದರ ಸರಕಾರಕ್ಕೆ ಇದು ಇನ್ನೊಂದು ಚುನಾವಣಾ ರಾಜಕೀಯದ ನಡೆ ಅಷ್ಟೇ. ಅದು ಏನೇ ಇರಲಿ, ಈ ಕ್ರಮವನ್ನು ಸಾಮಾಜಿಕ ನ್ಯಾಯ ಮತ್ತು ಒಳಗೊಳ್ಳುವಿಕೆಯತ್ತ ಒಂದು ದಿಟ್ಟ ಕ್ರಮವಾಗಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಬೆಂಬಲಿಸಬೇಕು. ಅದರ ಪ್ರಾಮಾಣಿಕ ಜಾರಿಗೆ ಹೋರಾಡಬೇಕು.

ಈ ಪ್ರಸ್ತಾವಕ್ಕೆ ದಲಿತ-ಆದಿವಾಸಿಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಸಬಲೀಕರಿಸುವ ಯಾವುದೇ ಪ್ರಯತ್ನಕ್ಕೆ ಬರುವಂತೆ ಹಲವು ಆಕ್ಷೇಪಗಳು ಬರಬಹುದು. ಇವುಗಳಲ್ಲಿ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆಯನ್ನು ಹದಗೆಡಿಸಬಹುದು ಎಂಬುದು ಒಂದಾಗಿರುತ್ತದೆ ಎಂಬುದು ಖಚಿತ. ಇದು ಪಾರದರ್ಶಕತೆಯ ಬಗ್ಗೆ ನಿಜವಾದ ಕಾಳಜಿಯಿಂದಲೂ ಬರಬಹುದು. ಅಥವಾ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಕ್ರಮಗಳನ್ನು ಮೂಲಭೂತವಾಗಿ ವಿರೋಧಿಸುವ ಮನೋಧರ್ಮಕ್ಕೆ ತೋರಿಕೆಯ ಹೊರಕವಚವಾಗಿಯೂ ಬರಬಹುದು. ಸಾರ್ವಜನಿಕ ಖರೀದಿಯ ಈಗಿರುವ ಪಾರದರ್ಶಕತೆಯ ಮಟ್ಟದಲ್ಲಿ ಈ ಕ್ರಮದಿಂದ ಅದಕ್ಕೆ ತೀವ್ರ ಧಕ್ಕೆ ಬರುವುದಿಲ್ಲ ಎಂಬುಉ ಸ್ಪಷ್ಟವಿದೆ.

ಆದರೆ ರಾಜ್ಯಪಾಲರು ಈ ಸುಗ್ರೀವಾಜ್ಞೆಯನ್ನು ಹಿಂದಕ್ಕೆ ಕಳಿಸುವ ಕ್ರಮ ಸರಿಯಾದದ್ದಲ್ಲ. ವಿಧಾನಮಂಡಲದ ಉಭಯಸದನಗಳಲ್ಲಿ ಈ ಬಗ್ಗೆ ಚರ್ಚಿಸಿ ಮಸೂದೆ ಅಂಗೀಕರಿಸಬೇಕು ಎಂಬುದು ರಾಜ್ಯಪಾಲರು ಕೊಟ್ಟಿರುವ ಕಾರಣ. ಯಾವುದು ತುರ್ತು ಕ್ರಮ? ಯಾವುದು ಸುಗ್ರೀವಾಜ್ಞೆ ಮೂಲಕ ತರಬೇಕು ಎಂಬುದು ಚುನಾಯಿತ ಸರಕಾರಕ್ಕೆ ಬಿಟ್ಟಿದ್ದು. ಯಾವುದೇ ಸುಗ್ರೀವಾಜ್ಞೆ ಸಹ ವಿಧಾನಮಂಡಲದ ಉಭಯಸದನಗಳಲ್ಲಿ ಈ ಬಗ್ಗೆ ಚರ್ಚೆಗೆ ಒಳಗಾಗುತ್ತದೆ. ಸರಕಾರಿ ಗುತ್ತಿಗೆಗಳ ಮೂಲಕ ಪರಿಶಿಷ್ಟರಿಗೆ ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸಲು ಅನುವು ಮಾಡಿಕೊಡುವ ಇತರ ಪ್ರಸ್ತಾವಗಳು ಬರಬಹುದು. ಇವೆಲ್ಲ ಶಾಸಕಾಂಗ ಮತ್ತು ಕಾರ್ಯಾಂಗದ ಕೆಲಸ. ವಿಧಾನಮಂಡಲದ ಉಭಯಸದನಗಳಲ್ಲಿ ಈ ಬಗ್ಗೆ ಚರ್ಚೆಯಾಗುವುದು ರಾಜ್ಯಪಾಲರ ಮುಖ್ಯ ಕಾಳಜಿಯಲ್ಲ. ರಾಜ್ಯಪಾಲರ ಹಿಂದಿನ ಹಲವು ರಾಜಕೀಯ-ಪ್ರೇರಿತ ಕ್ರಮಗಳನ್ನು ಗಮನಿಸಿದರೆ ರಾಜ್ಯ ಸರಕಾರದ ಕ್ರಮಗಳಿಗೆ ಅವಕಾಶ ಇರುವಾಗೆಲ್ಲ ತಡೆಗಳನ್ನು ಒಡ್ಡುವುದು ಅವರ ಕಾರ್ಯವೈಖರಿ.

ಮೇ 19ರ ದ.ಕ. ಬಂದ್ ಗೆ ಸಿಪಿಐ(ಎಂ) ಏಕೆ ಬೆಂಬಲಿಸಲಿಲ್ಲ?

ಎತ್ತಿನ ಹೊಳೆ ಯೋಜನೆಯನ್ನು ವಿರೋಧಿಸಿ ಕರೆ ನೀಡಲಾಗಿರುವ ದ.ಕ. ಜಿಲ್ಲಾ ಬಂದ್‌ಗೆ ಭಾರತ ಕಮ್ಯೂನಿಷ್ಟ ಪಕ್ಷ (ಮಾರ್ಕ್ಸ್‌ವಾದಿ) ಬೆಂಬಲ ನೀಡುವುದಿಲ್ಲ ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರೂ ನ್ಯಾಯವಾದಿಗಳೂ ಆದ ಬಿ.ಎಂ.ಭಟ್ ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿ ಹೇಳಿದ್ದಾರೆ.

ಇದು ಜನರನ್ನು ಮೂಲ ಸಮಸ್ಯೆಗಳಿಂದ ದೂರ ಸರಿಸುವ ಪ್ರಯತ್ನವಷ್ಟೇ ಆಗಿದೆ. ಎತ್ತಿನಹೊಳೆ ಯೋಜನೆಗೂ ದ.ಕ. ಜಿಲ್ಲೆಯ ನೀರಿನ ಸಮಸ್ಯೆಗೂ ಯಾವುದೇ ಸಂಬಂಧ ಇಲ್ಲ ಎಂಬ ಸತ್ಯ ಬಂದ್‌ಗೆ ಕರೆ ನೀಡಿದವರಿಗೂ ಸೇರಿದಂತೆ ಎಲ್ಲರಿಗೂ ಗೊತ್ತಿದೆ. ಇಂದು ಕಾಂಗ್ರೆಸ್, ಬಿಜೆಪಿ ಪಕ್ಷಗಳು ಇಲ್ಲಿ ಎತ್ತಿನಹೊಳೆ ಯೋಜನೆಯನ್ನು ವಿರೋದಿಸುತ್ತಾ, ಕೋಲಾರದಲ್ಲಿ ಬೆಂಬಲ ನೀಡುತ್ತಿವೆ. ಇದು ಜಿಲ್ಲೆಗೆ ನಿಜವಾಗಿಯು ಸಮಸ್ಯೆ ಎಂದು ಇಲ್ಲಿ ಹೇಳುವ ಈ ಜಿಲ್ಲೆಯ ಕಾಂಗ್ರೆಸ್, ಬಿಜೆಪಿ ಪಕ್ಷಗಳ ಜನಪ್ರತಿನಿಧಿಗಳು ಲೋಕಸಭೆಯಲ್ಲಾಗಲಿ, ವಿಧಾನ ಸಭೆಯಲ್ಲಾಗಲಿ ತುಟಿಬಿಚ್ಚುವುದಿಲ್ಲ. ಇಂತವರು ಇಲ್ಲಿ ಬಂದ್‌ಗೆ ಬೆಂಬಲ ಘೋಷಿಸಿದರೆ, ಇದಕ್ಕಿಂತ ದೊಡ್ಡ ಹಾಸ್ಯಾಸ್ಪದ ವಿಚಾರ ಬೇರೆ ಸಿಗಲಾರದು.

ಜಿಲ್ಲೆಯಲ್ಲಿ ಈಗ ನೀರಿನ ಸಮಸ್ಯೆ ಉದ್ಭವಿಸಿದೆ. ಸುಮಾರು ಮೂವತ್ತು ವರ್ಷಗಳಿಂದ ಜಿಲ್ಲೆಯ ನೀರಿನ ಫಸಲು ಕಡಿಮೆಯಾಗುತ್ತಾ ಬರುತ್ತಿರುವುದು ನಮಗೆಲ್ಲಾ ಗೊತ್ತಿದೆ. ಈ ಸಮಸ್ಯೆ ಪರಿಹಾರಕ್ಕಾಗಿ ಸಿಪಿಐ(ಎಂ) ಹೋರಾಡುತ್ತಾ ಬಂದಿದ್ದರೂ ಈಗ ಎತ್ತಿನಹೊಳೆಯನ್ನು ವಿರೋದಿಸುವವರ್‍ಯಾರು ಬೆಂಬಲ ನೀಡಿರಲಿಲ್ಲ. ಜಿಲ್ಲೆಯ ಎಲ್ಲಾ ನದಿಗಳಿಗೆ ಕಿಂಡಿ ಅಣೆಕಟ್ಟು ಕಟ್ಟ ಬೇಕು, ಜಿಲ್ಲಾದ್ಯಂತ ಇಂಗು ಗುಂಡಿ ನಿರ್ಮಿಸಿ ನೀರಿಂಗಿಸುವ ಕೆಲಸಗಳಾಗಬೇಕು, ಯಾಂತ್ರಿಕೃತ ಮರಳುಗಾರಿಕೆ ನಿಷೇದಿಸಬೇಕು ಎಂದು ಸಿಪಿಐ(ಎಂ) ಹಲವು ವರ್ಷಗಳಿಂದ ಹೇಳುತ್ತಾ ಬಂದಿದ್ದರೂ, ಜಿಲ್ಲೆಯ ನೀರಿನ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳದ ಜನ ಈಗ ನೀರಿನ ಬರಕ್ಕೆ ಎತ್ತಿನಹೊಳೆ ಕಾರಣ ಎಂದು ಹೇಳಿ ಜನರನ್ನು ದಾರಿ ತಪ್ಪಿಸುತ್ತಿರುವುದು ಸರಿಯಲ್ಲ. ನೈಜ ಸಮಸ್ಯೆಗಳ ಪರಿಹಾರಕ್ಕಾಗಿಯಾಗಲಿ, ಬೀಡಿ ಕಾರ್ಮಿಕರು ಬೀದಿ ಪಾಲು ಮಾಡುವ ಕೋಟ್ಪಾ ಕಾಯ್ದೆಯ ವಿರುದ್ದವಾಗಲಿ, ಕಸ್ತೂರಿ ರಂಗನ್ ವರದಿಯ ವಿರುದ್ದವಾಗಲಿ ಇವರ್‍ಯಾರೂ ಜಿಲ್ಲಾ ಬಂದಿಗೆ ಕರೆ ನೀಡಿಲ್ಲ. ಈಗ ಕೇವಲ ರಾಜಕೀಯ ಲಾಭಕ್ಕಾಗಿ, ಜನರನ್ನು ನೈಜ ಸಮಸ್ಯೆಗಳಿಂದ ದೂರ ಸರಿಸಲು, ಅಕ್ರಮ ಮರಳುಗಾರಿಕೆಯು ನೀರಿನ ಸಮಸ್ಯೆಗೆ ಕಾರಣವಾಗುತ್ತದೆ ಎಂದು ಜನ ಪ್ರತಿಭಟಿಸದಂತೆ ಹಾಗೂ ಎಂ.ಆರ್.ಪಿ.ಯಲ್ ನಂತಹ ಕಂಪೆನಿಗಳು ನೇತ್ರಾವತಿ ನೀರು ಕಬಳಿಸುವುದನ್ನು ಜನ ವಿರೋದಿಸದಂತೆ ಮಾಡಲು ಈ ನಾಟಕ ಆಡಲಾಗುತ್ತಿದೆ.

ಸಾಂಪ್ರದಾಯಿಕ ಹೊಲಗದ್ದೆಗಳು ಈಗ ಇಲ್ಲದಾಗಿದ್ದು ನೀರಿಂಗಿಸುವ ಬಗ್ಗೆ ಬದಲಿ ವ್ಯವಸ್ಥೆ ಮಾಡಬೇಕಾದ ಸರಕಾರ, ಅದಕ್ಕೆ ಬದಲಾಗಿ ಅಕ್ರಮ ಮರಳು ಸಾಗಾಟಕ್ಕೆ ಬೆಂಬಲ ನೀಡುತ್ತಿದೆ. ಸಾಂಪ್ರದಾಯಿಕ ಮರಳುಗಾರಿಕೆ ನಡೆಸುವ ಬದಲು ನದಿ ತೀರದಿಂದ ಪ್ರತಿದಿನ ಸಾವಿರಾರು ಟನ್ ಮರಳನ್ನು ಯಂತ್ರಗಳ ಮೂಲಕ ತೆಗೆದು ಲೂಟಿ ಮಾಡಲಾಗುತ್ತಿದೆ. ಇದು ಜಿಲ್ಲೆಯ ನೀರಿನ ಬರ ಹೆಚ್ಚಲು ಕಾರಣವಾಗಿದ್ದರೂ, ಈ ಮರಳು ಲಾಬಿಯವರ ವಿರುದ್ಧ ಯಾರೂ ಜಿಲ್ಲಾ ಬಂದಿಗೆ ಕರೆ ನೀಡುವುದಿಲ್ಲ. ಈ ಮರಳು ಅಕ್ರಮ ಸಾಗಾಣಿಕೆಯಿಂದ ನೀರಿನ ಬರ ಬರುವುದೆಂದೂ ಕೂಡಾ ಜನ ಗಮನಿಸದೇ ಇರಲು ಎತ್ತಿನಹೊಳೆಯನ್ನು ಜನರ ಶತ್ರುವನ್ನಾಗಿ ಬಿಂಬಿಸಲಾಗುತ್ತಿದೆ.

ಜಿಲ್ಲೆಯ ನೀರಿನ ಬರ ಎತ್ತಿನಹೊಳೆ ಯೋಜನೆ ಜಾರಿಯಾಗುವ ಮೊದಲೇ ಇತ್ತು ಹಾಗೂ ಈಗ ಎದುರಾಗಿರುವ ಬರ ಎತ್ತಿನಹೊಳೆಗೆ ಸಂಬಂದಿಸಿರದ ಜಿಲ್ಲೆಗಳಲ್ಲೂ ಇದೆ. ದ.ಕ. ಜಿಲ್ಲೆ ಹಿಂದೆ ಗದ್ದೆ ಬೇಸಾಯಗಳಿಂದ ಕಂಗೊಳಿಸುತ್ತಿದ್ದು, ಬಿದ್ದ ಮಳೆಯ ನೀರು ಕೂಡಾ ಭೂಮಿಯ ಒಳಗೆ ಇಂಗುತ್ತಿತ್ತು. ಆದರೆ ಜಿಲ್ಲೆಯಲ್ಲಿ ಭತ್ತದ ಬೇಸಾಯ ಲಾಭದಾಯಕವಲ್ಲದ ಕಾರಣ ಅನಿವಾರ್ಯವಾಗಿ ಅಡಿಕೆ, ರಬ್ಬರ್ ಬೆಳೆಗಳಿಗೆ ಶರಣಾಗಿ ಹೊಲಗದ್ದೆಗಳೆಲ್ಲಾ ನಾಶವಾಯಿತು. ಇದರಿಂದ ಜಿಲ್ಲೆಯ ಜನ ಆರ್ಥಿಕವಾಗಿ ಸಬಲರಾದರೂ ನೀರಿಗೆ ಬರ ಬರತೊಡಗಿತು. ಇದರಿಂದ ಮಳೆ ನೀರೆಲ್ಲಾ ಸಮುದ್ರ ಪಾಲಾಗುವಂತಾಯಿತು. ಇಂತಹ ಸಮಯ ಜಿಲ್ಲೆಯ ನೀರಿನ ಒಸರು ಹೆಚ್ಚಲು ಕ್ರಮ ಕೈಗೊಳ್ಳಲು ಒತ್ತಾಯಿಸಿ ಯಾರೂ ಜಿಲ್ಲಾ ಬಂದ್‌ಗೆ ಕರೆ ನೀಡಿರಲಿಲ್ಲ ಯಾಕೆ? ನೀರಿಗಾಗಿ ಸಿಪಿಐ(ಎಂ) ಹೋರಾಡುತ್ತಾ ಇರುವುದನ್ನೂ ಬೆಂಬಲಿಸಲಿಲ್ಲ ಯಾಕೆ? ನದಿಯನ್ನೇ ಖಾಸಗೀ ಕರಣ ಮಾಡಲು ಹೊರಟಾಗ ಹೋರಾಡಿ ಲಾಠಿ ಏಟು, ಜೈಲು ವಾಸ ಅನುಭವಿಸಿದ್ದು, ಸಿಪಿಐ(ಎಂ) ಪಕ್ಷದ ಸದಸ್ಯರು ಮಾತ್ರ ಎಂಬುದು ಜಿಲ್ಲೆಯ ಚರಿತ್ರೆ.

ಈ ಎಲ್ಲಾ ನೈಜ ಸಮಸ್ಯೆಗಳನ್ನು ಬದಿಗೊತ್ತಿ ಎತ್ತಿನಹೊಳೆ ಯೋಜನೆಯನ್ನು ಜನರ ಶತ್ರುವನ್ನಾಗಿ ಮಾಡಿ ರಾಜಕೀಯ ನಡೆಸುವುದನ್ನು ಸಿಪಿಐ(ಎಂ) ಖಂಡಿಸುತ್ತದೆ. ಜನರು ಇದನ್ನು ಅರ್ಥ ಮಾಡಿಕೊಂಡು ಜಿಲ್ಲೆಯ ಉಳಿವಿಗೆ ಸಿಪಿಐ(ಎಂ) ದಾರಿಯನ್ನು ಅನುಸರಿಸಿದರೆ ಉತ್ತಮ. ಜನ ಈ ನೀರಿನ ಸಮಸ್ಯೆಗಳ ವಿರುದ್ದ ಸರಕಾರ ನಡೆಸುವ ಪಕ್ಷಗಳ ವಿರುದ್ದ ಹೋರಾಡದೆ ಇರಲು, ರಾಜಕೀಯೇತರವಾಗಿ ಹೋರಾಡಿ ತಮ್ಮ ಅಸ್ತಿತ್ವವನ್ನು ಉಳಿಸುವ ಹತಾಶ ಪ್ರಯತ್ನವೇ ಎತ್ತಿನಹೊಳೆ 'ವಿರೋಧಿ ಹೇಳಿಕೆಗಳು ಮತ್ತು

ಪುಟ 4 ಕ್ಕೆ

ಶಕ್ತಿನಗರ ಚಲೋ
ನಿವೇಶನ ರಹಿತರಿಂದ ಕಾದಿರಿಸಿದ ನಿವೇಶನದಲ್ಲಿ ವಾಸ್ತವ್ಯ:

ವಾಸುದೇವ ಉಚ್ಚಿಲ





ಮಂಗಳೂರು ನಗರದ ನಿವೇಶನ ರಹಿತರು ಹೋರಾಟ ಸಮಿತಿಯ ನೇತೃತ್ವದಲ್ಲಿ ಮಹಾನಗರ ಪಾಲಿಕೆ ಕಾದಿರಿಸಿದ 4 ಎಕ್ರೆ ನಿವೇಶನದಲ್ಲಿ ಒಂದು ದಿನ ವಾಸ್ತವ್ಯ ಹೂಡಿದರು. ಪಾಲಿಕೆ ಅಧಿಕಾರಿಗಳು ಬಂದು ಭರವಸೆ ಕೊಡುವವರೆಗೂ ಜಾಗ ಬಿಟ್ಟು ಕದಲಿಲ್ಲ. ಈ 'ಶಕ್ತಿನಗರ ಚಲೋ' ಹೋರಾಟ ನಡೆದುದು ಮೇ 16 ರಂದು. ನಗರದ ಮೂಲೆ ಮೂಲೆಗಳ ಅರ್ಜಿದಾರರು ನಂತೂರಿನಲ್ಲಿ ಒಟ್ಟುಗೂಡಿ 2 ಕಿ.ಮೀ.ದೂರದ ಶಕ್ತಿನಗರದ ರಾಜೀವ ನಗರ ಎಂಬಲ್ಲಿರುವ ಕಾದಿರಿಸಿದ ನಿವೇಶನದಲ್ಲಿ ಬೆಳಗ್ಗಿನಿಂದ ಸಂಜೆಯವರೆಗೆ ಕುಳಿತೇ ಬಿಟ್ಟರು. 650 ಮಂದಿ ಭಾಗವಹಿಸಿದ ಈ ಕಾರ್ಯಕ್ರಮದಲ್ಲಿ 90% ಮಹಿಳೆಯರೇ ಇದ್ದರು. ಕೆಲವರು ಹಿರಿಯ ನಾಗರಿಕರೂ ಇದ್ದರು. ಆದಾಗ್ಯೂ ತಮಗೆ ಮುಂದೆ ಲಭಿಸಲಿರುವ ಭೂಮಿಯನ್ನು ನೋಡಲು ಹಾಗೂ ಅದನ್ನು ಪಡೆದೇ ಪಡೆಯುವೆವೆಂಬ ಹಟದಿಂದ ಅಷ್ಟೂ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಏರುತಗ್ಗುಗಳಿಂದಲೂ ಎತ್ತರದ ಮರಗಳಿಂದಲೂ ಕೂಡಿದ ಈ ಜಾಗದಲ್ಲಿ ಒಂದು ಫ್ಲಾಟ್‌ಫಾರಂ ಹಾಕಲಾಗಿತ್ತು. ಪಕ್ಕದ ಒಂದು ಮನೆಯಲ್ಲಿ ಒಲೆ ಹಾಕಿ ಅಷ್ಟೂ ಮಂದಿ ಮಧ್ಯಾಹ್ನ ಗಂಜಿ ಚಟ್ನಿ ಉಣ್ಣುವ ವ್ಯವಸ್ಥೆ ಮಾಡಲಾಗಿತ್ತು. ಸಾಯಂಕಾಲ 4 ಗಂಟೆಗೆ ಚಹಾ ಕೂಡಾ ಇತ್ತು. ಪೋಲೀಸರು ವಾಹನದಲ್ಲಿ ಆಗೀಗೆ ಆ ದಾರಿಯಲ್ಲಿ ಸುತ್ತು ಹಾಕಿದರೂ ಸಂಜೆ ಐದಾದರೂ ಪಾಲಿಕೆ ಅಧಿಕಾರಿಗಳು ಬರಲೇ ಇಲ್ಲ.

ವೇದಿಕೆಯಲ್ಲಿ ಸಿಪಿಐ(ಎಂ) ಪಕ್ಷದ ಮುಖಂಡರು ಮಂಗಳೂರು ನಗರ ನಿವೇಶನ ರಹಿತರ ಹೋರಾಟದ ಮುಂದಾಳುಗಳೂ ಕುಳಿತಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಎಸ್.ವರಲಕ್ಷ್ಮಿ ವಾಸ್ತವ್ಯ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು.

ಕೆಲವಾರು ವರ್ಷಗಳ ಹಿಂದೆ ಭೂಸುಧಾರಣಾ ಕಾನೂನು ಜಾರಿಯಾದಾಗ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ದ.ಕ.ಜಿಲ್ಲೆಯಲ್ಲಿ ಭೂಮಿಯ ಪ್ರಶ್ನೆ ಅಷ್ಟಾಗಿ ಇರಲಿಲ್ಲ. ಆದರೆ ಭೂಮಿ ಪಡೆದ ಕುಟುಂಬಗಳು ವಿಭಜನೆಯಾಗುತ್ತಾ ಹೋದಂತೆ ಗ್ರಾಮ ನಗರಗಳೆಲ್ಲೆಡೆ ವಾಸದ ಮನೆಯ ಭೂಮಿಯ ಕೊರತೆಯುಳ್ಳ ಕುಟುಂಬಗಳು ಹೆಚ್ಚುತ್ತಿದೆ. ಈ ಕಾರಣದಿಂದ ಸಿಪಿಐ(ಎಂ) ಪಕ್ಷ ದ.ಕ.ಜಿಲ್ಲೆಯಲ್ಲೂ ಮನೆ ಹಾಗೂ ಮನೆ ನಿವೇಶನಕ್ಕಾಗಿ ಜನತೆ ಮಾಡುವ ಹೋರಾಟಕ್ಕೆ ನೇತೃತ್ವ ನೀಡುತ್ತಿದೆ ಎಂದು ಎಸ್. ವರಲಕ್ಷ್ಮಿ ತಿಳಿಸಿದರು.

ಕರ್ನಾಟಕ ರಾಜ್ಯದಲ್ಲಿ ಇರುವ 1.42 ಕೋಟಿ ಕುಟುಂಬಗಳಲ್ಲಿ 13 ಲಕ್ಷ ಕುಟುಂಬಕ್ಕೆ ಮನೆ ನಿವೇಶನ ಇಲ್ಲ. ಇಡೀ ರಾಜ್ಯದಲ್ಲಿ 5 ಲಕ್ಷ ನಿವೇಶನ ರಹಿತರಿಂದ ರಾಜ್ಯ ಸರಕಾರಕ್ಕೆ ಸಿಪಿಐ(ಎಂ) ನೇತೃತ್ವದಲ್ಲಿ ನಿವೇಶನಕ್ಕಾಗಿ ಅರ್ಜಿ ಹಾಕಲಾಗಿದೆ. ಅದರಲ್ಲಿ 5% ಅರ್ಜಿದಾರರಿಗೂ ಮನೆ ಹಾಗೂ ಮನೆ ನಿವೇಶನ ಕೊಡಿಸಲು ಸರಕಾರಕ್ಕೆ ಸಾಧ್ಯವಾಗಿಲ್ಲ. ನಿವೇಶನ ಎಲ್ಲರಿಗೂ ಕೊಡಿಸಿದರೆ ಕೊಡಿಸಿದ ಗೌರವ ಸಿಪಿಐ(ಎಂ)ಗೆ ಹೋದೀತು ಎಂಬ ಭಯದಿಂದ ರಾಜ್ಯದ ಕಾಂಗ್ರೆಸ್ ಸರಕಾರ ಭೂಮಿ ಹಂಚುತ್ತಲೇ ಇಲ್ಲ ಎಂದವರು ಟೀಕಿಸಿದರು.

ತಾನು ಭೇಟಿ ನೀಡಿದ ಕಮ್ಯೂನಿಸ್ಟ್ ಚೀನಾದಲ್ಲಿ ಎಲ್ಲ ಕುಟುಂಬಗಳಿಗೂ ಮನೆ ನೀಡಲಾಗಿದೆ. ನಮ್ಮ ದೇಶದಲ್ಲಿ ಯಾಕೆ ಸಾಧ್ಯವಿಲ್ಲ? ಹೆಣ್ಣು ಮಕ್ಕಳು ಹೋರಾಟಕ್ಕೆ ಇಳಿದಲ್ಲೆಲ್ಲಾ ಯಶಸ್ವಿಯಾದ ಚರಿತ್ರೆ ಇದೆ. ಬೀಡಿ ಕಾರ್ಮಿಕ ಮಹಿಳೆಯರು, ಇತ್ತೀಚೆಗೆ ಬೆಂಗಳೂರಿನ ಗಾರ್ಮೆಂಟ್ ಕಾರ್ಮಿಕರ ಹೋರಾಟದಿಂದ ಪ್ರಾವಿಡೆಂಟ್ ಸಂಬಂಧವಾಗಿ ದೇಶದ 42 ಕೋಟಿ ನಾಗರಿಕರಿಗೆ ಪ್ರಯೋಜನವಾಗಿದೆ. ಮನೆ ನಿವೇಶನಗಳ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದರ ಮೂಲಕ ಮನೆ ನಿವೇಶನ ಪಡೆದೇ ಪಡೆಯುವೆವು ಎಂದು ಎಸ್.ವರಲಕ್ಷ್ಮಿ ಭರವಸೆ ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಈ ದಿನ ಪತ್ರಿಕೆಯಲ್ಲಿ ನಿವೇಶನ ರಹಿತರನ್ನು ಹಾದಿ ತಪ್ಪಿಸುವ ಹೇಳಿಕೆ ನೀಡಿದ ಶಾಸಕ ಜೆ.ಆರ್.ಲೋಬೋ ಅವರನ್ನು ಟೀಕಿಸಿದರು. ಶಕ್ತಿನಗರದ ಜಾಗದ ಬಗ್ಗೆ ಕ್ಲಿಯರೆನ್ಸ್ ಆಗುವುದು ವಿಳಂಬವಾಗಲಿದೆ ಎಂಬ ಹೇಳಿಕೆಯನ್ನು ಶಾಸಕರು ಬೇಕೆಂದೇ ಈ ದಿನ ಕೊಟ್ಟಿದ್ದರು. ಬಹುಶ ಈ ಜಾಗವನ್ನು ಯಾರೋ ಉದ್ಯಮಿಗಳಿಗೆ ಹಸ್ತಾಂತರಿಸುವ ಹುನ್ನಾರ ಇರಬೇಕು ಎಂದು ಸಂಶಯ ವಸಂತ ಆಚಾರಿ ವ್ಯಕ್ತಪಡಿಸಿದರು.

ನಂತೂರಿನಿಂದ ಜಾಥಾ ಹೊರಟಾಗ ನಿವೇಶನ ರಹಿತರ ಹೋರಾಟ ಸಮಿತಿಯ ಅಧ್ಯಕ್ಷ ಪ್ರೇಮನಾಥ ಜಲ್ಲಿಗುಡ್ಡೆ ಹಾಗೂ ಇತರ ಮುಖಂಡರು ಇದ್ದರು. ವಾಸ್ತವ್ಯ ಧರಣಿಯ ಸಭೆಯಲ್ಲಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿಯ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಉತ್ತರ ಸಮಿತಿಯ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ, ಹೋರಾಟ ಸಮಿತಿಯ ಕಾರ್ಯದರ್ಶಿ ಸಂತೋಷ್ ಶಕ್ತಿನಗರ, ಖಜಾಂಚಿ ಪ್ರಭಾವತಿ ಬೋಳೂರು, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಜಯಂತಿ ಶೆಟ್ಟಿ, ವಾಸುದೇವ ಉಚ್ಚಿಲ, ಯೋಗೀಶ್ ಜಪ್ಪಿನಮೊಗರು ಮತ್ತು ಸಿಪಿಐ(ಎಂ) ನಗರ ಸಮಿತಿ ಸದಸ್ಯರು ಇದ್ದರು.

ಸಾಯಂಕಾಲದವರೆಗೂ ಪಾಲಿಕೆ ಅಧಿಕಾರಿಗಳು ಬಾರದಿದ್ದಾಗ ರಾತ್ರಿ ಯಾರು ಅಲ್ಲೇ ವಾಸ್ತವ್ಯ ಮಾಡಲು ಸಿದ್ಧ ಎಂದು ಸಭೆಯನ್ನು ಪ್ರಶ್ನಿಸಿದಾಗ 200 ಮಂದಿ ವಾಸ್ತವ್ಯ ಹೂಡಲು ಸಿದ್ಧರಿದ್ದರು. ಆದರೆ ಐದೂವರೆ ಗಂಟೆಯಾದಾಗ ಅಧಿಕಾರಿಗಳೊಬ್ಬರು ಸತ್ಯಾಗ್ರಹ ಸ್ಥಳಕ್ಕೆ ಹಾಜರಾಗಿ ಸಮಿತಿ ಮುಖಂಡರೊಂದಿಗೆ ಮಾತುಕತೆ ನಡೆಸಿ ಪಾಲಿಕೆಯಿಂದ ನಿವೇಶನ ಅರ್ಜಿಗಳ ಪರಿಶೀಲನೆ, ಕ್ರೋಢೀಕರಣ ನಡೆಯುತ್ತಿದ್ದು, ಸದ್ರಿ ಧರಣಿ ಹೂಡಿರುವ ನಿವೇಶನದಲ್ಲಿ ಜಿ ಪ್ಲಸ್ ಟು ಮಾದರಿಯಲ್ಲಿ ವಸತಿಗೃಹ ರಚನೆಗೆ ಪಾಲಿಕೆಯಿಂದ ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಹೋಗಿರುವುದಾಗಿ ತಿಳಿಸಿ, ದಾಖಲೆಯನ್ನು ತೋರಿಸಿದರು. 3 ತಿಂಗಳೊಳಗಾಗಿ ಮುಂದಿನ ಕ್ರಮ ಕೈಗೊಳ್ಳದಿದ್ದಲ್ಲಿ ತೀವ್ರ ಥರದ ಹೋರಾಟ ಶಾಸಕರು, ಸಚಿವರ ಮನೆ ಮುಂದೆ ನಡೆಸುವುದಾಗಿ ಹೋರಾಟಗಾರರು ಎಚ್ಚರಿಸಿ ಅಧಿಕಾರಿಗಳನ್ನು ಕಳುಹಿಸಿಕೊಟ್ಟರು.

ತೀವ್ರ ಥರದ ಹೋರಾಟವನ್ನು ಮುಂದುವರಿಸಲು ನಿವೇಶನ ರಹಿತರು ಧರಣಿಯ ಕೊನೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದರೊಂದಿಗೆ ವಾಸ್ತವ್ಯ ಧರಣಿಯನ್ನು ಕೊನೆಗೊಳಿಸಲಾಯಿತು. ಕಾದಿರಿಸಿದ ನಿವೇಶನಕ್ಕೆ ಭೇಟಿಯಿತ್ತು ಸತ್ಯಾಗ್ರಹದಲ್ಲಿ ಭಾಗವಹಿಸಿರುವುದು ನಿವೇಶನ ರಹಿತರಿಗೆ ಹೋರಾಟಕ್ಕೆ ಹೆಚ್ಚಿನ ಸ್ಫೂರ್ತಿ ನೀಡಿದೆ.

ಮೇ 19ರ ದ.ಕ. ಬಂದ್ ಗೆ ಸಿಪಿಐ(ಎಂ) .... ಪುಟ 3 ರಿಂದ

ಹೋರಾಟಗಳು. ಸರಕಾರದ ಜನ–ವಿರೋಧಿ ಆಡಳಿತದಿಂದ ಸರಕಾರದ ವಿರುದ್ದ ಜನರ ರೋಷ ಉಕ್ಕಿ ಹೋರಾಡದಂತೆ ತಡೆಯಲು, ಹಿಂದುಗಳ ಅಭಿವೃದ್ದಿ ಆಗದಿರಲು ಮುಸ್ಲಿಮರು ಕಾರಣ ಎಂದು ಬಿಂಬಿಸಿ ಕೋಮುಗಲಭೆ ಬೆಳೆಸಿದಂತೆ, ಇದನ್ನು ಕೂಡಾ ಭಾವನಾತ್ಮಕ ವಿಚಾರವನ್ನಾಗಿಸಿ ಜನ ನೈಜ ಸಮಸ್ಯೆಗಳ ವಿರುದ್ದ ಹೋರಾಡದಂತೆ ಮಾಡುವುದಷ್ಟೇ ಈ ಜಿಲ್ಲಾ ಬಂದಿನ ಉದ್ದೇಶವಾಗುತ್ತದಷ್ಟೇ.

ನಾವು ಇಂದು ಜಿಲ್ಲೆಯ ಜನರ ಬದುಕನ್ನು ಉಳಿಸುವತ್ತ ಗಮನ ನಿಡಬೇಕಾಗಿದೆ. ಬೀಡಿ ಉದ್ಯಮ ಉಳಿಸಲು, ಕಸ್ತೂರಿ ರಂಗನ್ ವರದಿ ತಿರಸ್ಕರಿಸಲು, ಮಳೆ ನೀರನ್ನು ನೀರಿಂಗಿಸಲು, ಅಕ್ರಮ ಮರಳುಗಾರಿಕೆ ತಡೆಯಲು, ಕಿಂಡಿ ಅಣಕಟ್ಟು ನಿರ್ಮಿಸಲು ಹೋರಾಡಿ ಜನರ ಬದುಕನ್ನು ಉಳಿಸಿದರೆ ಈ ಜಿಲ್ಲೆಯು ಜೀವಂತ ಇರುತ್ತದೆ. ಈ ರೈತ ಕಾರ್ಮಿಕರನ್ನು ಉಳಿಸಿದರೆ ಮಾತ್ರ ಹಿಂದು ಧರ್ಮ ಎನ್ನಲು, ಮುಸ್ಲಿಂ ಧರ್ಮ ಎನ್ನಲು, ಕ್ರಿಶ್ಚಿಯನ್ ಧರ್ಮ ಎನ್ನಲು, ಆ ಜಾತಿ, ಈ ಜಾತಿ ಎನ್ನಲು ಜನ ಇರುತ್ತಾರೆ. ಜನರ ಬದು–ಕಿಗೆ ಗಮನ ನೀಡಿದರೆ ಮಾತ್ರ ಎಲ್ಲವು ಉಳಿಯಲು ಸಾದ್ಯ. ಧರ್ಮೋದ್ಧಾರಕರು, ನದಿ ಉಳಿಸೋರು, ಪ್ರತ್ಯೇಕ ರಾಜ್ಯ ಕಟ್ಟುತ್ತೇವೆ ಎನ್ನೋರು ಮೊದಲು ಮನುಷ್ಯರನ್ನು ಉಳಿಸುವ, ನೆಮ್ಮದಿ ಜೀವನ ದೊರಕಿಸುವ ಕಡೆ ಗಮನ ನೀಡಬೇಕಾಗಿದೆ. ಟಾಟಾ ಬಿರ್ಲಾರಿಗೆ ಕಷ್ಟ ಬಂದಿದೆ ಎಂದು ಸಂಕಟ ಪಡುವ ರಾಜಕಾರಣಿಗಳಿಗೆ ಎಲ್ಲರನ್ನು ಬದುಕುಳಿಯುವಂತೆ ಮಾಡುವ ನಡೆದಾಡುವ ದೇವರು ಅನ್ನದಾತನಾದ ರೈತರ ಸಂಕಷ್ಟಗಳು ಅರ್ಥವಾಗುವುದೇ ಇಲ್ಲವಲ್ಲ. ಟಾಟಾ ಉತ್ಪಾದಿಸುವ ಸೊತ್ತುಗಳಿಲ್ಲದಿದ್ದರೂ ಬದುಕಬಹುದು, ರೈತ ಉತ್ಪಾದಿಸುವ ಅನ್ನ ಇಲ್ಲದಿದ್ದರೆ ಬದುಕಲಾರೆವು ತಿಳಿಯಿರಿ.

ಸಿಪಿಐ(ಎಂ) ಪಕ್ಷವು ಜಿಲ್ಲೆಯ ನೀರಿನ ಸಮಸ್ಯ ಪರಿಹರಕ್ಕಾಗಿ, ಹೋರಾಟ ಮುಂದುವರಿಸಲಿದೆ. ಜಿಲ್ಲೆಯ ಎಲ್ಲಾ ನದಿಗಳಿಗೂ ಕಿಂಡಿ ಅಣ–ಕಟ್ಟು ಕಟ್ಟಲು ಒತ್ತಾಯಿಸಿ, ಜಿಲ್ಲಾದ್ಯಂತ ಇಂಗು ಗುಂಡಿ ನಿರ್ಮಿಸಿ ನೀರಿಂಗಿಸಲು ಆಗ್ರಹಿಸಿ, ಅಕ್ರಮ ಮರಳುಗಾರಿಕೆಯನ್ನು ವಿರೋದಿಸಿ, ದ.ಕ.ಜಿಲ್ಲೆಯನ್ನು ಹಸಿರು ಜಿಲ್ಲೆಯನ್ನಾಗಿಸಲು ಮಾಡಬೇಕಾದ ಅಗತ್ಯ ಕೆಲಸಗಳಿಗಾಗಿ ಒತ್ತಾಯಿಸಿ ಸಿಪಿಐ(ಎಂ) ಹೋರಾಟವನ್ನು ತೀವ್ರರೀತಿಯಲ್ಲಿ ಮುನ್ನಡೆಸಲಿದೆ. ಜಿಲ್ಲೆಯ ಜನ ಈ ಹೋರಾಟವನ್ನು ಬೆಂಬಲಿಸಿ ಜಿಲ್ಲೆಯ ಉಳಿವಿಗೆ ನೈಜ ಹೋರಾಟದತ್ತ ಸಾಗಬೇಕೆಂದು ಬಿ.ಎಂ.ಭಟ್ ಜಿಲ್ಲೆಯ ಜನತೆಯನ್ನು ವಿನಂತಿಸಿದ್ದಾರೆ. ರೈತರ ಭೂಮಿಯ ಪ್ರಶ್ನೆ, ಹಾಗೂ ರೈತರ ಬದುಕಿನ ರಕ್ಷಣೆಗಾಗಿ, ಬೀಡಿ ಕಾರ್ಮಿಕರ ಬದುಕಿನ ಉಳಿವಿಗಾಗಿ ಹೋರಾಡುತ್ತಿರುವ ಸಿಪಿಐ(ಎಂ)ಗೆ ಜಿಲ್ಲೆಯ ಭವಿಷ್ಯದ ಬಗ್ಗೆಯೂ ಕಾಳಜಿ ಇದೆ. ಅದು ಸರಿಯಾದ ದಾರಿಯಲ್ಲಿ ಸಾಗಿ ಸರಿಯಾದ ಪರಿಹಾರ ಕಂಡುಕೊಳ್ಳುವುದಾಗಿದೆ.

ಈ ವಾರ ಚರಿತ್ರೆಯಲ್ಲಿ

19 ಮೇ 1985

ಪಿ. ಸುಂದರಯ್ಯ ನಿಧನರಾದ ದಿನ

ಪಿ. ಸುಂದರಯ್ಯ 1946–51ರ ವೀರ ತೆಲಂಗಾಣ ಸಶಸ್ತ್ರ ರೈತ ಹೋರಾಟದ ಅಪ್ರತಿಮ ನಾಯಕ. ಭಾರತದ ಕ್ರಾಂತಿಕಾರಿ ಮತ್ತು ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕ ನಾಯಕರಲ್ಲಿ ಒಬ್ಬರು. ಅವಿಭಜಿತ ಕಮ್ಯುನಿಸ್ಟ್ ಪಕ್ಷದ ವರ್ಗ–ಸಹಕಾರ ಮತ್ತು ಪರಿಷ್ಕರಣವಾದಿ ನೀತಿಗಳ ವಿರುದ್ಧ ಸಿಡಿದೆದ್ದು ಹೊರ ಬಂದು ಸಿಪಿಐ(ಎಂ) ಸ್ಥಾಪಿಸಿದ 30 ಸ್ಥಾಪಕ ನಾಯಕರಲ್ಲಿ ಒಬ್ಬರು. ಈಗ ದೇಶದ ಅತಿ ದೊಡ್ಡ ಕಮ್ಯುನಿಸ್ಟ್ ಪಕ್ಷವಾದ ಸಿಪಿಐ(ಎಂ) ನ ಸ್ಥಾಪಕ ನಾಯಕ. ಅದರ ಮೊದಲ 'ನವರತ್ನ' ಪೊಲಿಟ್ ಬ್ಯುರೊ ಸದಸ್ಯರಲ್ಲಿ ಒಬ್ಬರು. 1964–1978 ಅವಧಿಯ ದೀರ್ಘ ಕಾಲ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾಗಿದ್ದು ಪಕ್ಷವನ್ನು ಕಟ್ಟಿ ಬೆಳೆಸಿದವರು.



ಕಳಸಾ ತಡೆಗೋಡೆ ಧ್ವಂಸದ ಸುದ್ದಿ: ಹೋರಾಟದ ದಿಕ್ಕು ತಪ್ಪಿಸುವ ಹುನ್ನಾರ

ಬಿಜೆಪಿ ಮುಖಂಡ ಗೀರಿಷ ಮಟ್ಟೆಣ್ಣವರ ಹಾಗೂ ಅವರ ಸಂಗಡಿಗರು ನ್ಯಾಯಾಧೀಕರಣದ ಆದೇಶದಂತೆ ಕಳಸಾ ಹಳ್ಳಕ್ಕೆ ನಿರ್ಮಿಸಲಾಗಿರುವ ತಡೆಗೊಡೆಯನ್ನು ಧ್ವಂಸ ಮಾಡಿದ ಸುದ್ಧಿ ಮಾದ್ಯಮದಲ್ಲಿ ಪ್ರಕಟವಾಗಿದೆ. ಅದನ್ನು ಕರ್ನಾಟಕ ಪ್ರಾಂತ ರೈತ ಸಂಘ **(KPRS)** ಧಾರವಾಡ ಜಿಲ್ಲಾ ಸಮಿತಿ ಹೇಳಿಕೆಯೊಂದರಲ್ಲಿ ಖಂಡಿಸಿದೆ.

ಇಂತಹ ದುಸ್ಸಾಹಸದ ಕೃತ್ಯ ಕಳೆದ ಹತ್ತು ತಿಂಗಳಿಂದ ನಡೆಯುತ್ತಿರುವ ಜನಚಳುವಳಿಯನ್ನು ಧಿಕ್ಕುತಪ್ಪಿಸಲಿದ್ದು ಹಾಗೂ ಹೋರಾಟಕ್ಕೆ ಹಿನ್ನಡೆಯಾಗಲಿದೆ. ಇದೊಂದು ನ್ಯಾಯಾಂಗದ ಆದೇಶದ ಉಲ್ಲಂಘನೆಯಾಗಲಿದ್ದು ನ್ಯಾಯಾಧೀಕರಣದಲ್ಲಿ ಕರ್ನಾಟಕ ರಾಜ್ಯ–ಕ್ಕೆ ಅನ್ಯಾಯವಾಗುವ ಎಲ್ಲ ಸಾಧ್ಯತೆಗಳಿವೆ ಹಾಗೂ ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಮತ್ತೆ ಕ್ಯಾತೆ ತೆಗೆಯಲು ಈ ಕೃತ್ಯ ಅನುವುಮಾಡಿಕೊಡಲಿದೆ. ಎಂದು ಹೇಳಿಕೆಯಲ್ಲಿ ತಿಳಿಸಲಾಗಿದ.

ಯಾವುದೇ ಜನಪರ ಹೋರಾಟಗಳು ಒಂದು ತಾರ್ಕಿಕ ಅಂತ್ಯ ಕಾಣಬೇಕೆಂಬುದು ಎಲ್ಲರ ಆಶಯವಾಗಬೇಕು, ಯಾರೇ ಹೋರಾಟ ನಡೆಸಿದರು ಆ ನಿಟ್ಟಿನಲ್ಲಿ ಚಿಂತನೆ ಮಾಡಬೇಕು. ಒಟ್ಟು ಈ ಜಲ ಚಳುವಳಿಯಲ್ಲಿ ಪ್ರಧಾನಮಂತ್ರಿಗಳು ಮಧ್ಯಪ್ರವೇಶ ಮಾಡಬೇಕೆಂಬ ಚಳುವಳಿಗಾರರ ಬೇಡಿಕೆಗೆ ತೀಲಾಂಜಲಿ ನೀಡಲಾಗಿದೆ. ಇದರಿಂದ ಚಳುವಳಿಗಾರರ ಅಕ್ರೋಶ ಬಿಜೆಪಿ ಧುರೀಣರ ಕಡೆಗೆ ತಿರುಗಿದೆ. ತಮ್ಮ ಮೇಲಿರುವ ಅಕ್ರೋಶವನ್ನು ಬೇ–ರೆಡೆ ತಿರುಗಿಸಲು ಬಿಜೆಪಿ ಧುರಿಣರೇ ಈ ದುಸ್ಸಾಹಸ ನಡೆಸಲು ಕುಮ್ಮಕ್ಕು ನೀಡಿರುವ ಬಗ್ಗೆ ಹೇಳಿಕೆ ಸಂಶಯ ವ್ಯಕ್ತಪಡಿಸಿದೆ.

"ಗುಂಡಾರ್ಲಹಳ್ಳಿ ದಲಿತರಿಂದ ಡಿ.ಹೆಚ್.ಎಸ್. ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಬೇಟಿ"

ಪಾವಗಡ ತಾಲ್ಲೂಕಿನ ಗುಂಡಾರ್ಲಹಳ್ಳಿ ಗ್ರಾಮದ ದಲಿತ ಕಾಲೋನಿಯ ಸ್ಮಶಾನಕ್ಕೆ ಭೂಮಿ ನೀಡುವಂತೆ ಒತ್ತಾಯಿಸಿ ದಿನಾಂಕ:13–05–2016 ರಂದು ಡಿ.ಹೆಚ್.ಎಸ್. ರಾಜ್ಯಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಸಮಿತಿಯ ಸಂಚಾಲಕರಾದ ಗೋಪಾಲಕೃಷ್ಣ ಅರೋವಳ್ಳಿ, ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ, ಈ. ಶಿವಣ್ಣ, ಜೂನಿ ಮತ್ತು ಗ್ರಾಮಸ್ಥರಾದ ದುರ್ಗಪ್ಪ, ತಿಪ್ಪೇಸ್ವಾಮಿ, ಕುಮಾರ್, ರಮೇಶ್ ಮುಂತಾದವರು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡುತ್ತಾ ಗುಂಡಾರ್ಲಹಳ್ಳಿ ಗ್ರಾಮದ ದಲಿತರಿಗೆ ಆಗಿರುವ ಸಮಸ್ಯೆ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ದಲಿತ ಕಾಲೋನಿಗೆ ಸೇರಿದ ಸ್ಮಶಾನ ಭೂಮಿಯು ಸರ್ವೆ ನಂ.104 ವಿಸ್ತೀರ್ಣ 1 ಎಕ್ಟೇರ್, 10 ಗುಂ–ಟೆ ಈ ಜಾಗದಲ್ಲಿ ಸುಮಾರು 30 ವರ್ಷಗಳಿಂದ ದಲಿತರು ಶವಸಂಸ್ಕಾರ ಮಾಡಿಕೊಂಡು ಬಂದಿದ್ದಾರೆ. ಆದರೆ ಮೇಲ್ವರ್ಗದವರು ಇತ್ತೀಚೆಗೆ ಅಲ್ಲಿದ್ದಂತಹ ಎಲ್ಲಾ ಗೋರಿಗಳನ್ನು ನೆಲಸಮ ಮಾಡಿ ಅತಿಕ್ರಮಿಸಿಕೊಂಡು ಇದು ತಮಗೆ ಸೇರಿದ ಜಾಗ ಎಂದು ದಲಿತರ ಮೇಲೆ ಹಲ್ಲೆ ನಡೆಸಿದ್ದಾರೆ. ಇದಾದ ನಂತರ ಹನುಮಂತರಾಯಪ್ಪ ಎಂಬವರು ಮರಣ ಹೊಂದಿದ ಸಂದರ್ಭದಲ್ಲಿ ಶವವನ್ನು ಈ ಜಾಗದಲ್ಲಿ ಹೂಳಬಾರದು ಎಂದು ತಡೆದು ಹಲ್ಲೆ ನಡೆಸಿರುತ್ತಾರೆ. ಇದನ್ನು ವಿರೋಧಿಸಿ ದಲಿತರು ಸುಮಾರು 2 ದಿನಗಳ ಕಾಲ ರಸ್ತೆ ತಡೆ ನಡೆಸಿ ಹೋರಾಟ ನಡೆಸಿರುತ್ತಾರೆ. ಶವ ಹೂಳಲು ಜಾಗ ನೀಡದೇ ಇರುವುದರಿಂದ ನೊಂದ ಹನುಮಂತರಾಯಪ್ಪ ಕುಟುಂಬವು ಹಳ್ಳದಲ್ಲಿ ಶವವನ್ನು ಊಳಿ ಮಳೆ ಬಂದರೆ ಕೊಚ್ಚಿ ಹೋಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ನಂತರ ಆಗಮಿಸಿದ ತಾಲ್ಲೂಕು ಆಡಳಿತವೂ ಸಹ ಮೇಲ್ವರ್ಗದ ರಾಜಕೀಯ ಒತ್ತಡ–ಕ್ಕೆ ಮಣಿದು ಪರ್ಯಾಯ ಭೂಮಿ ನೀಡುವುದಾಗಿ ಸುಮ್ಮನಾಗಿರುತ್ತದೆ. ಆದರೆ ತಾಲ್ಲೂಕು ಆಡಳಿತ ನೀಡಿರುವ ಬೇರೊಂದು ಪರ್ಯಾಯ ಭೂಮಿಯು ಸುಮಾರು ಕಿ.ಮೀ. ದೂರದಲ್ಲಿರುವುದರಿಂದ ಅಲ್ಲಿಗೆ ಹೋಗಿ ಶವ ಸಂಸ್ಕಾರ ಮಾಡಲು ದೂರವಾಗುತ್ತದೆ. ಆದ್ದರಿಂದ ನಮಗೆ ಮೊದಲು ನಡೆಸುತ್ತಿದ್ದ ಸ್ಥಳದಲ್ಲಿಯೇ ಅವಕಾಶ ನೀಡಬೇಕೆಂದು ಒತ್ತಾಯಿಸಿದರೂ ಸಹ ನೀಡಿಲ್ಲ, ಆದ್ದರಿಂದ ಮೊದಲು ಶವ ಸಂಸ್ಕಾರ ಮಾಡುತ್ತಿದ್ದ ಜಾಗವನ್ನೇ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿ ಬೇಡಿಕೆಗಳನ್ನು ಸಲ್ಲಿಸಲಾಯಿತು.

ಈ ಹಳ್ಳಿಯಲ್ಲಿ ಕೂಲಿ ಮಾಡಿಕೊಂಡು ಬದುಕುತ್ತಿರುವ ಸುಮಾರು 70 ಕುಟುಂಬಗಳಿದ್ದು, ಸಾವಿರಾರು ವರ್ಷಗಳಿಂದ ಇದೇ ವೃತ್ತಿಯನ್ನು ಮಾಡುತ್ತ ಬಂದಿರುವವರಿಗೆ 5 ಎಕ್ಟೇರ್ ಕೃಷಿ ಭೂಮಿಯನ್ನು ಸರ್ಕಾರ ನೀಡಬೇಕು. 2015 ರಲ್ಲಿಯೇ ಮನೆ ಮಂಜೂರಾಗಿದ್ದು ಅವುಗಳನ್ನು ಮೇಲ್ವರ್ಗದವರು ತಡೆಹಿಡಿದಿರುತ್ತಾರೆ. ಇದನ್ನು ಸರಿಪಡಿಸಿ ಮನೆ ಇಲ್ಲದವರಿಗೆ ಪನರ್ ವಸತಿ ಕಲ್ಪಿಸಬೇಕು ಎಂದೂ ಬೇಡಿಕೆ ಸಲ್ಲಿಸಲಾಯಿತು.

– ಶಿವಣ್ಣ .ಈ.



ದೃಡೀಕೃತ ಆಲೂಗೆಡ್ಡೆ ಬಿತ್ತನೆ ಬೀಜವನ್ನೇ ವಿತರಿಸಿ:

ಹಾಸನ ರೈತಸಂಘ ಒತ್ತಾಯ



ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆ ಕಳೆದ 10 ವರ್ಷಗಳಲ್ಲಿ ಸುಮಾರು ಅರ್ಧದಷ್ಟು ಇಳಿದಿದ್ದು ಇದಕ್ಕೆ ದೃಡೀಕೃತ ಬಿತ್ತನೇ ಬೀಜವನ್ನು ಬಳಕೆ ಮಾಡದೆ ಅಂಗಮಾರಿ ರೋಗ ಕಾರಣ. ಆದ್ದ–ರಿಂದ ದೃಡೀಕೃತ ಬಿತ್ತನೇ ಬೀಜವನ್ನು ವಿತರಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಜಂಟಿಯಾಗಿ ಪ್ರತಿಭಟನೆ ನಡೆಸುವ ಮೂಲಕ ಜಿಲ್ಲಾಡಳಿತವನ್ನು ಒತ್ತಾಯಿಸಿವೆ.

ಆಲೂಗೆಡ್ಡೆ ಹಾಸನ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ. ಸಕಲೇಶಪುರ ತಾಲ್ಲೂಕನ್ನು ಹೊರತುಪಡಿಸಿದರೆ ಜಿಲ್ಲೆಯ ಉಳಿದ ಎಲ್ಲಾ ತಾಲೂಕುಗಳಲ್ಲೂ ಆಲೂಗೆಡ್ಡೆಯನ್ನು ರೈತರು ಬೆಳೆಯುತ್ತಾರೆ. ಕೃಷಿ ಇಲಾಖೆಯ ಮಾಹಿತಿ ಪ್ರಕಾರವೇ ಕಳೆದ ವರ್ಷ (2014–15) ಜಿಲ್ಲೆಯಲ್ಲಿ ಸುಮಾರು 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆಯನ್ನು ಬಿತ್ತನೆ ಮಾಡಲಾಗಿತ್ತು. ಸುಮಾರು ಹತ್ತು ವರ್ಷಗಳ ಹಿಂದೆ (2004–05) ಹಾಸನ ಜಿಲ್ಲೆಯಾದ್ಯಂತ ಸುಮಾರು 45 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆಯನ್ನು ಬೆಳೆಯಲಾಗುತ್ತಿತ್ತು. ಆದರೆ ಇಷ್ಟು ಪ್ರಮಾಣದಲ್ಲಿ ಇಳಿಕೆ ಕಂಡುಬರಲು ಪ್ರಮುಖ ಕಾರಣ ಬೆಳೆಗೆ ಬರುವ ಅಂಗಮಾರಿ ರೋಗ. ಮತ್ತು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಸಿಗದಿರುವುದು. ಕೃಷಿ ವಿಜ್ಞಾನಿಗಳ ಸಂಶೋಧನೆಯ ಪ್ರಕಾರ ಅಂಗಮಾರಿ ರೋಗಕ್ಕೆ ದೃಡೀಕೃತ ಬಿತ್ತನೇ ಬೀಜವನ್ನು ಬಳಕೆ ಮಾಡದಿರುವುದೆ ಕಾರಣ ಎನ್ನುತ್ತಾರೆ.

ಆದರೆ ದೃಡೀಕೃತ ಬಿತ್ತನೆ ಆಲೂಗೆಡ್ಡೆ ಬೀಜವನ್ನು ರೈತರಿಗೆ ವಿತರಿಸುವಲ್ಲಿ ಜಿಲ್ಲಾಡಳಿತ ಸರಿಯಾದ ಕ್ರಮಗಳನ್ನು ಅನುಸರಿಸದೆ ಕೇವಲ ವರ್ತಕರ ಅನುಕೂಲಕ್ಕೆ ತಕ್ಕಂತೆ ತೀರ್ಮಾನಗಳನ್ನು ತೆಗೆದು–ಕೊಂಡು ದೊಡ್ಡ ವಿಭಾಗದ ರೈತ ಸಮುದಾಯವನ್ನು ಕತ್ತಲೆಯಲ್ಲಿಟ್ಟಿದೆ.

ಕಳೆದ ಮೂರು ದಿನಗಳ ಹಿಂದೆ ಜಿಲ್ಲಾಡಳಿತ ಆಲೂಗಡ್ಡೆ ಬಿತ್ತನೆ ಬೀಜದ ಮಾರಾಟದ ಕುರಿತು ನಡೆಸಿದ ಸಭೆಗೆ ರೈತರನ್ನು ಮತ್ತು ರೈತ ಸಂಘದ ಪ್ರತಿನಿಧಿಗಳನ್ನು ಆಹ್ವಾನಿಸದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರೇ ಘೋಷಿಸಿದಂತೆ ಬಿತ್ತನೆ ಆಲೂಗಡ್ಡೆ ಖರೀದಿಸುವ ಪ್ರತಿಯೊಬ್ಬ ರೈತರಿಗೂ ನಿಗದಿತ ಬೆಲೆಯ ಶೇ. ಅರ್ಧದಷ್ಟನ್ನು ಸಹಾಯ ಧನದ ರೂಪದಲ್ಲಿ (ಸಬ್ಸಿಡಿ) ನೀಡುತ್ತೇವೆಂದು ಅದಕ್ಕಾಗಿ ರಾಜ್ಯ ಸರ್ಕಾರ 2 ಕೋಟಿ ರೂ.ಗಳನ್ನು ಮೀಸಲಿಸಿಟ್ಟಿದೆ ಎಂದೂ ಹೇಳಿದ್ದರು. ಆದರೆ ಈ ಕುರಿತು ಯಾವುದೇ ರೈತರಿಗೂ ಇದುವರೆಗೂ ಸರಿಯಾದ ಮಾಹಿತಿಗಳಿಲ್ಲ. ಮಾತ್ರವಲ್ಲದೆ ಬಿತ್ತನೆ ಬೀಜಕ್ಕೆ ಜಿಲ್ಲಾಡಳಿತವೇ ನಿಖರವಾದ ಬೆಲೆಯನ್ನು ನಿಗದಿಪಡಿಸದೆ ವರ್ತಕರ ಇಚ್ಛೆಗೆ ಬಿಟ್ಟಿರುವುದು ರೈತರಿಗೆ ದೊಡ್ಡ ಅನ್ಯಾಯ ಮಾಡಿದಂತಾಗಿದೆ.

ಆದ್ದರಿಂದ ಜಿಲ್ಲಾಡಳಿತ ಈ ಕೂಡಲೆ ರೈತ ಸಂಘಟನೆಗಳ ಪ್ರತಿನಿಧಿಗಳು ವರ್ತಕರು ಮತ್ತು ಕೃಷಿ, ತೋಟಗಾರಿಕಾ ಇಖೆಯ ಅಧಿಕಾರಿಗಳಳು ಮತ್ತು ಕೃಷಿ ತಜ್ಞರನ್ನೊಗೊಂಡ ಸಭೆಯನ್ನು ನಡೆಸದೆ ಯಾವುದೇ ಕಾರಣಕ್ಕೂ ಮಾರುಕಟ್ಟೆಯಲ್ಲಿ ಬಿತ್ತನೆ ಆಲೂಗೆಡ್ಡೆಯ ಮಾರಾಟಕ್ಕೆ ಅವಕಾಶ ಕಲ್ಪಿಸಿಕೊಡಬಾರದೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಜಿಲ್ಲಾಡಳಿತವನ್ನು ಒತ್ತಾಯಿಸಿವೆ.

ಸಾರಿಗೆ ನೌಕರರ ಜಾಥಾ–ವಿಭಾಗೀಯ ಸಮಾವೇಶ



ಸಾವಿರಾರು ಕೋಟಿ ರೂಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾಗಳಿಗೆ ತೆರಿಗೆ ರೂಪದಲ್ಲಿ ಹಣವನ್ನು ಸಾರಿಗೆ ಇಲಾಖೆ ನೀಡುತ್ತಿದ್ದರು ಸಹ ಒಂದು ನಯಾ ಪೈಸೆಯನ್ನಯು ಸಹ ಸಾರಿಗೆ ಇಲಾಖೆಗೆ ಕೇಂದ್ರ ರಾಜ್ಯ ಸರ್ಕಾರಗಳು ಅನುದಾನವನ್ನು ನೀಡುತ್ತಿಲ್ಲ, ರಾಜ್ಯದಲ್ಲಿ 1.25 ಲಕ್ಷ ಸಾರಿಗೆ ನೌಕರರಿಗೆ ಸರಿಯಾದ ರೀತಿಯಲ್ಲಿ ವೇತನ ಹೆಚ್ಚಳ ಮಾಡದೆ ಆಡಳಿತ ಮಂಡಳಿ ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರುತ್ತಿದ್ದು ಸಾಮಾಜಿಕ ನ್ಯಾಯದ ಪರ ಎಂದು ಹೇಳುವ ಸರ್ಕಾರ ನೌಕರರ ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಸಾರಿಗೆ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದಶಿ ಹೆಚ್.ಎಸ್. ಮಂಜುನಾಥ್ ಸರ್ಕಾರವನ್ನು ಆಗ್ರಹಿಸಿದರು

ಅವರು ಮೇ 15 ರಿಂದ ಜಿಲ್ಲೆಯಾದ್ಯಂತ ಸಾರಿಗೆ ನೌಕರರ ವೇತತ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಆಗ್ರಹಿಸಿ ನಡೆಸಿದ ಜಾಥದ ಸಮಾರೋಪ ಹಾಗೂ ವಿಭಾಗೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ಸಾರಿಗೆ ನೌಕರರು ದಿನನಿತ್ಯ ಹೆಚ್ಚಳವಾಗುತ್ತಿರುವ ಬೆಲೆ ಏರಿಕೆಗೆ ಅನುಗುಣವಾಗಿ ವೇತನ ಹೆಚ್ಚಳವಾಗದೆ ಜೀವನ ನಿರ್ವಹಣೆ, ಮಕ್ಕಳ ಶಿಕ್ಷಣ ಆರೋಗ್ಯದ ಖರ್ಚುವೆಚ್ಚಗಳನ್ನು ನಿರ್ವಹಿಸಲು ಸಾಧ್ಯವಾಗದೆ ಪರಿತಪಿಸುವ ಸ್ಥಿತಿ ನಿರ್ಮಾಣವಾಗಿದೆ ಸಾರಿಗೆ ವಿಭಾಗದ ಲಾಭಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ನೌಕರರಿಗೆ ಕಳೆದ 20 ವರ್ಷಗಳಿಂದ ವೇತನ ಹೆಚ್ಚಳವಾಗದೆ ಪರಿತಪಿಸುತ್ತಿದ್ದಾರೆ, ಆಡಳಿತ ಮಂಡಳಿ ನೌಕರರ ವೇತನ ಹೆಚ್ಚಳದ ವಿಚಾರದಲ್ಲಿ ಏಕಪಕ್ಷೀಯವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೂಲಕ ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರುತ್ತಿದೆ ಎಂದ ಅವರು ನೌಕರರು ಡಬಲ್ ಡ್ಯೂಟಿ, ತ್ರೀಬಲ್ ಡ್ಯೂಟಿಗಳನ್ನು ಮಾಡಬೇಕಾದ ಅನುವಾರ್ಯತೆ ಇದ್ದು ವಿಪರೀತವಾದ ಕೆಲಸದ ಒತ್ತಡದಿಂದ ಅನಾರೋಗ್ಯ ಪೀಡಿತರಾಗುತ್ತಿದ್ದಾ–ರೆ ಜೊತೆಗೆ ನೌಕರರು ರಾತ್ರಿಯ ವೇಳೆಯಲ್ಲಿ ಉಳಿದುಕೊಳ್ಳಲು ವಿಶ್ರಾಂತಿ ಗೃಹಗಳು ಇಲ್ಲದೆ ಬಸ್‌ಗಳಲ್ಲಿಯೇ ವಾಸ್ತವ್ಯ ಹೂಡಬೇಕಾಗಿದ್ದು ರಾಜ್ಯ ಸರ್ಕಾರ ಸಾರ್ವಜನಿಕರ ಹಿತದೃಷ್ಠಿಯಿಂದ ನೌಕರರ ಬೇಡಿಕೆಗಳ ಬಗ್ಗೆ ಗಮನಹರಿಸಬೇಕು ಎಂದರು.

ಸಂಘದ ಗೌರವಾಧ್ಯಕ್ಷ ಸೈಯದ್ ಮುಜೀಬ್ ಮಾತನಾಡಿ ನೌಕರರು ಸಂಘಟಿತರಾಗುವ ಮೂಲಕ ನೌಕರರಿಗೆ ಸಿಗಬೇಕಾದ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಸಿಐಟಿಯು ಜಿಲ್ಲಾಪ್ರಧಾನ ಕಾರ್ಯದರ್ಶಿ ಎನ್. ಕೆ.ಸುಬ್ರಮಣ್ಯ, ಬಿ.ಎಂ.ಟಿಸಿ ನೌಕರರ ಸಂಘದ ಆನಂದ್, ರಾಜಣ್ಣ.ಕೆ. ಮಾತನಾಡಿದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎ.ಆರ್. ದೇವರಾಜು ವಹಿಸಿದ್ದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ. ರಮೇಶ್ ಸ್ವಾಗತಿಸಿ, ಯತೀಶ್ ವಂದಿಸಿದರು.



ಕೆ. ರಾಜಣ್ಣ

ಸಮಾಜವಾದ ಪ್ರಸ್ತುತವೇ?

ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಸಾಮಾಜಿಕ ಶ್ರಮಶಕ್ತಿ, ವರ್ಗಹಿತಾಸಕ್ತಿ, ವರ್ಗವೈಷಮ್ಯ, ಉತ್ಪಾದನಾ ಸಂಬಂಧ, ಮಿಗತೆ ಮೌಲ್ಯ, ಸಂಪತ್ತಿನ ಖಾಸಗಿ ಒಡೆತನ ಮುಂತಾದ ವರ್ಗಸಮಾಜದ ಮೂಲಸ್ವರೂಪಗಳ ಪ್ರಾಥಮಿಕ ಪರಿಚಯವೂ ಇಲ್ಲದೆ ಬಂಡವಾಳವಾದ ಎಂದರೆ 'ವ್ಯಕ್ತಿ ಸ್ವಾತಂತ್ಯ', 'ಸಮೃದ್ಧಿ'; ಸಮಾಜವಾದ ಎಂದರೆ 'ವ್ಯಕ್ತಿ ಸ್ವಾತಂತ್ರ್ಯ ನಿರಾಕರಣೆ', ಧಾರ್ಮಿಕ ಮತ್ತು ನೈತಿಕ ಮೌಲ್ಯರಾಹಿತ್ಯ' ಎಂದು ನಿರ್ಧರಿಸುವವರು ತಾತ್ವಿಕವಾಗಿ ಬಂಡವಾಳವಾದದ ನೆಲೆಯಲ್ಲಿ ನಿಂತು ಭೌತಿಕವಾಗಿ ಸಮಾಜವಾದ ಎಂದರೇನೆಂದು ತಿಳಿಯಲೆತ್ನಿಸುವವರು. ಈಚೆಗೆ ಭುಗಿಲೆದ್ದ ಗಾರ್ಮೆಂಟ್ ಕಾರ್ಮಿಕರ ಪ್ರತಿಭಟನೆ ಬಂಡವಾಳವಾದ ಎಷ್ಟು ದುರ್ಬಲ ಎಂಬುದನ್ನು ತೋರಿಸಿಕೊಟ್ಟಿದೆ. ಅಂದರೆ, ಅನಿವಾರ್ಯವಾಗಿ ಬದಲಾಗಬೇಕಾದ್ದು ಬಂಡವಾಳವಾದವೇ ಹೊರತು ಸಮಾಜವಾದೀ ಸಮಾಜದ ಕನಸಲ್ಲ.

ಬಂಡವಾಳವಾದೀ ತಾತ್ವಿಕತೆಯ ಒಳಗಿದ್ದುಕೊಂಡೇ ನೋಡಿದರೆ, ಸಮಾಜವಾದವು ಒಂದು ವಿಫಲವಾದ ತಾತ್ವಿಕತೆಯಂತೆ, ಯಾವುದೋ ಹಳೆಯ ಕಾಲದ ನಂಬಿಕೆಯಂತೆ ಅಥವಾ ಅನುಷ್ಠಾನಯೋಗ್ಯವಲ್ಲದ ಆದರ್ಶದಂತೆ ಕಾಣಿಸುತ್ತದೆ. ಬಂಡವಾಳವಾದವೇ ಸಮಾಜವಾದಕ್ಕಿಂತ ಹೆಚ್ಚು ಪ್ರಗತಿಪರವಾಗಿ, ಬದಲಾಗುವ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂಥ ನವ ನವೀನ ಸಿದ್ಧಾಂತವೆಂಬಂತೆ ತೋರುತ್ತದೆ. ಸಮಾಜವಾದದ ತಾತ್ವಿಕತೆಯ ಪ್ರಾಥಮಿಕ ಪರಿಚಯವೂ ಇಲ್ಲದೆ, ಅದರ ವಿರುದ್ಧದ ಅಭಿಪ್ರಾಯಗಳನ್ನು ಮಾತ್ರ ಮೈಗೂಡಿಸಿಕೊಂಡು ಬಂಡವಾಳವಾದದ ನಾವೀನ್ಯತೆಯನ್ನು ಮೆಚ್ಚಿ, ಅದರ ಅಮಾನವೀಯತೆಯನ್ನು ತೆಗಳುವ ಎಲ್ಲ ಬುದ್ಧಿವಂತರು, ಸಜ್ಜನರು ಬಂಡವಾಳವಾದ ಮತ್ತು ಸಮಾಜವಾದ ಎರಡೂ ಅಲ್ಲದ, ಮಾನವೀಯ, ಪ್ರಜಾತಾಂತ್ರಿಕ ಸಮಾಜ ಬೇಕೆಂದು ಹಂಬಲಿಸುತ್ತಾರೆ.

ಬಂಡವಾಳವಾದದ ತಾತ್ವಿಕತೆ ಮನುಷ್ಯರ ಶ್ರಮಶಕ್ತಿಯನ್ನು ಸಾಮಾಜಿಕವೆಂದು, ಅದ-ರಿಂದ ಹುಟ್ಟುವ ಸಂಪತ್ತು ಅಂದರೆ ಜೀವನಾಗತ್ಯ ಸೌಕರ್ಯಗಳನ್ನು ವ್ಯಕ್ತಿಗತವೆಂದು ಪ್ರತಿಪಾದಿಸುತ್ತದೆ. ಶ್ರಮಶಕ್ತಿಯ ನಿಯೋಜನೆ, ಉತ್ಪಾದನಾ ಸಾಧನಗಳ ನಿಯಂತ್ರಣ ಮತ್ತು ಸಂಪತ್ತಿನ ಒಡೆತನ ವ್ಯಕ್ತಿಗಳ ಕೈಲಿರುವಂಥ ರಾಜಕೀಯವನ್ನು ಬಳಸುತ್ತದೆ. ಆದ-ರೆ, ಇದರಿಂದ ಹುಟ್ಟುವ ವಿಷಮತೆಗಳಾದ ಉಳ್ಳವರು – ಇಲ್ಲದವರ ನಡುವಿನ ಘರ್ಷಣೆಯನ್ನು, ವರ್ಗ ತಾರತಮ್ಯದ, ಮನುಷ್ಯ ಸಮಾಜಕ್ಕೆ ಮಾತ್ರ ವಿಶಿಷ್ಟವಾದ ವಿದ್ಯಮಾನವೆಂದು ಒಪ್ಪುವುದಿಲ್ಲ. ಸ್ಪರ್ಧೆ, ಅಸ್ತಿತ್ವಕ್ಕಾಗಿ ಹೋರಾಟ ಮತ್ತು ಬಲವಂತರ ಮೇಲಾಟ ಜೀವಜಗತ್ತಿನಲ್ಲಿ ಅಂತರ್ಗತವಾಗಿರುವ ನಿಸರ್ಗಸಹಜ ರೀತಿಗಳೆಂದು, ಹಿಂಸೆ, ಅಸ್ತಿತ್ವದ ಕ್ರೌರ್ಯ, ಅಸಮಾನತೆ, ಮತ್ತು ಅಮಾನುಷತೆಗಳು ಎಲ್ಲಾ ಪ್ರಾಣಿಗಳಿಗೂ ಅನ್ವಯವಾಗುವ ಅನಿವಾರ್ಯತೆಗಳೆಂದು ತಾತ್ವೀಕರಿಸುತ್ತದೆ. ಮನುಷ್ಯರೂ ಮೂಲಪ್ರವೃತ್ತಿಗಳಲ್ಲಿ ಪ್ರಾಣಿಪ್ರಪಂಚಕ್ಕೇ ಸೇರಿದವರಾದ್ದರಿಂದ ಅವರು ಸಂಘಟಿಸಿಕೊಂಡಿರುವ ಸಾಮಾಜಿಕ ಜೀವನದಲ್ಲಿನ ವಿಷಮತೆಗಳೂ ನಿಸರ್ಗ ಸಹಜವೇ ಎಂದು ವಾದಿಸುತ್ತದೆ.

ಆದರೆ ಜೀವನಾಗತ್ಯ ವಸ್ತುಗಳನ್ನು ಉತ್ಪಾದಿಸುವ ಸಾಧನಗಳ ಸಾಮಾಜಿಕ ಸೃಷ್ಟಿ, ಬಳಕೆ ಮತ್ತು ಉತ್ಪಾದನಾ ಸಂಬಂಧಗಳಲ್ಲಿ, ವರ್ಗಹಿತವನ್ನು ಕಾಯ್ದುಕೊಳ್ಳುವಂಥ ಮೌಲ್ಯ–ವಿನಿಮಯದ ಏರ್ಪಾಡುಗಳಲ್ಲಿ, ಅವನ್ನು ಸಮರ್ಥಿಸುವ ಅಥವಾ ಪ್ರಶ್ನಿಸುವ ಪ್ರಜ್ಞಾಪೂರ್ವಕ ನಿರ್ಧಾರಗಳಲ್ಲಿ, ಅವನ್ನು ತಾತ್ವೀಕರಿಸುವ ಬೌದ್ಧಿಕತೆಗಳಲ್ಲಿ, ಮನುಷ್ಯಸಮಾಜ ಪ್ರಾಣಿಪ್ರಪಂಚದಿಂದ ಸ್ಪಷ್ಟವಾಗಿ ಪ್ರತ್ಯೇಕಗೊಂಡಿದೆ.

ಮೂರನೇ ಹೊಸ ಮಾರ್ಗ

ಹೀಗಿದ್ದರೂ ಮನುಷ್ಯ ಸಮಾಜಕ್ಕೆ ಸಾಧ್ಯವಿರುವ ಸಮಾನತೆ, ಸಹಕಾರ, ಸಹಬಾಳ್ವೆಗಳನ್ನು ಧಿಕ್ಕರಿಸಿ ಪ್ರಾಣಿಪ್ರಪಂಚದ ಅಸ್ತಿತ್ವ ಸಂಬಂಧಿ ಕ್ರೌರ್ಯ, ಸಾಮಾಜಿಕ ಅಸಮಾನತೆ ಮತ್ತು ಶ್ರಮಮೂಲದ ಅಮಾನುಷತೆಗಳನ್ನು ಬಂಡವಾಳವಾದದ ತಾತ್ವಿಕತೆ ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಎತ್ತಿ ಹಿಡಿಯುತ್ತದೆ. ವರ್ಗ ವೈಷಮ್ಯಗಳನ್ನು ಹುಸಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪೋಷಿಸುತ್ತದೆ. ಧಾರ್ಮಿಕತೆ, ದೈವಭಕ್ತಿ ಮತ್ತು ನೈತಿಕತೆಗಳ ಮೂಲಕ ನಿರ್ಬಲರು ಮತ್ತು ದುರ್ಬಲರ ವಿರೋಧವನ್ನು ನಿಷ್ಕ್ರಿಯಗೊಳಿಸುತ್ತದೆ. ಪ್ರಜ್ಞಾಪೂರ್ವಕವಾಗಿ, ವೈಚಾರಿಕವಾಗಿ ಬಂಡವಾಳವಾದದ ವಿರುದ್ಧ ನಿಲ್ಲುವವರನ್ನು ಶಿಕ್ಷೆಯ ಭಯ ಮತ್ತು ಅನುಗ್ರಹದ ಪ್ರಲೋಭನೆಯ ಮೂಲಕ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತದೆ.

ಸಮಾಜವಾದದ ರಾಜಕೀಯ ಪರ್ಯಾಯಕ್ಕಾಗಿ ಮಾಡುವ ಸಂಘಟಿತ ಪ್ರಯತ್ನಗಳನ್ನು ತಾತ್ವಿಕವಾಗಿ ವಿಕೃತಗೊಳಿಸಲು, ಮತ್ತು ಭೌತಿಕವಾಗಿ ತುಳಿಯಲು, ಎಲ್ಲರೀತಿಯ ಮಾರ್ಗಗಳನ್ನೂ ಬಂಡವಾಳವಾದ ಅಮಾನುಷವಾಗಿ ಬಳಸುತ್ತದೆ. ಸಾಂಸ್ಥಿಕ ಕ್ರೌರ್ಯ–ಹಿಂಸೆಗಳನ್ನು, ಸಾಂವಿಧಾನಿಕ ಮತ್ತು ಕಾನೂನುಬದ್ಧಗೊಳಿಸಿದ ರೂಪಗಳಲ್ಲಿ ಬಳಸುವ ಬಂಡವಾಳವಾದ, ತನ್ನ ಮೂಲ ಹಿತಾಸಕ್ತಿಗೆ ಎದುರಾಗುವ ಯಾವುದೇ ವ್ಯಕ್ತಿಗತ ಅಥವಾ ಸಾಂಘಿಕ ಅಸಮ್ಮತಿ, ಪ್ರತಿಭಟನೆ, ವಿರೋಧಗಳನ್ನು ಕಾನೂನುಸಮ್ಮತವಲ್ಲವೆಂದು, ಅಸಂವಿಧಾನಿಕ ಕ್ರಮಗಳೆಂದು ಆದ್ದರಿಂದ ಅಪಾಯಕಾರಿಯೆಂದು, ಹಿಂಸೆಯ ಅಭಿವ್ಯಕ್ತಿಗಳೆಂದು ದೂಷಿಸಿ ಶಿಕ್ಷೆಗೊಳಪಡಿಸುತ್ತದೆ. ವ್ಯಕ್ತಿ–ಸಂಘಗಳ ಮಟ್ಟದ ವಿಧೇಯತೆ, ನೈತಿಕತೆ, ಮಾನವೀಯತೆ, ಅಹಿಂಸೆ, ಶಾಂತಿಪ್ರಿಯತೆಗಳನ್ನು ಸಾಮಾಜಿಕವಾಗಿ ಅನುಸರಣಯೋಗ್ಯ ಆದರ್ಶಗಳೆಂದು ಗುರುತಿಸಿ ಬಿರುದು, ಬಾವಲಿ, ಪಾರಿತೋಷಕ, ಪ್ರಶಸ್ತಿಗಳನ್ನು ದಯಪಾಲಿಸುತ್ತದೆ. ಸಾಮಾಜಿಕ ಶ್ರಮಶಕ್ತಿ, ವರ್ಗಹಿತಾಸಕ್ತಿ, ವರ್ಗವೈಷಮ್ಯ, ಉತ್ಪಾದನಾ ಸಂಬಂಧ, ಮಿಗತೆ ಮೌಲ್ಯ, ಸಂಪತ್ತಿನ ಖಾಸಗಿ ಒಡೆತನ ಮುಂತಾದ ವರ್ಗಸಮಾಜದ ಮೂಲಸ್ವರೂಪಗಳ ಪ್ರಾಥಮಿಕ ಪರಿಚಯವೂ ಇಲ್ಲದೆ ಬಂಡವಾಳವಾದ ಎಂದರೆ 'ವ್ಯಕ್ತಿ ಸ್ವಾತಂತ್ಯ', 'ಸಮೃದ್ಧಿ'; ಸಮಾಜವಾದ ಎಂದರೆ 'ವ್ಯಕ್ತಿ ಸ್ವಾತಂತ್ರ್ಯ ನಿರಾಕರಣೆ', ಧಾರ್ಮಿಕ ಮತ್ತು ನೈತಿಕ ಮೌಲ್ಯರಾಹಿತ್ಯ' ಎಂದು ನಿರ್ಧರಿಸುವವರು ತಾತ್ವಿಕವಾಗಿ ಬಂಡವಾಳವಾದದ ನೆಲೆಯಲ್ಲಿ ನಿಂತು ಭೌತಿಕವಾಗಿ ಸಮಾಜವಾದ ಎಂದರೇನೆಂದು ತಿಳಿಯಲೆತ್ನಿಸುವವರು. ಬಂಡವಾಳವಾದದ ಒಳಿತುಗಳನ್ನು ಸಮಾಜವಾದದ ಅನುಕೂಲಗಳೊಂದಿಗೆ ಮೇಳವಿಸಿ ಎರಡರ ಕೆಡಕುಗಳಿಲ್ಲದ, ಎರಡೂ ಅಲ್ಲದ, ಮೂರನೆಯ ಹೊಸ ಸಮಾಜವೊಂದನ್ನು ಕಟ್ಟಬೇಕೆಂದು ಬಯಸುವವರಿಗೂ, ಬಂಡವಾಳವಾದವನ್ನು ಮೆಚ್ಚಿ, ಸಮಾಜವಾದವನ್ನು ತಿರಸ್ಕರಿಸಬೇಕೆನ್ನುವವರಿಗೂ ಸಮಾನವಾಗಿರುವ ಅಂಶವೆಂದರೆ, ವರ್ಗನೆಲೆ, ಮತ್ತು ವರ್ಗ ಹಿತಾಸಕ್ತಿಗಳಾಚೆ ಯೋಚಿಸಲಾಗದ ವ್ಯಕ್ತಿನಿಷ್ಠ ಪ್ರಜ್ಞೆಯ ಮಿತಿ ಮತ್ತು ಮಾನವ ಸಮಾಜ ಹೇಗೆ ಸಂಘಟಿತವಾಗಿದೆಯೆನ್ನುವುದರ ಬಗೆಗಿನ ಅಜ್ಞಾನ.

ಕಾರ್ಮಿಕರು ಒಂದು ವರ್ಗವಾಗಿ ಇಲ್ಲವಾಗಿದ್ದಾರೆ

ಬಂಡವಾಳವಾದವು ತನ್ನ ವರ್ಗ ಹಿತಾಸಕ್ತಿಯನ್ನು ಬಿಟ್ಟುಕೊಡುವುದೆಂದರೆ ವರ್ಗವಾಗಿ ತಾನೇ ಇಲ್ಲವಾಗುವುದು. ಆದ್ದರಿಂದಲೇ, ಬದಲಾವಣೆ ಸಹಜವೆಂದು, ನೈಸರ್ಗಿಕವೆಂದು ಕಾರ್ಮಿಕವರ್ಗಕ್ಕೆ ಉಪದೇಶಿಸುವ ಬಂಡವಾಳವಾದದ ಸಮರ್ಥಕರು ತಮ್ಮ ಧೋರಣೆಯನ್ನು ಬದಲಿಸಿಕೊಳ್ಳುವುದರ ಬದಲು ಕಾರ್ಮಿಕರೇ ಒಂದು ವರ್ಗವಾಗಿ ಇಲ್ಲವಾಗಿದ್ದಾರೆಂದು, ಆದ್ದರಿಂದ ವರ್ಗಹೋರಾಟದ ಪರಿಕಲ್ಪನೆ ಇಂದಿಗೆ ಅಪ್ರಸ್ತುತವಾಗಿದೆಯೆಂದು, ಚರಿತ್ರೆಯೇ ಅಂತ್ಯಗೊಂಡಿದೆಯೆಂದು ಘೋಷಿಸಿಬಿಟ್ಟಿದ್ದಾರೆ. ತನ್ನ ವರ್ಗಹಿತಾಸಕ್ತಿಯೊಂದನ್ನು ಬಿಟ್ಟು ಇನ್ನೇನು ಬೇಕಾದರೂ ಬದಲಾಗುವುದು ಸಾಧ್ಯವೆಂದು, ಏನೇ ಆದರೂ ಬಂಡವಾಳವಾದವು ರೂಪಬದಲಿಸಬಹುದೇ ಹೊರತು ಬದಲಾಗಬಾರದು ಎಂಬಂಥ ಬದಲಾವಣೆ ಮಾತ್ರ ಅಪೇಕ್ಷಣೀಯವೆಂದು ಹೇಳುತ್ತಾರೆ. ಮಂಗಳಗ್ರಹದಲ್ಲಿ ಬೇಕಾದರೂ ವಸಾಹತನ್ನು ಸ್ಥಾಪಿಸುವುದು ಸಾಧ್ಯ ಆದರೆ ಬಂಡವಾಳವಾದದ ಬದಲಾಗಿ ಸಮಾಜವಾದದ ಸ್ಥಾಪನೆ ಮಾತ್ರ ಈ ಭೂಮಿಯ ಮೇಲೆ ಅಸಾಧ್ಯ ಎಂಬುದು ಅದರ ಒಟ್ಟು ನಂಬಿಕೆಯ ಸಾರಾಂಶ.

ಔದ್ಯಮಿಕ ಕ್ರಾಂತಿಯಲ್ಲಾದ ಯಂತ್ರಗಳ ಆವಿಷ್ಕಾರ ಮತ್ತು ಬಳಕೆ ಮಹತ್ತರ ಬದಲಾವಣೆಗಳನ್ನು ತಂದಿತು. ಮನುಷ್ಯರ ಶ್ರಮಶಕ್ತಿ ಮತ್ತು ಕೌಶಲಗಳನ್ನು ಆಧರಿಸಿದ ಉತ್ಪಾದನೆಯ ವೇಗವನ್ನು ಅಮಾನುಷ ಶ್ರಮಶಕ್ತಿ ಮತ್ತು ಕೌಶಲಗಳು ಹಿಂದಕ್ಕೆ ಹಾಕಿ ಔದ್ಯಮಿಕ ಉತ್ಪಾದನೆ ಒಮ್ಮೆಲೇ ಅನೇಕ ಪಟ್ಟು ಹೆಚ್ಚಾಯಿತು. ಅದರಿಂದ ಉದ್ಭವಿಸಿದ ಆರ್ಥಿಕ ಒತ್ತಡ ಮತ್ತು ಬಿಕ್ಕಟ್ಟುಗಳು ಮಾರುಕಟ್ಟೆಯ ವಿಸ್ತರಣೆ, ವಸಾಹತುಗಳ ಸ್ಥಾಪನೆ, ಸಂಚಾರ–ಸಾರಿಗೆ–ಸಂವಹನೆಗಳ ಯಾಂತ್ರಿಕತೆಗಳನ್ನು ನಿರಂತರವಾಗಿ ಸುಧಾರಿಸುತ್ತಾ ಹೋಗಬೇಕಾದ ತುರ್ತು, ಮತ್ತು ಇವೆಲ್ಲವನ್ನೂ ಸಮರ್ಥಿಸುವಂಥ ತಾತ್ವಿಕತೆಗಳನ್ನು ಹುಟ್ಟುಹಾಕಿದವು. ಬ್ರಿಟನ್, ಫ್ರಾನ್ಸ್, ಪೋರ್ಚುಗಲ್, ಡಚ್ ಮತ್ತು ಸ್ಪೇನ್ ದೇಶಗಳ ವ್ಯಾಪಾರಿಗಳು ಅವರವರ ಅರಸೊತ್ತಿಗೆ, ಸರ್ಕಾರ ಮತ್ತು ಧರ್ಮಪೀಠಗಳ ಒತ್ತಾಸೆಯೊಂದಿಗೆ ವಸಾಹತುಗಳನ್ನು ಸ್ಥಾಪಿಸುವ ಪ್ರಯತ್ನಗಳಲ್ಲಿ ಪರಸ್ಪರ ಕಾದಾಡುತ್ತಿದ್ದರು. ಆದರೆ ಅವರಲ್ಲಿ ಯಾರೇ ಗೆದ್ದರೂ ಸೋಲುತ್ತಿದ್ದುದು ಮಾತ್ರ ವಸಾಹತೀಕರಣಕ್ಕೆ ಒಳಗಾದ ಜನಸಾಮಾನ್ಯರು. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, ಆಯಾ ದೇಶದ ರೈತರು ಮತ್ತು ಕಾರ್ಮಿಕರು.

ಭಾರತದಲ್ಲಿ

ಭಾರತದ ಸಂದರ್ಭದಲ್ಲಿ ಹೇಳುವುದಾದರೆ, ಮೊದಲ ಹಂತದ ವಸಾಹತೀಕರಣದಲ್ಲಿ ವಿದೇಶೀ ಬಂಡವಾಳಶಾಹಿಗಳು ಭೌತಿಕವಾಗಿ ದೇಶೀ ನೆಲದಲ್ಲಿದ್ದುಕೊಂಡು ಸ್ಥಳೀಯ ಜನರನ್ನೊಳಗೊಂಡ ಸೈನ್ಯ, ಪೊಲೀಸು, ನ್ಯಾಯಪದ್ಧತಿ, ಜೈಲುಗಳ ವ್ಯವಸ್ಥೆಗಳೊಂದಿಗೆ ರಾಜ್ಯಾಡಳಿತವನ್ನು ತನ್ನ ವಶದಲ್ಲಿಟ್ಟುಕೊಂಡು ಸರಕುಗಳ ಉತ್ಪಾದನೆ ಮತ್ತು ಮಾರುಕಟ್ಟೆಗಳನ್ನು ನೇರವಾಗಿ ನಿಯಂತ್ರಿಸುತ್ತಿದ್ದರು. ಒಂದು ಕಡೆ ಬಂಡವಾಳವಾದಕ್ಕೆ ಪೂರಕವಾದ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನಗಳ ಆಧುನಿಕತೆಯನ್ನು ಉತ್ತೇಜಿಸುತ್ತಾ, ಮತ್ತೊಂದು ಕಡೆ ತನ್ನ ರಾಜಕೀಯ–ಕ್ಕೆ ಪೂರಕವಾಗಿಲ್ಲದ ಊಳಿಗಮಾನ್ಯ ಸಮಾಜದ ಅಂಶಗಳನ್ನು ಮಾತ್ರ ನಿಧಾನವಾಗಿ ಬದಲಿಸುತ್ತಿದ್ದರೂ, ವಸಾಹತೀಕರಣದ ವಿರುದ್ಧ ರಾಜಕೀಯ ಪ್ರಜ್ಞೆ ಬೆಳೆಸಿಕೊಂಡ ಜನರನ್ನು ಒಡೆಯಲು ಜಾತಿ, ಧರ್ಮ, ಮತ ಮತ್ತು ಸಾಂಪ್ರದಾಯಿಕತೆಯ ಅಸ್ಮಿತೆಗಳನ್ನು ಬ್ರಿಟಿಷ್ ಆಳುವ ವರ್ಗ ಪ್ರೋತ್ಸಾಹಿಸುತ್ತಿತ್ತು.

ಬ್ರಿಟಿಷರಿಂದ 'ಸ್ವಾತಂತ್ರ್ಯ'ಗಳಿಸಲು ಮಾಡಿದ ಗಾಂಧೀಜಿ ನೇತೃತ್ವದ ಹೋರಾಟ ಕೊನೆಗೂ ಗಳಿಸಿದ್ದು, ದೇಶೀಯ ಬಂಡವಾಳವಾದ ಬ್ರಿಟಿಷ್ ಸಾಮ್ರಾಜ್ಯಶಾಹಿ ಬಂಡವಾಳವಾದದಿಂದ ಹಸ್ತಾಂತರಿಸಿಕೊಂಡ ರಾಜಕೀಯ ನಿಯಂತ್ರಣವೇ ಹೊರತು ಜನಪ್ರಿಯ ನೆಲೆಯಲ್ಲಿ ಬಿಂಬಿಸುವಂತೆ ಜನಸಾಮಾನ್ಯರ ಸ್ವಯಮಾಡಳಿತದ ಸ್ವಾತಂತ್ರ್ಯವಲ್ಲ. ಅಂದರೆ ಭಾರತದ ಬಂಡವಾಳವಾದ ಭೂಮಾಲೀಕರೊಂದಿಗೆ ಸೇರಿ ರಚಿಸಿದ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಸರ್ಕಾರಗಳು ಮೇಲುವರ್ಗಗಳ ಹಿತಾಸಕ್ತಿಗಳನ್ನು ಬಲಿಕೊಡದಂತೆ ಕೆಳವರ್ಗದ ಜನರ ಕನಿಷ್ಠ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವಂಥ ಸಂವಿಧಾನವನ್ನು ಜನರ ಹೆಸರಿನಲ್ಲೇ ರಚಿಸಿ, ಸಾರ್ವಜನಿಕ ಉದ್ದಿಮೆ ಮತ್ತು ಖಾಸಗಿ ಉದ್ದಿಮೆಗಳೆಂಬ ಪರಸ್ಪರ ವಿರುದ್ಧವಾದ ಇಬ್ಬಗೆಯ ಆರ್ಥಿಕ ನೀತಿಯನ್ನು ಜಾರಿಗೆ ತಂದವು. ಮೇಲುನೋಟಕ್ಕೆ ಸಮಾಜವಾದಿ ಮತ್ತು ಧರ್ಮನಿರಪೇಕ್ಷ ಸಮಾಜದಂತೆ ಕಂಡರೂ ಮೂಲಸ್ವರೂಪದಲ್ಲಿ ಬಂಡವಾಳವಾದೀ ಮತ್ತು ಜಾತಿ–ಮತ–ಧರ್ಮಾಧಾರಿತ ಸಮಾಜವಾಗಿ ಸುಮಾರು 60 ವರ್ಷಗಳವರೆಗೆ ಮುಂದುವರೆಯಿತು. ಜಾಗತಿಕ ಮಟ್ಟದಲ್ಲಿ ಬಂಡವಾಳವಾದ ಮತ್ತು ಸಮಾಜವಾದದ ನಡುವೆ ನಡೆಯುತ್ತಿದ್ದ 'ಶೀತಲ ಸಮರದ' ಹಿನ್ನೆಲೆಯಲ್ಲಿ ಭಾರಿ ಉದ್ಯಮಗಳು ಮತ್ತು ಕೃಷಿಕ್ಷೇತ್ರಗಳಲ್ಲಿ ಆಧುನಿಕ ಯಂತ್ರಗಳ ಬಳಕೆಯ ಜೊತೆ ಜೊತೆಗೇ ದೈಹಿಕ ಶ್ರಮದ ಬಳಕೆಯನ್ನು ಮೊಟಕು ಮಾಡದೆ ಸರಕು ಮತ್ತು ಸೇವೆಗಳ ಉತ್ಪಾದನೆ ಭಾರತದಲ್ಲಿ ನಡೆದಿತ್ತು. ಒಂದು ಕಡೆ ಸಂಸದೀಯ ಪ್ರಜಾಪ್ರಭುತ್ವದ ಹೆಸರಿನಲ್ಲಿ ಬಂಡವಳಿಗರ ಶೋಷಣಾ ಸ್ವಾತಂತ್ರ್ಯ; ತುಂಡು ಭೂ ಒಡೆಯರು ಮತ್ತು ಸಣ್ಣ ರೈತರ ಬೀಜ, ಗೊಬ್ಬರ, ನೀರು, ಬೆಳೆಯ ಆಯ್ಕೆ ಮತ್ತು ಕೃಷಿ ಉತ್ಪನ್ನಗಳ ಬಳಕೆಯ ಸೀಮಿತ ಸ್ವಾತಂತ್ರ್ಯ; ಕಾರ್ಮಿಕರು ಮಿಗತೆ ಮೌಲ್ಯದಲ್ಲಿ ತಮಗೆ ಸಲ್ಲಬೇಕಾದ ನ್ಯಾಯಯುತ ಪಾಲನ್ನು ಕೇಳುವುದೊಂದನ್ನು ಬಿಟ್ಟು ಉಳಿದ ಶ್ರಮ–ಕೂಲಿ ಸಂಬಂಧಿತ ರಿಯಾಯತಿಗಳನ್ನು ಮಾಲೀಕರಿಂದ ಕಾನೂನುಬದ್ಧವಾಗಿ ಕೇಳುವ ನಿರ್ಬಂಧಿತ ಸ್ವಾತಂತ್ರ್ಯಗಳನ್ನು ಉಳಿಸಿಕೊಂಡಿದ್ದರು. ಔದ್ಯಮಿಕ ಸರಕು ಉತ್ಪಾದನೆಯ ಕಾರ್ಮಿಕರು, ಸಂಚಾರ–ಸಾರಿಗೆ, ಬ್ಯಾಂಕು–ವಿಮೆ–ಸಂವಹನ ಕ್ಷೇತ್ರಗಳಲ್ಲಿ ಸೇವೆಯನ್ನು ಉತ್ಪಾದಿಸುವ ಬೌದ್ಧಿಕ ಕಾರ್ಮಿಕರು ಮುಷ್ಕರದ ಹಕ್ಕು ಮತ್ತು ಸಂಧಾನ–ಮಾತುಕತೆಯ ಹಕ್ಕನ್ನು ಹೊಂದಿದ್ದರು.

ಆಹಾರ ಭದ್ರತೆ, ಕೃಷಿಯ ಆಧುನೀಕೀಕರಣ ಮತ್ತು ಜನಸಂಖ್ಯಾ ಹೆಚ್ಚಳದ ಕಾರಣಗಳನ್ನೊಡ್ಡಿ ಭಾರತದ ರೈತರ ಮೇಲೆ ಆಳುವ ವರ್ಗಗಳು ಹೇರಿದ 'ಹಸಿರುಕ್ರಾಂತಿ' ಮತ್ತು 'ಕ್ಷೀರಕ್ರಾಂತಿ'ಗಳು ರೈತರನ್ನು ನೇರವಾಗಿ ಜಾಗತಿಕ ಸಾಲದ ಶೂಲಕ್ಕೆ ಸಿಕ್ಕಿಸಿದವು. ಕೃಷಿವ್ಯಾಪಾರಿಗಳು ಭಾರತದ ಕೃಷಿಯನ್ನು ತಮ್ಮ ಕೈಗೆ ತೆಗೆದುಕೊಂಡರು. ಮಳೆ–ಬೆಳೆ ಸಮೃದ್ಧವಾಗಿರಲಿ, ಬಿಡಲಿ, ಕೃಷಿ ಉತ್ಪನ್ನಗಳು ರೈತರ ಕೈ ಸೇರುವ ಮೊದಲೇ ಅವುಗಳಿಂದ ಸಿಗಬಹುದಾದ ಲಾಭ ವ್ಯಾಪಾರಿಗಳ ಜೇಬನ್ನು ಸೇರುವಂಥಾ ಕೃಷಿ ವ್ಯವಸ್ಥೆ ಹುಟ್ಟಿತು.

ಸೋವಿಯೆಟ್ ಪತನದ ನಂತರ

ಅತ್ತ ಸಾಮ್ರಾಜ್ಯಶಾಹಿ ಶಕ್ತಿಗಳು ಸತತವಾಗಿ ಹೇರುತ್ತಿದ್ದ ಒತ್ತಡಗಳು ಮತ್ತು ಆಂತರಿಕ ಕಾರಣಗಳಿಂದಾಗಿ ಸಮಾಜವಾದೀ ಸೋವಿಯತ್ ಒಕ್ಕೂಟದ ಪತನವಾಯಿತು, ಜಾಗತಿಕ ಶಕ್ತಿ ಸಮತೋಲನದಲ್ಲಿ ತೀವ್ರ ಏರುಪೇರಾಗಿ ಸಾಮ್ರಾಜ್ಯಶಾಹಿಯ ಕೈ ಮೇಲಾಗುವದರೊಂದಿಗೆ ಭಾರತದ ರಾಜಕಾರಣದಲ್ಲೂ ಕಾರ್ಮಿಕರ ಹಿತಾಸಕ್ತಿಗಳಿಗೆ ಮಾರಕವಾದ ನೀತಿಗಳನ್ನು ಆಳುವ ವರ್ಗಗಳು ಜಾರಿಗೆ ತಂದವು. ಆಧುನಿಕತೆ ಮತ್ತು ಮೂಲಸೌಕರ್ಯದ ಅಭಿವೃದ್ಧಿಯ ಹೆಸರಿನಲ್ಲಿ ಎಷ್ಟೊಂದು ಕಾಮಗಾರಿ ನಡೆದರೂ ಉದ್ಯೋಗಗಳ ಹೆಚ್ಚಳ ಆಗಲಿಲ್ಲ. ಕಾರ್ಮಿಕ ನೀತಿಗಳಲ್ಲಿ ಆಳುವ ವರ್ಗ ತಂದ ಬಂಡವಾಳಪರವಾದ ಬದಲಾವಣೆಗಳಿಂದಾಗಿ ಸಂಘಟಿತ ಕಾರ್ಮಿಕರ ಸಂಖ್ಯೆ ಇಳಿಮುಖವಾಗಿ ಗುತ್ತಿಗೆ ಕಾರ್ಮಿಕರು, ಹಂಗಾಮಿ ಕಾರ್ಮಿಕರು, ದಿನಗೂಲಿ ಕಾರ್ಮಿಕರು ಮುಂತಾದ ಹೆಸರಿನ ಅಸಂಘಟಿತ ಕಾರ್ಮಿಕರ ಸಂ–ಖ್ಯೆ ಹೆಚ್ಚುತ್ತಾ ಹೋಯಿತು. ಕೃಷಿಯ ಬಿಕ್ಕಟ್ಟುಗಳಿಂದ ಕೆಲಸ ಕಳೆದುಕೊಂಡ ಕೃಷಿ ಕಾರ್ಮಿಕರು ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗಿ ಕಟ್ಟಡ ಕಾರ್ಮಿಕರಾಗಿ ಪರಿವರ್ತಿತವಾದರು.

ಮನೆಗಳಲ್ಲಿ ಗೃಹಕೃತ್ಯದ ಮೂಲಕ ಪೂರಕ

ಪುಟ 10 ಕ್ಕೆ

ಬರ ವಿಪತ್ತನ್ನು ಯುದ್ಧೋಪಾದಿಯಲ್ಲಿ ಎದುರಿಸಬೇಕಾಗಿದೆ

ಭಾರತದ ಸರ್ವೋನ್ನತ ನ್ಯಾಯಾಲಯ ದೇಶವು ಇತ್ತೀಚಿನ ವರ್ಷಗಳಲ್ಲಿ ಎದುರಿಸುತ್ತಿರುವ ಭೀಕರ ಬರಗಾಲವನ್ನು ಎದುರಿಸಲು ಸೂಕ್ತ ಹಾಗೂ ಸಮಗ್ರ ಕ್ರಮಗಳನ್ನು ಕೈಗೊಳ್ಳುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ ಎಂದು ತೀರ್ಪಿತ್ತಿದೆ.

ಬರಪೀಡಿತ ಪ್ರದೇಶಗಳಿಗೆ ಸಂಬಂಧಿಸಿದಂತೆ 'ಉಷ್ಟ್ರ ಪಕ್ಷಿಯ ರೀತಿಯ ಧೋರಣೆ' ತಳೆದಿವೆ ಎಂದು ಸುಪ್ರೀಂಕೋರ್ಟ್ ಬಿಹಾರ, ಗುಜರಾತ್ ಮತ್ತು ಹರ್ಯಾಣ ರಾಜ್ಯ ಸರಕಾರಗಳನ್ನು ತರಾಟೆಗೆ ತೆಗೆದುಕೊಂಡಿದೆ ಕೂಡ.

ಬರವನ್ನು ಒಂದು ಮಹಾವಿಪತ್ತಿನ ರೀತಿಯಲ್ಲಿ ಎದುರಿಸಲು ಸುಪ್ರೀಂಕೋರ್ಟ್ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಸಲಹೆ ಮಾಡಿದೆ.

ಜನರಿಗೆ ನೀರೂ ಇಲ್ಲ ಅಥವಾ ಕೆಲಸವೂ ಇಲ್ಲ ಮತ್ತು ಜಾನುವಾರುಗಳಿಗೆ ಮೇವೂ ಇಲ್ಲ ಅಥವಾ ನೀರೂ ಇಲ್ಲ ಎನ್ನುವಂಥ ಭಯಾನಕ ಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶಗಳ ಜನರು ತತ್ತರಿಸುತ್ತಿರುವ ಸಂದರ್ಭದಲ್ಲಿ ಭಾರತದ ಸರ್ವೋನ್ನತ ನ್ಯಾಯಾಲಯದ ಈ ಕಟು ಮಾತುಗಳು ವ್ಯಕ್ತವಾಗಿದೆ.

ಅನೇಕ ಪ್ರದೇಶಗಳಲ್ಲಿ ಸತತ ಎರಡು ವರ್ಷಗಳಿಂದ ಕಡಿಮೆ ಮಳೆಯಾಗಿರುವುದು ಬರಗಾಲದ ಭೀಕರತೆ ಹೆಚ್ಚಲು ಕಾರಣವಾಗಿದೆ. ಬರಗಾಲ ಅತ್ಯಂತ ಭೀಕರವಾಗಿರುವ ಮರಾಠವಾಡದಲ್ಲಿ ಬರ ಆವರಿಸಿರುವುದು ಇದು ಸತತ ಮೂರನೇ ವರ್ಷ. ದೇಶ ಅಭೂತಪೂರ್ವ ರೀತಿಯಲ್ಲಿ ನೀರಿನ ಬಿಕ್ಕಟ್ಟನ್ನು ಎದುರಿಸುತ್ತಿದೆ. ದೇಶದ 91 ಅಣೆಕಟ್ಟುಗಳಲ್ಲಿ ನೀರಿನ ಲಭ್ಯತೆ ಕಳೆದ ದಶಕದಲ್ಲೇ ಅತ್ಯಂತ ಕಡಿಮೆಯಾಗಿದೆ. ಒಟ್ಟು ಸಂಗ್ರಹಣೆ ಸಾಮರ್ಥ್ಯದ ಶೇಕಡಾ 29ರಷ್ಟು ಮಾತ್ರ ನೀರಿದೆ. ಹಸಿವು, ತೀವ್ರ ಅಪೌಷ್ಟಿಕತೆ, ಗುಳೆ ಹೋಗುವುದು, ಹಸಿವಿನಿಂದ ಜಾನುವಾರುಗಳ ಸಾವು ಮತ್ತು ನೀರಿನ ಮೂಲಕ್ಕಾಗಿ ಹತಾಶ ಪ್ರಯತ್ನಗಳು ನಡೆದಿರುವುದು – ಇವೆಲ್ಲವೂ ಇದರ ಪರಿಣಾಮವಾಗಿದೆ.

ದೇಶದ 256 ಜಿಲ್ಲೆಗಳಲ್ಲಿ 33 ಕೋಟಿ ಜನರು ಬರಗಾಲದಿಂದ ಬಾಧಿತರಾಗಿದ್ದಾರೆ ಎಂದು ಕೇಂದ್ರ ಸರಕಾರ ಈ ವರ್ಷ ಎಪ್ರಿಲ್‌ನಲ್ಲಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಿತ್ತು. ವಾಸ್ತವವಾಗಿ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ಯಾಕೆಂದರೆ ಎಲ್ಲಾ ರಾಜ್ಯ ಸರಕಾರಗಳು ಕೇಂದ್ರಕ್ಕೆ ವರದಿಯನ್ನು ಸಲ್ಲಿಸಿಲ್ಲ. ಇನ್ನು ಕೆಲವು ರಾಜ್ಯಗಳಂತೂ ಬರಪೀಡಿತ ಪ್ರದೇಶಗಳನ್ನು ಹಾಗಂತ ಅಧಿಕೃತವಾಗಿ ಘೋಷಣೆ ಮಾಡಿಲ್ಲ ಕೂಡ. ಈ ರೀತಿಯಾಗಿ ಅಧಿಸೂಚನೆ ಮಾಡಿದ ಜಿಲ್ಲೆಗಳನ್ನೂ ಗಣನೆಗೆ ತೆಗೆದುಕೊಂಡರೆ ಬರಪೀಡಿತ ಜನರ ಸಂಖ್ಯೆ 54 ಕೋಟಿ ಆಗುತ್ತದೆ. ಇದು ದೇಶದ ಒಟ್ಟು ಜನಸಂಖ್ಯೆಯ ಐದನೇ ಎರಡರಷ್ಟಾಗುತ್ತದೆ.

ಬರಪೀಡಿತ ಜಿಲ್ಲೆಗಳೆಂದು ಘೋಷಿಸುವುದು ಹಾಗೂ ಬರ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ರಾಜ್ಯ ಸರಕಾರಗಳ ಕಾರ್ಯವಾದರೂ ಬರಗಾಲವನ್ನು ನಿರ್ವಹಿಸಲು ಕ್ರಮಗಳನ್ನು ಕೈಗೊಳ್ಳುವಲ್ಲಿ ಕೇಂದ್ರ ಸರಕಾರದ ಪಾತ್ರ ಮಹತ್ವದ್ದಾಗಿರುತ್ತದೆ. ಸ್ವತಃ ಸುಪ್ರೀಂಕೋರ್ಟ್ ಹೇಳಿರುವಂತೆ, ವಿಪತ್ತು ನಿರ್ವಹಣೆ ಕಾನೂನಿನನ್ವಯ ಸ್ಥಾಪಿಸಲು ಪ್ರಸ್ತಾವಿಸಲಾಗಿದ್ದ ವಿಪತ್ತು ಪರಿಹಾರ ನಿಧಿಯನ್ನು ಇನ್ನೂ ರಚಿಸಲಾಗಿಲ್ಲ.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ವಯ ನಿಧಿಗಳನ್ನು ಬಿಡುಗಡೆ ಮಾಡಲು ನಿರಾಕರಿಸಿರುವುದು ಕೇಂದ್ರ ಸರಕಾರದ ಇನ್ನೊಂದು ಪ್ರಮುಖ ಅಪರಾಧವಾಗಿದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ (ಎನ್‌ರೇಗಾ)ಗೆ 2014–15ರಲ್ಲಿ ಕತ್ತರಿ ಹಾಕಿದಾಗ ಉದ್ಯೋಗ ಸೃಷ್ಟಿ 166 ಕೋಟಿ ಮಾನವ ದಿನಗಳಿಗೆ ಕುಸಿದಿತ್ತು. ಅದು 2015–16ರಲ್ಲಿ 230 ಕೋಟಿ ಮಾನವ ದಿನಗಳಿಗೆ ಏರಿಕೆಯಾಗಿದ್ದು ಅದು ಬರಪೀಡಿತ ಪ್ರದೇಶಗಳಲ್ಲಿ ಉದ್ಯೋಗಕ್ಕೆ ಹೆಚ್ಚಿರುವ ಬೇಡಿಕೆಯನ್ನು ಬಿಂಬಿಸುತ್ತದೆ. ಆದರೆ ಮಾಡಿದ ಕೆಲಸಗಳಿಗೆ ಕೂಲಿ ನೀಡಲು ಕೇಂದ್ರ ಸರಕಾರ ಹಣವನ್ನೇ ಬಿಡುಗಡೆ ಮಾಡಿಲ್ಲ. ಇದರಿಂದಾಗಿ, 2015–16ನೇ ಸಾಲಿನ ಅಂತ್ಯದಲ್ಲಿ ಬಾಕಿಯಿರುವ ಕೂಲಿಯ ಮೊತ್ತ 12,000 ಕೋಟಿ ರೂಪಾಯಿ. ಮಹಿಳೆಯರು ಮತ್ತು ಪುರುಷರು ಕಷ್ಟ ಪಟ್ಟು ದುಡಿಯುವ ಕ್ರೂರ ದೃಶ್ಯ ಹಾಗೂ ತಿಂಗಳುಗಟ್ಟಲೆ ಕಾಲ ಅವರು ಕೂಲಿಯಿಲ್ಲದೆ ಒದ್ದಾಡುವುದು ಮೋದಿ ಸರಕಾರದ ಕಾರ್ಯವೈಖರಿಗೆ ಹಿಡಿದ ಕನ್ನಡಿಯಾಗಿದೆ.

ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಕಳೆದ ವಾರ ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕ ಮುಖ್ಯಮಂತ್ರಿಗಳ ಜತೆ ಸಭೆ ನಡೆಸಿದರು. ಆದರೆ ಪ್ರಕೃತಿ ವಿಕೋಪವನ್ನು ನಿಭಾಯಿಸಲು ಯುದ್ಧೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳುವ ಇಚ್ಛೆ ಸರಕಾರದಲ್ಲಿ ವ್ಯಕ್ತವಾಗಿಲ್ಲ.

ಬೇಸಿಗೆ ರಜೆಯಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸಬೇಕು ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಅದರ ಜೊತೆಯಲ್ಲಿ ಸಾರ್ವಜನಿಕ ವಿತರಣೆ ವ್ಯವಸ್ಥೆ ಮೂಲಕ ವಿಶೇಷ ಪಡಿತರ ಒದಗಿಸಬೇಕು ಎಂದೂ ಹೇಳಿದೆ. ಎನ್‌ರೇಗಾದ ಸಂಬಂಧ ಕೇಂದ್ರ ಸರಕಾರ ಪೂರ್ಣ ಹಣವನ್ನು ಬಿಡುಗಡೆ ಮಾಡಬೇಕು. ಎಲ್ಲಾ ಬಾಧಿತ ಪ್ರದೇಶಗಳನ್ನು ರಾಜ್ಯ ಸರಕಾರಗಳು ಬರಪೀಡಿತ ಜಿಲ್ಲೆಗಳೆಂದು ಘೋಷಿಸಬೇಕು. ಉದಾಹರಣೆಗೆ, ಇಡೀ ತೆಲಂಗಾಣವನ್ನು ಬರಪೀಡಿತ ಎಂದು ಘೋಷಿಸಬೇಕು. ಬರ ನಿರ್ವಹಣೆ ಕೈಪಿಡಿ ಅನ್ವಯ, ಜನರಿಗೆ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ನೀರು ಮತ್ತು ಮೇವನ್ನು ವ್ಯವಸ್ಥೆ ಮಾಡಬೇಕು.


ಬರಗಾಲ ಪುನರಾವರ್ತನೆ ಆಗಬಹುದಾದ ಒಂದು ಸಮಸ್ಯೆ. ಬರಗಾಲವನ್ನು ನಿಭಾಯಿಸಲು ಹಾಗೂ ಗ್ರಾಮೀಣ ಭಾಗದ ಜನರ ಜೀವನ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಉಳಿಸುವ ಸಾಮರ್ಥ್ಯವನ್ನು ಬೆಳೆಸುವುದು ಅಗತ್ಯವಾಗಿದೆ. ಆದರೆ, ನವ ಉದಾರವಾದದ ಪರಿಣಾಮವಾದ ಕೃಷಿ ಬಿಕ್ಕಟ್ಟು ಈ ಸಾಮರ್ಥ್ಯವನ್ನು ದುರ್ಬಲಗೊಳಿಸಿದೆ ಹಾಗೂ ಅಸ್ತವ್ಯಸ್ತಗೊಳಿಸಿದೆ.

ಕೃಷಿ ವಲಯದಲ್ಲಿ ಸಾರ್ವಜನಿಕ ಹೂಡಿಕೆ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಸಾರ್ವಜನಿಕ ವೆಚ್ಚದಲ್ಲಿನ ಇಳಿಕೆಯಿಂದಾಗಿ ಗ್ರಾಮೀಣ ಆರ್ಥಿಕತೆ ದುರ್ಬಲಗೊಂಡಿದೆ. ಇದರ ಜೊತೆಜೊತೆಯಲ್ಲೇ, ಮುಕ್ತ ವಾಣಿಜ್ಯ ನೀತಿಗಳು ಮತ್ತು ಬೆಲೆಗಳಲ್ಲಿನ ಏರಿಳಿತಗಳಿಂದಾಗಿ ರೈತಾಪಿ ವರ್ಗ ದಾರಿದ್ರ್ಯಕ್ಕೆ ಒಳಗಾಗಿದೆ ಹಾಗೂ ಇದರಿಂದಾಗಿ ಗ್ರಾಮೀಣ ಬಿಕ್ಕಟ್ಟು ಉಲ್ಬಣಗೊಂಡಿದೆ. ಹೀಗಾಗಿ, ಈ ನೀತಿಗಳನ್ನು ಬದಲಾಯಿಸುವುದು ಅತ್ಯಗತ್ಯವಾಗಿದೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕಿದೆ. ರೈತರ ಬೆಳೆಗಳಿಗೆ ಬೆಂಬಲ ಬೆಲೆ ವ್ಯವಸ್ಥೆಯನ್ನು ಬಲಪಡಿಸಬೇಕು. ಎನ್‌ರೇಗಾವನ್ನು ವಿಸ್ತರಿಸಬೇಕಿದೆ ಹಾಗೂ ಆಹಾರ ಭದ್ರತೆ ಕಾನೂನನ್ನು ದೇಶಾದ್ಯಂತ ಅನುಷ್ಠಾನಗೊಳಿಸುವುದು ಅಗತ್ಯವಾಗಿದೆ.

ಕೃಷಿ ಬಿಕ್ಕಟ್ಟನ್ನು ನಿರ್ವಹಿಸಲು ವಿಫಲವಾಗಿರುವುದು ಮೋದಿ ಸರಕಾರದ ಎರಡು ವರ್ಷಗಳ ಕೊನೆಯಲ್ಲಿ ಅದರ ಅತಿ ದೊಡ್ಡ ವೈಫಲ್ಯವಾಗಿದೆ. ದೇಶದಲ್ಲಿನ ಬರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿನ ಅದರ ರೀತಿಯೇ ಇದಕ್ಕೆ ಹಿಡಿದ ಕನ್ನಡಿಯಾಗಿದೆ.

> ಜನರಿಗೆ ನೀರೂ ಇಲ್ಲ ಅಥವಾ ಕೆಲಸವೂ ಇಲ್ಲ ಮತ್ತು ಜಾನುವಾರುಗಳಿಗೆ ಮೇವೂ ಇಲ್ಲ ಅಥವಾ ನೀರೂ ಇಲ್ಲ ಎನ್ನುವಂಥ ಭಯಾನಕ ಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶಗಳ ಜನರು ತತ್ತರಿಸುತ್ತಿರುವ ಸಂದರ್ಭದಲ್ಲಿ ಭಾರತದ ಸರ್ವೋನ್ನತ ನ್ಯಾಯಾಲಯ ಸರಕಾರಗಳ ಬಗ್ಗೆ ಕಟು ಮಾತುಗಳನ್ನು ಹೇಳಿದೆ. ಅದರಲ್ಲೂ ಕೇಂದ್ರ ಸರಕಾರ ತನ್ನ ಹೊಣೆಯನ್ನು ಜಾರಿಸುವಂತಿಲ್ಲ ಎಂದು ಹೇಳಿದೆ.
> ಕೃಷಿ ಬಿಕ್ಕಟ್ಟನ್ನು ನಿರ್ವಹಿಸಲು ವಿಫಲವಾಗಿರುವುದು ಮೋದಿ ಸರಕಾರದ ಎರಡು ವರ್ಷಗಳ ಕೊನೆಯಲ್ಲಿ ಅದರ ಅತಿ ದೊಡ್ಡ ವೈಫಲ್ಯವಾಗಿದೆ. ದೇಶದಲ್ಲಿನ ಬರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿನ ಅದರ ರೀತಿಯೇ ಇದಕ್ಕೆ ಹಿಡಿದ ಕನ್ನಡಿಯಾಗಿದೆ.

ರಾಜಕೀಯ ಪಕ್ಷಗಳಿಗೆ ವಿದೇಶಿ ದೇಣಿಗೆಗೆ ಅವಕಾಶ ರಾಷ್ಟ್ರ–ವಿರೋಧಿ, ಪ್ರಜಾಪ್ರಭುತ್ವ–ವಿರೋಧಿ ಹೆಜ್ಜೆ



ಪ್ರಕಾಶ ಕಾರಟ್
ಅನುವಾದ: ವಿಶ್ವ

> ಬಿಜೆಪಿ ವಿದೇಶಿ ಕಂಪನಿಯೊಂದರಿಂದ ದೇಣಿಗೆ ಪಡೆದಿದೆ ಎಂಬ ಆರೋಪದಿಂದ ಮುಕ್ತವಾಗುವಂತೆ ಅನುಕಾಲ ಮಾಡಿ ಕೊಡುವ ಉದ್ದೇಶದಿಂದಲೇ ಎಫ್‌ಸಿಆರ್‌ಎ ಗೆ ಕಳ್ಳಮಾರ್ಗದಿಂದ ತಿದ್ದುಪಡಿ ತರಲು ಹಣಕಾಸು ಮಸೂದೆಯನ್ನು ಬಳಸಿ ಕೊಂಡಿರುವುದು ಮೋದಿ ಸರಕಾರ ಶಾಸಕಾಂಗ ಪ್ರಕ್ರಿಯೆಯನ್ನು ಕುತಂತ್ರದಿಂದ ಬಳಸಿಕೊಳ್ಳುತ್ತಿರುವುದಕ್ಕೆ ಇನ್ನೊಂದು ನಿದರ್ಶನವಾಗಿದೆ.
> ಅದೀಗ ರಾಜಕೀಯ ಪಕ್ಷಗಳನ್ನು ಮಲಿನಗೊಳಿಸಲು, ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ದುಷ್ಟ ವಿದೇಶಿ ಪ್ರಭಾವವನ್ನು ಹರಿಯ ಬಿಟ್ಟಿದೆ.

ಭಾರತದಲ್ಲಿನ ರಾಜಕೀಯ ಪಕ್ಷಗಳಿಗೆ ವಿದೇಶಿ ಕಂಪೆನಿಗಳು ದೇಣಿಗೆ ನೀಡುವುದಕ್ಕೆ ಅವಕಾಶ ಕಲ್ಪಿಸುವ ಅಪಾಯಕಾರಿ ಹೆಜ್ಜೆಯನ್ನು ಬಿಜೆಪಿ ಸರಕಾರ ಇಟ್ಟಿದೆ. ಇದುವರೆಗೆ, ವಿದೇಶಿ ದೇಣಿಗೆ (ನಿಯಂತ್ರಣ) ಕಾನೂನು (ಎಫ್‌ಸಿಆರ್‌ಎ) ಪ್ರಕಾರ ರಾಜಕೀಯ ಪಕ್ಷಗಳು ವಿದೇಶಿ ಹಣವನ್ನು ಪಡೆಯುವುದನ್ನು ನಿರ್ಬಂಧಿಸಲಾಗಿತ್ತು. ವಿದೇಶಿ ಕಂಪೆನಿಗಳು ಹಾಗೂ ಅವುಗಳ ಭಾರತೀಯ ಉಪಸಂಸ್ಥೆಗಳು ಕೂಡ ಅದರಲ್ಲಿ ಒಳಗೊಂಡಿದ್ದವು.

ಇದುವರೆಗೆ, ಭಾರತದಲ್ಲಿ ಕಾರ್ಯನಿರ್ವಹಿಸುವ ಯಾವುದೇ ಒಂದು ಕಂಪೆನಿಯ ಶೇಕಡಾ 51 ಅಥವಾ ಅದಕ್ಕಿಂತ ಹೆಚ್ಚಿನ ಷೇರು ಬಂಡವಾಳವು ವಿದೇಶಿ ಮೂಲದ್ದಾಗಿದ್ದರೆ ಅದನ್ನು ವಿದೇಶಿ ಕಂಪೆನಿ ಎಂದು ಪರಿಗಣಿಸಲಾಗುತ್ತಿತ್ತು. ಈ ಅಂಶವನ್ನೇ ಈ ವರ್ಷದ ಹಣಕಾಸು ಮಸೂದೆಯಲ್ಲಿ ತಿದ್ದುಪಡಿ ಮಾಡಲಾಗಿದೆ. ವಿದೇಶಿ ಹೂಡಿಕೆಯು ಶೇಕಡಾ 50ಕ್ಕಿಂತ ಹೆಚ್ಚಿದ್ದರೂ ವಿದೇಶಿ ವಿನಿಮಯ ನಿರ್ವಹಣೆ ಕಾನೂನು (ಫೆಮಾ) ಅಡಿಯಲ್ಲಿ ನಿಗದಿಪಡಿಸಿದ ಮಿತಿಯ ಒಳಗಡೆ ವಿದೇಶಿ ಬಂಡವಾಳ ಇದ್ದರೆ ಅದನ್ನು ವಿದೇಶಿ ಕಂಪನಿ ಎಂದು ಪರಿಗಣಿಸಲಾಗದು ಎಂದೀಗ ಹಣಕಾಸು ಮಸೂದೆಯಲ್ಲಿ ತಿದ್ದುಪಡಿ ಮಾಡಲಾಗಿದೆ.

ಇದರರ್ಥ ಏನೆಂದರೆ, ಒಂದು ವೇಳೆ ಯಾವುದಾದರೂ ಒಂದು ವಲಯದಲ್ಲಿ, ಉದಾಹರಣೆಗೆ ಟೆಲಿಕಾಮ್ ವಲಯ, ಶೇಕಡಾ 74 ಬಂಡವಾಳ ಹೂಡಿಕೆಗೆ ಅವಕಾಶ ನೀಡಿದರೆ ಆಗ ಬಹುತೇಕ ವಿದೇಶಿ ಪಾಲುದಾರಿಕೆ ಹೊಂದಿರುವ ಒಂದು ಕಂಪನಿಯನ್ನು ಒಂದು ವಿದೇಶಿ ಕಂಪನಿ ಎಂದು ಪರಿಗಣಿಸಲಾಗದು. ಈ ರೀತಿಯಾಗಿ, ಟೆಲಿಕಾಂ ಕಂಪನಿಯಾದ ವೊಡಾಫೋನ್ ಅನ್ನು ಭಾರತೀಯ ಕಂಪನಿ ಎಂದು ಪರಿಗಣಿಸಲಾಗುವುದು!.

ಇದುವರೆಗೆ ಭಾರತೀಯ ಕಾರ್ಪೊರೇಟ್ ಕಂಪನಿಗಳು ನೀಡುವ ಕಾನೂನು ಬದ್ಧ ದೇಣಿಗೆಯಂತೆ ಈಗ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಐಬಿಎಂ, ಸ್ಯಾಮ್‌ಸಂಗ್, ಜನರಲ್ ಮೋಟರ್ಸ್ ಮತ್ತಿತರ ಬಹುರಾಷ್ಟ್ರೀಯ ಕಂಪನಿಗಳು ರಾಜಕೀಯ ಪಕ್ಷಗಳಿಗೆ ಹಣಕಾಸು ನೆರವನ್ನು ನೀಡಬಹುದಾಗಿದೆ.

ಈ ರೀತಿಯ ಸಾರಾಸಗಟು ಬದಲಾವಣೆಯನ್ನು ತರುವುದರಿಂದ ಎಲ್ಲಾ ವಿದೇಶಿ ಕಂಪನಿಗಳು ಮತ್ತು ಬಹುರಾಷ್ಟ್ರೀಯ ಕಂಪನಿ(ಎಂಎನ್‌ಸಿ)ಗಳನ್ನು ಭಾರತೀಯ ಕಂಪನಿಗಳೆಂದು ಪರಿಗಣಿಸಲಾಗುತ್ತದೆ ಹಾಗೂ ಅವುಗಳು ನೊಂದಾಯಿತ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಸ್ವತಂತ್ರವಾಗಿರುತ್ತವೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮವನ್ನು ಬೀರಲಿದೆ ಹಾಗೂ ಇಡಿಯಾಗಿ ರಾಜಕೀಯ ಪಕ್ಷ ವ್ಯವಸ್ಥೆಯ ಮೇಲೆಯೇ ಪರಿಣಾಮ ಬೀರಲಿದೆ. ಎಂಎನ್‌ಸಿಗಳು ರಾಜಕೀಯ ವ್ಯವಸ್ಥೆಯಲ್ಲಿ ನೇರವಾಗಿ ಹಸ್ತಕ್ಷೇಪ ಮಾಡಲು ಹಾಗೂ ಸಂಸದೀಯ ಪ್ರಜಾಪ್ರಭುತ್ವದ ಸಮಗ್ರತೆಯನ್ನು ಬುಡಮೇಲು ಮಾಡಲು ಅವಕಾಶ ಮಾಡಿಕೊಡುತ್ತದೆ.

ಇಂಥ ಬದಲಾವಣೆಯಿಂದಾಗಿ, ವಿದೇಶಿ ಕಂಪನಿಗಳು ಎನ್‌ಜಿಓಗಳಿಗೆ ನೀಡುವ ದೇಣಿಗೆ ಕೂಡ ಕಾನೂನುಬದ್ಧ ಆಗುತ್ತದೆ. ಹೀಗಾಗಿ ಈ ಬದಲಾವಣೆಯು, ವಿವಿಧ ಸಾರ್ವಜನಿಕ ಚಟುವಟಿಕೆಗಳಿಗೆ ನೀಡಲಾಗುವ ವಿದೇಶಿ ನೆರವನ್ನು, ದೇಶದ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ರಕ್ಷಿಸುವ ಉದ್ದೇಶದಿಂದ ನಿಯಂತ್ರಿಸುವ ಎಫ್‌ಸಿಆರ್‌ಎದ ಉದ್ದೇಶವನ್ನೇ ತಲೆಕೆಳಗು ಮಾಡುತ್ತದೆ.


ಬಿಜೆಪಿ ವಿದೇಶಿ ಕಂಪನಿಯೊಂದರಿಂದ ದೇಣಿಗೆ ಪಡೆದಿದೆ ಎಂಬ ಆರೋಪದಿಂದ ಮುಕ್ತವಾಗುವಂತೆ ಅನುಕಾಲ ಮಾಡಿಕೊಡಲು ಈ ತಿದ್ದುಪಡಿ ತರಲಾಗುತ್ತಿದೆ ಎನ್ನುವುದು ಇನ್ನೂ ಖಂಡನಾರ್ಹ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ವಿದೇಶಿ ದೇಣಿಗೆ ನಿರ್ಬಂಧಿಸುವ ಎಫ್‌ಸಿಆರ್‌ಎ ನಿಯಮಗಳನ್ನು ಉಲ್ಲಂಘಿಸಿವೆ ಎಂದು 2014ರ ತೀರ್ಪೊಂದರಲ್ಲಿ ದೆಹಲಿ ಹೈಕೋರ್ಟ್ ಹೇಳಿತ್ತು. ಈ ಎರಡೂ ಪಕ್ಷಗಳು ವಿದೇಶಿ ಕಂಪನಿಯೊಂದರ ಉಪಸಂಸ್ಥೆ ವೇದಾಂತದಿಂದ ದೇಣಿಗೆಗಳನ್ನು ಪಡೆದಿದ್ದವು. ಉಭಯ ಪಕ್ಷಗಳು ಈ ತೀರ್ಪನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದು ವಿಚಾರಣೆಗೆ ಬಾಕಿಯಿದೆ. ಈ ಎರಡೂ ಪಕ್ಷಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 2010ರಿಂದಲೇ ಪೂರ್ವಾನ್ವಯವಾಗುವಂತೆ ಹಣಕಾಸು ಮಸೂದೆಯ ಮೂಲಕ ಎಫ್‌ಸಿಆರ್‌ಎಗೆ ತಿದ್ದುಪಡಿ ತರಲಾಗಿದೆ.

ಎಫ್‌ಸಿಆರ್‌ಎಗೆ ಕಳ್ಳಮಾರ್ಗದಿಂದ ತಿದ್ದುಪಡಿ ತರಲು ಹಾಗೂ ಇತರ ಕಾನೂನುಗಳಲ್ಲಿ ವಿದೇಶಿ ಕಂಪನಿಗಳಿಗೆ ಇರುವ ವ್ಯಾಖ್ಯಾನವನ್ನು ಬದಲಾಯಿಸಲು ಹಣಕಾಸು ಮಸೂದೆಯನ್ನು ಬಳಸಿಕೊಂಡಿರುವುದು ಮೋದಿ ಸರಕಾರ ಶಾಸಕಾಂಗ ಪ್ರಕ್ರಿಯೆಯನ್ನು ಕುತಂತ್ರದಿಂದ ಬಳಸಿಕೊಳ್ಳುತ್ತಿರುವುದಕ್ಕೆ ಇನ್ನೊಂದು ನಿದರ್ಶನವಾಗಿದೆ. ಇದಕ್ಕೂ ಮುನ್ನ ಅದು ಆಧಾರ್ ಮಸೂದೆಯನ್ನು ಲೋಕಸಭಾಧ್ಯಕ್ಷರ ಮೂಲಕ 'ಹಣ ಮಸೂದೆ'(ಮನಿ ಬಿಲ್) ಎಂದು ಘೋಷಿಸಿಕೊಂಡಿತ್ತು.


ವಿದೇಶಿ ಕಂಪನಿಗಳ ದೇಣಿಗೆಯನ್ನು ಕಾನೂನುಬದ್ಧ ಗೊಳಿಸುವುದು ರಾಷ್ಟ್ರ–ವಿರೋಧಿ ಹಾಗೂ ಪ್ರಜಾಪ್ರಭುತ್ವ–ವಿರೋಧಿ ಹೆಜ್ಜೆಯಾಗಿದೆ. ರಾಜಕೀಯ ಪಕ್ಷಗಳನ್ನು ಮಲಿನಗೊಳಿಸಲು ಹಾಗೂ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಮೋದಿ ಸರಕಾರ ದುಷ್ಟ ವಿದೇಶಿ ಪ್ರಭಾವವನ್ನು ಹರಿಯ ಬಿಟ್ಟಿದೆ.

ಈ ಅಪಾಯಕಾರಿ ತಿದ್ದುಪಡಿ ರದ್ದಾಗುವಂತೆ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ಕೆಲಸ ಮಾಡಬೇಕಿದೆ.

ಕೇರಳ ವಿಧಾನಸಭೆ ಸ್ಥಾನ ಮತ್ತು ಮತಗಳಿಕೆ



ಪಶ್ಚಿಮ ಬಂಗಾಳ ವಿಧಾನಸಭೆ ಸ್ಥಾನ ಮತ್ತು ಮತಗಳಿಕೆ



ಐದು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳ ಫಲಿತಾಂಶಗಳು

ಕೇರಳದಲ್ಲಿ ಎಡಶಕ್ತಿಗಳಿಗೆ ಐತಿಹಾಸಿಕ ವಿಜಯ

ಪಶ್ಚಿಮ ಬಂಗಾಲದಲ್ಲಿ ಕಳಪೆ ಪ್ರದರ್ಶನ; ತಮಿಳುನಾಡಿನಲ್ಲಿ ಎರಡು ಧ್ರುವಗಳ ನಡುವೆ ಹಿಪ್ಪೆ

ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿನ ವಿಧಾನ ಸಭಾ ಚುನಾವಣೆಗಳ ಫಲಿತಾಂಶಗಳು ಪ್ರಕಟವಾಗಿವೆ. ಇದರಲ್ಲಿ ಕೇರಳದಲ್ಲಿ ಎಡ ಪ್ರಜಾಪ್ರಭುತ್ವ ರಂಗ ಭರ್ಜರಿ ಜಯ ಗಳಿಸಿದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಪ್ರದರ್ಶನ ಬಹಳ ಕಳಪೆಯಾಗಿದೆ. ತೃಣಮೂಲ ಕಾಂಗ್ರೆಸ್‌ನ್ನು ಮತದಾರರು ಮತ್ತೆ ಆರಿಸಿದ್ದಾರೆ. ತಮಿಳುನಾಡಿನಲ್ಲಿ ಮತ್ತೆ ಎಐಎಡಿಎಂಕೆ ಅಧಿಕಾರಕ್ಕೆ ಬಂದಿದೆ, ಎಡ ಪಕ್ಷಗಳು ಇರುವ ಆರು ಪಕ್ಷಗಳ ಜನ ಕಲ್ಯಾಣ ರಂಗ ಯಶಸ್ಸು ಪಡೆದಿಲ್ಲ. ಎರಡು ಧ್ರುವಗಳ ನಡುವಿನ ಧ್ರುವೀಕರಣದಲ್ಲಿ ಹಿಂಡಿ–ಹಿಪ್ಪೆಯಾಗಿದೆ. ಅಸ್ಸಾಂನಲ್ಲಿ ಮೊತ್ತ ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಮೈತ್ರಿಕೂಟ ಅಧಿಕಾರ ಗಳಿಸಿದೆ.

ಈ ಕುರಿತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.

ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಪ್ರಭುತ್ವ ರಂಗ(ಎಲ್‌ಡಿಎಫ್) ದಲ್ಲಿ ವಿಶ್ವಾಸವನ್ನು ಘಂಟಾಘೋಷವಾಗಿ ಸಾರಿರುವ ಕೇರಳದ ಜನತೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ನಮಿಸುತ್ತದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಅಭೂತಪೂರ್ವ ಭ್ರಷ್ಟಾಚಾರ ಮತ್ತು ದುರಾಡಳಿತದ ದಾಖಲೆಯನ್ನು ಕೇರಳದ ಮತದಾರರು ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ.

ಕೇರಳದ ಸರ್ವತೋಮುಖ ಅಭಿವೃದ್ಧಿಗೆ ಎಲ್‌ಡಿಎಫ್ ಪ್ರಣಾಳಿಕೆಯಲ್ಲಿ ವಿವರಿಸಿದ ಸಕಾರಾತ್ಮಕ ಕಾರ್ಯಕ್ರಮವನ್ನು ಜನತೆ ಅತ್ಯುತ್ಸಾಹದಿಂದ ಸ್ವೀಕರಿಸಿದ್ದಾರೆ.

ಬಿಜೆಪಿಗೆ ಮೊತ್ತ ಮೊದಲ ಬಾರಿಗೆ ಕೇರಳದಲ್ಲಿ ಖಾತೆ ತೆರೆಯಲು ಸಾಧ್ಯವಾಗಿದೆ. ಇದರಲ್ಲಿ ಅದಕ್ಕೆ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಸಮರ್ಥ ನೆರವೂ ಸಿಕ್ಕಿದೆ. ಬಿಜೆಪಿ ಗೆದ್ದಿರುವ ನೇಮಂ ಕ್ಷೇತ್ರದಲ್ಲಿ ಹಲವಾರು ಮತಗಟ್ಟೆಗಳಲ್ಲಿ ಅದಕ್ಕೆ ಪೋಲಿಂಗ್ ಏಜೆಂಟರುಗಳನ್ನು ನಿಲ್ಲಿಸಲೂ ಆಗಿಲ್ಲ. ಕೇರಳದ ಜನತೆ ಪ್ರಧಾನ ಮಂತ್ರಿ ಮತ್ತು ಬಿಜೆಪಿ ಅಧ್ಯಕ್ಷರ ಆಕ್ರಾಮಕ ನೇತೃತ್ವದ ಕೋಮುವಾದಿ ಧ್ರುವೀಕರಣದ ರಾಜಕೀಯವನ್ನು ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ.

ಪಶ್ಚಿಮ ಬಂಗಾಲ

ಈ ಚುನಾವಣೆಗಳಲ್ಲಿ ಟಿಎಂಸಿ ಸರಕಾರವನ್ನು ಮತ್ತೆ ಆರಿಸಿದ ಪಶ್ಚಿಮ ಬಂಗಾಲದ ಮತದಾರರ ತೀರ್ಪನ್ನು ಸಿಪಿಐ(ಎಂ) ಗೌರವಿಸುತ್ತದೆ. ಭಯೋತ್ಪಾದನೆ ಮತ್ತು ಬೆದರಿಕೆಗಳನ್ನು ಎದುರಿಸಿ ಸಿಪಿಐ(ಎಂ) ಮತ್ತು ಎಡರಂಗ ರಾಜ್ಯದಲ್ಲಿ ಪ್ರಜಾಪ್ರಭುತ್ವ, ಶಾಂತಿ ಮತ್ತು ನೆಮ್ಮದಿಯ ವಾತಾವರಣವನ್ನು ಮರುಸ್ಥಾಪಿಸಲು ಪ್ರಚಾರ ನಡೆಸಿದವು. ಚುನಾವಣಾ ಪ್ರಕ್ರಿಯೆಯಲ್ಲಿ ಹಲವು ಎಡ ಕಾರ್ಯಕರ್ತರು ಪ್ರಾಣ ಕಳಕೊಂಡಿದ್ದಾರೆ. ಮತದಾನದ ನಂತರದ ಅವಧಿಯಲ್ಲಿಯೂ, ಮತಗಣನೆಯ ವೇಳೆಯಲ್ಲೂ ಹಿಂಸಾಚಾರ ಮತ್ತು ನಮ್ಮ ಮೇಲೆ ದಾಳಿಯ ವರದಿಗಳು ಬಂದಿವೆ. ಈ ಚುನಾವಣೆಗಳಲ್ಲಿ ಭಯೋತ್ಪಾದನೆಯನ್ನು ಎದುರಿಸಿ ಪ್ರಚಾರ ನಡೆಸಿದ ನಮ್ಮ ಎಲ್ಲ ಪಕ್ಷದ ಸದಸ್ಯರುಗಳಿಗೆ, ಮತ್ತು ಹಿತೈಷಿಗಳಿಗೆ ನಮ್ಮ ಸಲಾಂ.

ಸಿಪಿಐ(ಎಂ) ಕೇಂದ್ರ ಸಮಿತಿ ಮತ್ತು ಪಶ್ಚಿಮ ಬಂಗಾಲ ರಾಜ್ಯ ಸಮಿತಿ ಎಡರಂಗದ ಕಳಪೆ ಪ್ರದರ್ಶನಕ್ಕೆ ಕಾರಣಗಳು ಮತ್ತು ಅಂಗೀಕರಿಸಿದ ಚುನಾವಣಾ ಕಾರ್ಯತಂತ್ರದ ಬಗ್ಗೆ ಪರೀಕ್ಷೆ ನಡೆಸಿ ಸರಿಯಾದ ಪಾಠಗಳನ್ನು ಕಲಿಯುತ್ತವೆ.

ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯ ಮತಪಾಲು 2014ರ ಲೋಕಸಭಾ ಚುನಾವಣೆಯಲ್ಲಿ 16.84 ಶೇ. ಇದ್ದದ್ದು ಈ ವಿಧಾನಸಭಾ ಚುನಾವಣೆಗಳಲ್ಲಿ 10.20 ಶೇ.ಕ್ಕೆ ಇಳಿದಿದೆ. ಅದು ಕೆಲವು ಸೀಟುಗಳನ್ನು ಪಡೆಯಲು ಸಾಧ್ಯವಾಗಿರುವುದು ಬಿಜೆಪಿ ಮತ್ತು ಟಿಎಂಸಿ ನಡುವಿನ ಮತ ವರ್ಗಾವಣೆಯ ನೆರವಿನಿಂದ ಎಂಬುದು ಸ್ಪಷ್ಟ.

ಸಿಪಿಐ(ಎಂ) ಮತ್ತು ಎಡರಂಗ ಪಶ್ಚಿಮ ಬಂಗಾಲದಲ್ಲಿ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸುವ ಮತ್ತು ಭಯೋತ್ಪಾದನೆಯ ವಿರುದ್ಧ ತಮ್ಮ ಹೋರಾಟವನ್ನು ಮುಂದುವರೆಸುತ್ತವೆ.

ತಮಿಳುನಾಡು

ತಮಿಳುನಾಡಿನಲ್ಲಿ ಜನತೆಯ ತೀರ್ಪು ಮತ್ತೆ ಎಐಎಡಿಎಂಕೆ ಸರಕಾರವನ್ನು ತಂದಿದೆ. ಹಣಬಲ ಮತ್ತು ಭ್ರಷ್ಟಾಚಾರ ಒಂದು ಮಹತ್ವದ ಪಾತ್ರ ವಹಿಸಿದೆ. ಎಐಎಡಿಎಂಕೆ ಮತ್ತು ಡಿಎಂಕೆ ಎರಡೂ ಎಲ್ಲ 234 ಚುನಾವಣಾ ಕ್ಷೇತ್ರಗಳಲ್ಲಿ ಮತಗಳಿಗೆ ಹಣ ಹಂಚಿದ್ದಾರೆ.

ಡಿಎಂಡಿಕೆ, ಎಂಡಿಎಂಕೆ, ಟಿಎಂಸಿ, ವಿಸಿಕೆ, ಸಿಪಿಐ(ಎಂ) ಮತ್ತು ಸಿಪಿಐ ಸೇರಿಕೊಂಡು ರಚಿಸಿದ ಆರು ಪಕ್ಷಗಳ ಮೈತ್ರಿಕೂಟ ರಾಜ್ಯದ ಎರಡು ಧ್ರುವಗಳ ನಡುವಿನ ಧ್ರುವೀಕರಣದಲ್ಲಿ ಹಿಂಡಿ ಹಿಪ್ಪೆಯಾಗಿದೆ. ಈ ಮೈತ್ರಿಕೂಟ ತಮಿಳುನಾಡಿನಲ್ಲಿ ಜನತೆಯ ಹಿತಗಳನ್ನು ರಕ್ಷಿಸಲು ಮತ್ತು ಪ್ರತಿಪಾದಿಸಲು ತಮ್ಮ ಆಂದೋಲನವನ್ನು ಮುಂದುವರೆಸುವುದಾಗಿ ಪ್ರಕಟಿಸಿದೆ.

ಅಸ್ಸಾಂ

ಅಸ್ಸಾಂ ನಲ್ಲಿ ಬಿಜೆಪಿ ಮೊದಲ ಬಾರಿಗೆ ಸರಕಾರ ರಚಿಸಲು ಸಿದ್ಧವಾಗಿದೆ. ಒಂದು ಪರಿಣಾಮಕಾರಿ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಪರ್ಯಾಯವಿಲ್ಲದಿರುವುದು, ಕಾಂಗ್ರೆಸ್ ಸರಕಾರದ ಮೂರು ಅವಧಿಗಳ 15 ವರ್ಷದ ದೀರ್ಘ ಆಳ್ವಿಕೆಯ ವಿರುದ್ಧ ಉಂಟಾದ ಬೃಹತ್ ಪ್ರಮಾಣ ಅಧಿಕಾರಸ್ಥರ–ವಿರುದ್ಧವಾದ ಭಾವನೆ ಮತ್ತು ರಾಜ್ಯದಲ್ಲಿ ಅದರ ಜನ–ವಿರೋಧಿ ಧೋರಣೆಗಳಿಂದ ಬಿಜೆಪಿಗೆ ಪ್ರಯೋಜನ ದಕ್ಕಿದೆ.

ಪುದುಚೇರಿ

ಸಿಪಿಐ(ಎಂ) ಬೆಂಬಲಿತ ಪಕ್ಷೇತರ ಅಭ್ಯರ್ಥಿ ಮಾಹೆ ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದು ಮೊದಲ ಬಾರಿಗೆ ಪುದುಚೇರಿ ವಿಧಾನಸಭೆ ಪ್ರವೇಶಿಸಲು ಸಾಧ್ಯವಾಗಿದೆ.



ಪಿಣರಾಯಿ ವಿಜಯನ್ ಕೇರಳದ ನೂತನ ಮುಖ್ಯಮಂತ್ರಿ

ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಪಿಣರಾಯಿ ವಿಜಯನ್ ಅವರನ್ನು ನೂತನ ಎಲ್‌ಡಿಎಫ್ ಸರ್ಕಾರದ ಮುಖ್ಯಮಂತ್ರಿಯಾಗಿ ಆರಿಸಲಾಗಿದೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ತಿಳಿದು ಬಂದಿದೆ. ಇದನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಮೇ 20 ರಂದು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಪ್ರಕಟಿಸಿದ್ದಾರೆ. ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಮತ್ತು ಹಿಂದಿನ ಎಲ್‌ಡಿಎಫ್ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ವಿ.ಎಸ್ ಅಚ್ಯುತಾನಂದನ್ ರವರು ಈ ಪತ್ರಿಕಾ ಸಮ್ಮೇಳನದಲ್ಲಿ ಹಾಜರಿದ್ದರು.



ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಪಕ್ಷಗಳ ಬಲಾಬಲ

	2011	2016
ಸಿಪಿಐ(ಎಂ)	40	26
ಸಿಪಿಐ	02	01
ಎ.ಐ.ಎಫ್.ಬಿ.	11	02
ಆರ್.ಎಸ್.ಪಿ.	07	03
ಎಸ್.ಯು.ಸಿ.ಐ(ಸಿ)	01	
ಸಮಾಜವಾದಿ ಪಕ್ಷ	01	
ಡಿ.ಎಸ್.ಪಿ.	01	
ಪಕ್ಷೇತರರು	02	01
ಟಿ.ಎಂ.ಸಿ.	184	211
ಕಾಂಗ್ರೆಸ್	42	44
ಜಿ.ಜೆ.ಎಂ	03	03
ಬಿಜೆಪಿ	–	03




ಕೇರಳದಲ್ಲಿ 30 ಸಾವಿರಕ್ಕೂ ಹೆಚ್ಚು ಮತಗಳ ಗೆಲುವಿನ ಅಂತರ (ಸಿಪಿಐಎಂ)


	ಕ್ಷೇತ್ರ	ಅಭ್ಯರ್ಥಿ	ಪಡೆದ ಮತ	ಅಂತರ
1	ಮತ್ತನೂರು	ಇ.ಪಿ.ಜಯರಾಜನ್	84,030	43,381
2	ಕಲ್ಲಿಸಿರಿ	ಟಿ.ವಿ.ರಾಜೇಶ್	83,006	42,891
3	ಕೊಟ್ಟರಾಕಪ್ಪ	ಪಿ.ಆಯಿಶಾ ಪೊಟ್ಟಿ	83,443	42,632
4	ತಲಿಪರಂಬ	ಜೆಮ್ಸ್ ಮಾಥಿವ್	91,106	40,617
5	ಅತ್ತಿಂಗಲ್	ಬಿ.ಸತ್ಯನ್	72,808	40,383
6	ಪಯ್ಯನೂರು	ಸಿ.ಕೃಷ್ಣನ್	83,226	40,263
7	ಅರೂರು	ಎ.ಎಂ.ಅರೀಫ್	84,720	38,519
8	ಪುತ್ತುಕಾಡ್	ಸಿ.ರವೀಂದ್ರನಾಥ್	79,464	38,478
9	ಧರ್ಮಡಂ	ಪಿನರಾಯ್ ವಿಜಯನ್	87,329	36,905
10	ಅಲತೂರು	ಕೆ.ಡಿ.ಪ್ರಸೆನನ್	71,206	36,060
11	ಥಲಸೇರಿ	ಎ.ಎನ್.ಶಂಶೀರ್	70,741	34,117
12	ಅಲಪುಳ	ಡಾ.ಟಿ.ಎಂ.ಥಾಮಸ್ ಐಸಾಕ್	83,211	31,032
13	ಕುಂದರ	ಜೆ.ಮೇರಿಕುಟ್ಟಿ ಅಮ್ಮ	79,047	30,460

ಕೇರಳ ವಿಧಾನಸಭೆಯಲ್ಲಿ ಪಕ್ಷಗಳ ಬಲಾಬಲ

	2011	2016
ಎಲ್‌ಡಿಎಫ್	68	91
ಸಿಪಿಐ(ಎಂ)	45	58
ಸಿಪಿಐ	13	19
ಜೆಡಿಎಸ್	04	03
ಎನ್‌ಸಿಪಿ	02	02
ಕೇ.ಕಾಂಗ್ರೆಸ್(ಬಿ)	01	01
ಸಿಎಂಪಿಕೆ		01
ಎನ್‌ಎಸ್‌ಸಿ		01
ಕಾಂಗ್ರೆಸ್(ಸೆಕ್ಯೂಲರ್)		01
ಪಕ್ಷೇತರರು		05
ಇರರರು	03	
ಯುಡಿಎಫ್	71	47
ಕಾಂಗ್ರೆಸ್	38	22
ಐಯುಎಂಎಲ್	20	18
ಕೇ.ಕಾಂಗ್ರೆಸ್(ಎಂ)	09	06
ಕೇ.ಕಾಂಗ್ರೆಸ್(ಜಾ)	01	01
ಇತರರು	03	
ಎನ್‌ಡಿಎ		01
ಬಿಜೆಪಿ		01
ಪಕ್ಷೇತರರು	01	01



ಅಸ್ಸಾಂ		
ಪಕ್ಷ	ಗೆದ್ದ ಸ್ಥಾನಗಳು	ಮತಗಳಿಕೆ ಶೇ.
ಬಿಜೆಪಿ +	86	41.5
ಕಾಂಗ್ರೆಸ್	26	31.0
ಎಐಯುಡಿಎಫ್	13	13.0
ಇತರರು	1	
ಎಡರಂಗ	–	0.8






ತಮಿಳುನಾಡು		
ಪಕ್ಷ	ಸ್ಥಾನಗಳು	ಮತಗಳಿಕೆ(%)
ಅಣ್ಣಾ ಡಿಎಂಕೆ	134	40.8
ಡಿಎಂಕೆ	98	31.06
ಕಾಂಗ್ರೆಸ್	08	6.4
ಐಯುಎಂಲ್	01	0.7
ಬಿಜೆಪಿ	–	2.8
ಪಿಡಬ್ಲ್ಯೂಎಫ್	–	10.5


ಪುದುಚೇರಿ		
ಪಕ್ಷ	ಸ್ಥಾನಗಳು	ಮತಗಳಿಕೆ(%)
ಕಾಂಗ್ರೆಸ್	15	30.6
ಡಿಎಂಕೆ	02	8.9
ಅಣ್ಣಾ ಡಿಎಂಕೆ	04	16.8
ಎನ್‌ಆರ್‌ಸಿ	08	28.1
ಪಕ್ಷೇತರು (ಎಡಬೆಂಬಲಿತ)	1	1.5
ಬಿಜೆಪಿ	–	2.4

ಕೇರಳದಲ್ಲಿ 30 ಸಾವಿರಕ್ಕಿಂತ ಹೆಚ್ಚು ಮತಗಳ ಅಂತರದಿಂದ ಗೆದ್ದ ಸಿಪಿಐ(ಎಂ)ನ ಅಭ್ಯರ್ಥಿಗಳು


ಡಾ.ಥಾಮಸ್ ಐಸಾಕ್


ಇ.ಪಿ.ಜಯರಾಜನ್


ಸಿ.ಕೃಷ್ಣನ್


ಟಿ.ವಿ.ರಾಜೇಶ್


ಕೆ.ಡಿ.ಪ್ರಸೆನನ್


ಜೆ.ಮೇರಿಕುಟ್ಟಿ ಅಮ್ಮ


ಬಿ.ಸತ್ಯನ್


ಪಿ.ಆಯಿಶಾ ಪೊಟ್ಟಿ


ಸಿ.ರವೀಂದ್ರನಾಥ್


ಎ.ಎನ್.ಶಂಶೀರ್

ಪಶ್ಚಿಮ ಬಂಗಾಳದಲ್ಲಿ ಎಡರಂಗದ ನೇತೃತ್ವದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ಗೆಲುವು

ಕ್ಷೇತ್ರ	ಸಿಪಿಐ(ಎಂ) ಅಭ್ಯರ್ಥಿ ಹೆಸರು	ಮತಗಳಿಕೆ	ಸಮೀಪದ ಪ್ರತಿಸ್ಪರ್ಧಿ	ಪಡೆದ ಮತಗಳು	ಗೆಲುವಿನ ಅಂತರ	ಬಿಜೆಪಿ
ಬರ್ಜೋರ್	ಸುಜೀತ್ ಚಕ್ರಬೋರ್ತಿ	86,873	ಸೋಹನ್ ಚಕ್ರಬೋರ್ತಿ	86,257	616	15,991
ಬಶೀರತ್ ಉತ್ತರ್	ರಫೀಕುಲ್ ಇಸ್ಲಾಂ ಮೊಂದಲ್	97,828	ಎಟಿಎಂ ಅಬ್ದುಲ್	97,336	492	13,072
ಭಗವಾನ್ ಗೋಲ	ಮಹಾಸಿನ ಆಲಿ	1,05,037	ಅಬುಸುಫ್ಯೆನ್ ಸರ್ಕಾರ	68,732	36,305	5,278
ಡೊಮ್‌ಕಲ್	ಅನಿಸೂರ್ ರೆಹಮಾನ್ ಸರ್ಕಾರ್	71,703	ಸೌಮಿಕ್ ಸುಸ್ಯೆನ್	64,813	6,890	4,652
ಡಮ್‌ಡಮ್ ಉತ್ತರ	ತಾನ್‌ಮೊಹಿಭಟ್ಟಾಚಾರ್ಯ	91,951	ಚಂದ್ರಿಮಾ ಭಟ್ಟಾಚಾರ್ಯ	85,410	6,549	15,420
ದುರ್ಗಪುರ್ ಪುರ್ಭ	ಸಂತೋಷ್ ದೇಬ್ರಯ್	84,200	ಪ್ರದೀಪ್ ಮಜುಂದರ್	75,069	9,131	23,302
ಗಜೋಲೆ	ದೀಪಾಲಿ ಬಿಸ್ವಾಸ್	85,949	ಸುಶೀಲ್ ಚಂದ್ರರಾಯ್	65,347	20,602	28,768
ಅಬೀಬ್‌ಪುರ್	ಕಾಗೇನ್‌ಮುರ್ಮು	64,095	ಅಮಲ್‌ಕಿಸ್ಕು	61,583	2,512	41,656
ಹಲ್ದಿಯಾ	ತಪಾಸಿ ಮೊಂಡಲ್	1,01,330	ಮಧುರೀಮ ಮಂಡಲ್	79,837	21,493	13,471
ಹರಿರಾಮಪುರ್	ರಫೀಕುಲ್ ಇಸ್ಲಾಂ	71,447	ಬಿಪ್ಲಾಬ್ ಮಿತ್ರ	66,943	4,504	19,845
ಹೇಮ್ತಾಬ್	ದೇಬೇಂದ್ರನಾಥರಾಯ್	80,419	ಸಬೀತಾ ಕ್ಷೇತ್ರಿ	67,293	13,136	40,795
ಜಾಧವ್‌ಪುರ್	ಸುಜನ್ ಚಕ್ರಬೋರ್ತಿ	98,977	ಮನೀಶ್ ಗುಪ್ತಾ	84,035	14,942	13,922
ಜಲಂಗಿ	ಅಬ್ದುಲ್‌ರಜಾಕ್ ಮಂಡಲ್	96,250	ಅಲೋಕದಾಸ್	70,983	25,267	14,050
ಜಮಲ್ ಪುರ್	ಸಮರ್ ಹಜ್ರಾ	85,491	ಉಜ್ಜಲ್ ಪ್ರಾಮಾಣಿಖ್	84,068	1,423	15,094
ಜಮುರಿಯ	ಜಹನಾರಖಾನ್	67,214	ವಿ. ಶಿವದಾಸನ್	59,457	7,757	22,040
ಕಮರಹಟ್ಟಿ	ಮನೀಶ್ ಮುಖರ್ಜಿ	62,194	ಮದನ್ ಮಿತ್ರ	57,996	4,198	10,797
ಕುಲ್‌ತಾಲಿ	ರಾಮ್‌ಶಂಕರ್ ಹಲ್ದೇರ್	73,932	ಗೋಪಾಲ್ ಮಜ್ಜಿ	62,212	11,720	10,376
ನಬ್‌ಗ್ರಾಮ್	ಕನಯಚಂದ್ರ ಮೊಂಡಲ್	99,545	ದಿಲೀಪ್ ಸಹ್	61,102	38,443	13,084
ನಂನೂರ್	ಶ್ಯಾಮೀಲಿ ಪ್ರಧಾನ್	1,04,374	ಗದಾಧರ್ ಹಜ್ರ	78,644	25,730	18,502
ಪಂದುಯ	ಹಜ್ಮದ್ ಹುಸ್ಯೆನ್	91,489	ಶಾಹೀದ್ ರಹೀಂ ನಬಿ	90,097	1,392	17,081
ಪಂಸ್ಕೂರ ಪುರ್ಬ	ಇಬ್ರಾಹಿಂ ಆಲಿ	85,334	ಬಿಪ್ಲಬ್ ರಾಯ್ ಚೌಧರಿ	80,567	4,767	10,041
ಪುರ್ಬಸ್ತಲಿ ಉತ್ತರ್	ಪ್ರದೀಪ್ ಕುಮಾರ್ ಸಹ	84,549	ತಪನ್ ಚಟರ್ಜಿ	81,721	2,828	22,410
ರಣಾಗತ್ ದಕ್ಷಿಣ್	ರಾಮ್‌ಬಿಸ್ವಾಸ್	1,04,159	ಅಬಿರ್‌ರಂಜನ್ ಬಿಸ್ವಾಸ್	86,906	17,253	18,114
ರಾಣಿಗಂಜ್	ರುನು ದುತ್ತ	74,995	ಬಾನೋನರ್ಗಿಸ್	62,610	12,385	32,214
ಸಿಲಿಗುರಿ	ಅಶೋಕ ಭಟ್ಟಚಾರ್ಯ	78,054	ಭಾಚಿಂಗ್ ಭುಟಿಯಾ	63982	14,072	19,300
ಸೋನಾಮುಖಿ	ಅಜಿತ್‌ರಾಯ್	86,126	ದೀಪಾಲಿಸಹಾ	77,406	8,719	15,118

ಕೇರಳದಲ್ಲಿ ಹತಾಶ ಆರೆಸ್ಸೆಸ್ ಹಲ್ಲೆಗಳು

ಕೇರಳದ ಚುನಾವಣೆಗಳಲ್ಲಿ ಆರೆಸ್ಸೆಸ್ ಮಂದಿ ಹಲವೆಡೆ ಮಾರಣಾಂತಿಕ ಹಲ್ಲೆಗಳನ್ನು ನಡೆಸಿದ್ದಾರೆ. ಇದನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇಲ್ಲಿ ತಮ್ಮ ಶೋಚನೀಯ ಸೋಲಿನಿಂದ ಹತಾಶರಾಗಿ ಅವರು ಈ ದಾಳಿಗಳನ್ನು ನಡೆಸಿದ್ದಾರೆ ಎಂದು ಹೇಳಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಪಿನರಾಯಿ ವಿಜಯನ್‌ರವರನ್ನು ಆರಿಸಿದ ಧರ್ಮದಂ ಕ್ಷೇತ್ರದಲ್ಲಿ ಎಲ್‌ಡಿಎಫ್ ವಿಜಯ ರ್‍ಯಾಲಿಯ ಮೇಲೆ ಬಾಂಬ್ ಎಸೆದುದರಿಂದ ಒಬ್ಬ ಸಿಪಿಐ(ಎಂ) ಕಾರ್ಯಕರ್ತರ ಸಾವು ಸಂಭವಿಸಿದೆ, ಇತರ ಐದು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಕಾಂಜಂಗಾಡ್‌ನಲ್ಲಿ ವಿಜಯೋತ್ಸವ ರ್‍ಯಾಲಿಯ ಮೇಲೆ ಆರೆಸ್ಸೆಸ್ ದಾಳಿಯಲ್ಲಿ ಹೊಸದಾಗಿ ಚ಼ಂ ನಾ ಯಿ ಂ ತ಼ ರಾ ದ಼ ಶಾಸಕ ಮತ್ತು ಇನ್ನೊಬ್ಬ ಹಿರಿಯ ಸಿಪಿಐ(ಎಂ) ಮುಖಂಡರನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಗಿ ಬಂದಿದೆ.

ತ್ರಿಶೂರ್ ಮತ್ತು ತಿರುವನಂತಪುರ ಜಿಲ್ಲೆಗಳಿಂದಲೂ ಇಂತಹ ದಾಳಿಗಳ ವರದಿಗಳು ಬಂದಿವೆ. ನೇಮಂ ಕ್ಷೇತ್ರದಲ್ಲಿ ಮಾಜಿ ಶಾಸಕ ಮತ್ತು ಸಿಪಿಐ(ಎಂ) ಅಭ್ಯರ್ಥಿ ಶಿವನ್‌ಕುಟ್ಟಿ ಕಚೇರಿಯ ಮೇಲೆ ದಾಳಿ ನಡೆದಿದೆ.

ಆರೆಸ್ಸೆಸ್ ಅಪರಾಧಿಗಳನ್ನು ತಕ್ಷಣವೇ ಹಿಡಿಯಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.



ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಪಿನರಾಯಿ ವಿಜಯನ್ ಸ್ಥಳಕ್ಕೆ ಭೇಟಿ ನೀಡಿದರು

ಸಮಾಜವಾದ ಪ್ರಸ್ತುತವೇ?....

ಪುಟ 6 ರಿಂದ

ಶ್ರಮವನ್ನು ಒದಗಿಸುತ್ತಿದ್ದ ಮಹಿಳೆಯರು ಹೋಟೆಲ್ ಸೇವೆ, ಕಟ್ಟಡ ನಿರ್ಮಾಣ ಮತ್ತು ಗಾರ್ಮೆಂಟ್ ಕೆಲಸಗಳಲ್ಲಿ ನಿರತರಾಗಿ ಶ್ರಮದ ಸ್ತ್ರೀಕರಣ ನಗರಗಳಲ್ಲಿ ಹೆಚ್ಚಿತು. ದಿನಕ್ಕೆ ಎಂಟು ಗಂಟೆಗೆ ಸೀಮಿತವಾಗಿದ್ದ ದುಡಿಮೆಯ ಅವಧಿ ಏಕಪಕ್ಷೀಯವಾಗಿ, ಬಲವಂತವಾಗಿ ಹತ್ತು, ಹನ್ನೆರಡು, ಹದಿನಾಲ್ಕು ಗಂಟೆಗಳಿಗೆ ಹೆಚ್ಚಿನ ವೇತನರಹಿತವಾಗಿ ವಿಸ್ತರಿಸಿತು. ದೇಶೀಯವಾಗಿ ಸಂಚಿತವಾದ ಸಂಪತ್ತನ್ನು ಯೋಜಿತ ಅಗತ್ಯ ಅಭಿವೃದ್ಧಿಗೆ ಬಳಸದೆ, ಐಷಾರಾಮೀ ಸೌಕರ್ಯಗಳಿಗೆ ಬಳಸಿದರೂ ದೇಶ ಆರ್ಥಿಕವಾಗಿ ದಿವಾಳಿಯಾಗುವುದಿಲ್ಲ. ಆದರೆ ಜಾಗತಿಕ ಹಣಕಾಸು ಸಂಸ್ಥೆಗಳಿಂದ ಏಕಪಕ್ಷೀಯ ಶರತ್ತುಗಳೊಂದಿಗೆ ಪಡೆದ ಸಾಲವನ್ನು ಮೂಲ ಸೌಕರ್ಯದ ಅಭಿವೃದ್ಧಿಗೆಂದು ಬಳಸಿದರೆ ಸಾಲದ ಹೊರೆ ಜನರಿಗೆ, ಬಡ್ಡಿ ಬ್ಯಾಂಕುಗಳಿಗೆ ಮತ್ತು ಲಾಭ ಉದ್ಯಮಿಗಳಿಗೆ, ಕಮೀಷನ್ ಜಾಗತಿಕ ಕರಾರುಗಳಿಗೆ ಸಹಿಹಾಕುವ ಮಧ್ಯವರ್ತಿಗಳಾದ ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ದೊರೆಯುತ್ತದೆ. ಸರಕು ಮತ್ತು ಸೇವೆಗಳ ಉತ್ಪಾದನೆಗಿಂತ ಹಣದ ಕೈ ಬದಲಾವಣೆಯೇ ಮೇಲುಗೈ ಪಡೆಯುವುದರಿಂದ ಲಂಚ, ಕಪ್ಪುಹಣ, ಭ್ರಷ್ಟಾಚಾರ ಮತ್ತು ಹಗರಣಗಳು ಸಾಮಾನ್ಯವಾಗುತ್ತವೆ. ಕಳೆದ ಇಪ್ಪತ್ತು ವರ್ಷಗಳ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ರಾಜಕೀಯದಲ್ಲಿ ಭಾರತದಲ್ಲಿ ಆಗಿರುವ ಮಹತ್ತರ ಬದಲಾವಣೆಗಳು ಇವೇ.

ಅಭೌತಿಕ ವಾಸ್ತವದತ್ತ

ಎರಡನೆಯ ವಸಾಹತೀಕರಣದಲ್ಲಿ ಆವಿಷ್ಕಾರಗೊಂಡ ಮಾಹಿತಿ ತಂತ್ರಜ್ಞಾನದ ಸಾಧನಗಳಿಂದಾಗಿ ಭೌತಿಕ ವಾಸ್ತವಕ್ಕಿಂತ ಕಲ್ಪಿತ ವಾಸ್ತವ ಅಥವಾ ಅಭೌತಿಕ ವಾಸ್ತವಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಭೌತಿಕ ಆಸ್ತಿಯ ಖಾಸಗಿ ಹಕ್ಕನ್ನು ಬೌದ್ಧಿಕ ಆಸ್ತಿಗೆ ವಿಸ್ತರಿಸಲಾಗಿದೆ. ಸರಕುಗಳ ಸ್ವಾಮ್ಯ ಮತ್ತು ಸೇವೆಗಳ ಕೇಂದ್ರೀಕೃತ ನಿಯಂತ್ರಣ ದೇಶ–ಕಾಲ–ಗಡಿ–ಸಂವಿಧಾನ–ಸರ್ಕಾರಗಳ ಭೌತಿಕ ನಿರ್ಬಂಧಗಳನ್ನು ಮೀರಿ ಶ್ರಮಿಕರನ್ನು ಅಮಾನುಷವಾಗಿ ದುಡಿಸಿಕೊಳ್ಳುವುದು ಬಂಡವಾಳಗಾರರಿಗೆ ಸಾಧ್ಯವಾಗಿದೆ. ಇದಕ್ಕೆ ಪೂರಕವಾಗಿ, ಭೂ ಸ್ವಾಮ್ಯದಲ್ಲಿ ಖಾಸಗಿ ಒಡೆತನ, ಆಸ್ತಿಯ ಹಕ್ಕು ಮತ್ತು ಶ್ರಮಸಂಬಂಧಿ ಕಾನೂನುಗಳಲ್ಲಿ ತೀವ್ರ ಬದಲಾವಣೆಗಳನ್ನು ತರಲಾಗಿದೆ. ಬಹುಸಂಖ್ಯಾತ ಬಡವರ ಮಧ್ಯೆ ಕೋಟ್ಯಾಧಿಪತಿಗಳ ಸಂಖ್ಯೆ ಗಣನೀಯವಾಗಿ ಏರಿದೆ. ಶ್ರಮಶಕ್ತಿಯ ಬಳಕೆಯಲ್ಲಿ ಮಹಿಳೆಯರ ಪಾಲು ಏರಿಕೆಯಾಗಿದೆ. ಇದರ ಜೊತೆಯಲ್ಲಿಯೇ ಸಂಘಟಿತ ಶ್ರಮಿಕರನ್ನು ಮೀರಿಸುವಂತೆ ಅಸಂಘಟಿತ ಶ್ರಮಿಕರ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ. ಹಾಗೆಯೇ ಶ್ರಮಿಕರ ಹೋರಾಟದ ಬಲ ಅನಿರೀಕ್ಷಿತ ವಲಯಗಳಲ್ಲಿ ವೃದ್ಧಿಸುತ್ತಿದೆ. ಈಚೆಗೆ ಭುಗಿಲೆದ್ದ ಗಾರ್ಮೆಂಟ್ ಕಾರ್ಮಿಕರ ಪ್ರತಿಭಟನೆ ಬಂಡವಾಳವಾದ ಎಷ್ಟು ದುರ್ಬಲ ಎಂಬುದನ್ನು ತೋರಿಸಿಕೊಟ್ಟಿದೆ. ಅಂದರೆ, ಅನಿವಾರ್ಯವಾಗಿ ಬದಲಾಗಬೇಕಾದ್ದು ಬಂಡವಾಳವಾದವೇ ಹೊರತು ಸಮಾಜವಾದಿ ಸಮಾಜದ ಕನಸಲ್ಲ.

ಬಂಡವಾಳವಾದದ ಒಡಲಿನಲ್ಲೇ ಇರುವ ಬಿಕ್ಕಟ್ಟುಗಳು ತೀವ್ರವಾಗುತ್ತಾ ಹೋದಂತೆ ಅದು ವಿಘಟನೆ ಹೊಂದಿ ಸಮಾಜವಾದಕ್ಕೆ ದಾರಿಮಾಡಿಕೊಡುವುದು ಅನಿವಾರ್ಯವೂ, ಅಪೇಕ್ಷಿತವೂ ಆದ ರಾಜಕೀಯ ವಿದ್ಯಮಾನ. ಏಕೆಂದರೆ ಸಮಾಜವಾದವು ತಾತ್ವಿಕವಾಗಿ ಮತ್ತು ಚಾರಿತ್ರಿಕವಾಗಿ ಬಂಡವಾಳವಾದಕ್ಕಿಂತ ಹೆಚ್ಚು ಪ್ರಗತಿಶೀಲವಾದದ್ದು ●


PEÃ½ZÀÄÝ

ಇಂಥ ಯಶಸ್ವಿ ಕಥೆಗಳು ಬಹುತೇಕ ಜಿಲ್ಲೆಗಳಲ್ಲಿ ಇರುವಾಗ ಸಚಿವರಿಗೆ ಈ ದುಡಿಯುವ ಕೈಗಳು ಕಾಣಲೇ ಇಲ್ಲವೇ? 2005ರಲ್ಲಿ ಉದ್ಯೋಗ ಖಾತರಿ ಬಂದ ಸಮಯದಲ್ಲೇ ಹಳ್ಳಿ ಹಳ್ಳಿಗಳಲ್ಲಿ ಮೊತ್ತ ಮೊದಲ ಬಾರಿಗೆ ಹಿಂದೆಂದೂ ಕಾಣದ ಬೃಹತ್ ಹಲ್ಲುಗಳ ಜೆಸಿಬಿ ಯಂತ್ರಗಳು ಕಾಲಿಟ್ಟಿದ್ದು, ಅವು ಕ್ರಮೇಣ ಗ್ರಾಮೀಣ ನೋಟದ ಭಾಗವೇ ಆಗಿಹೋಗಿವೆ. ಉದ್ಯೋಗ ಖಾತರಿಯಲ್ಲಿ ಗಿಡ ನೆಡಲು ತೋಡಿದ ಗುಂಡಿಗಳಲ್ಲಿ ಕೂಡ ಜೆಸಿಬಿಯ ಹಲ್ಲುಗಳ ಗುರುತುಗಳನ್ನು ಕಾಣಬಹುದು. ಜೆಸಿಬಿ ಒಡೆತನದ ಗುತ್ತಿಗೆದಾರರು ಉದ್ಯೋಗ ಖಾತರಿಯ ಬಹುತೇಕ ಭಾಗವನ್ನು ನುಂಗಿದ್ದಾರೆ. ದಾಖಲೆಯಲ್ಲಿ ಜನರ ಹೆಸರುಗಳು, ದುಡ್ಡು ಸಂದಾಯವಾದದ್ದು ಒಬ್ಬ ಗುತ್ತಿಗೆದಾರನಿಗೆ.

ಕಾನೂನನ್ನು ತಿರುಚಿ, ಜನರನ್ನು ವಂಚಿಸಿ, ಕೋಟಿ ಕೋಟಿ ರೂಪಾಯಿಗಳನ್ನಾಗಲೇ ಅವರು ಬಾಚಿಕೊಂಡಿದ್ದಾರೆ. ಇನ್ನು ಕಾನೂನಿನಲ್ಲಿಯೇ ಯಂತ್ರಗಳಿಗೆ ಅವಕಾಶ ಸಿಕ್ಕಿಬಿಟ್ಟಿತೆಂದರೆ ಕೇಳುವುದೇನು? ಜನಸಮುದಾಯವೆಲ್ಲ ಪೇಟೆಯತ್ತ, ಯಂತ್ರಗಳೆಲ್ಲ ಹಳ್ಳಿಯತ್ತ ಮುಖ ಮಾಡುತ್ತವಷ್ಟೆ. ಬರದ ಬವಣೆಯಲ್ಲಿ ಉದ್ಯೋಗ ಅರಸುತ್ತ ಜನರು ತತ್ತರಿಸುತ್ತಿರುವಾಗ ಜನರ ಹಕ್ಕಾಗಿ ಬಂದಿರುವ ಉದ್ಯೋಗ ಖಾತರಿಯನ್ನು ಯಂತ್ರಗಳಿಗೆ ನೀಡುವಂಥ ವಿಚಾರವನ್ನು ಸರ್ಕಾರ ಮಾಡಲೇ ಬಾರದು. ಅಂಥ ತಿದ್ದುಪಡಿಯನ್ನು ಕಾನೂನಿಗೆ ತಂದು ಕಾನೂನಿನ ಆಶಯವನ್ನು ಸಡಿಲಗೊಳಿಸಬಾರದು. ಕೆರೆಗಳು ಜನಪದ ಜೀವನದ ಅಂಗಗಳು. ಕೆರೆಯಂಗಳದಲ್ಲಿ ಜನರಿಗೇ ಕೆಲಸ ಸಿಗಲಿ ಹೊರತು ಯಂತ್ರಗಳು ಅವನ್ನು ಕಸಿಯದಿರಲಿ.

– ಶಾರದಾ ಗೋಪಾಲ

ಪ್ರಜಾವಾಣಿ ವಿಶ್ಲೇಷಣೆ ಮೇ 18



ಕ್ಯಾಸ್ಟ್ರೋ ಕಥೆ – 13

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

1953 ಅಕ್ಟೋಬರ್ 6 ರಂದು ತಮ್ಮ ವಾದದ ಕೊನೆಯಲ್ಲಿ ಲಿಖಿತ ರೂಪದಲ್ಲಿ ಓದಿದ ದೀರ್ಘ ಭಾಷಣದ ಅಂತಿಮ ವಾಕ್ಯವೇ "ಇತಿಹಾಸ ನನ್ನನ್ನು ಮುಕ್ತಗೊಳಿಸುತ್ತದೆ". ಕ್ಯೂಬಾ ಮತ್ತು ಲ್ಯಾಟಿನ್ ಅಮೇರಿಕಾದಲ್ಲಿ ರಾಜಕೀಯ ತತ್ವ ಮತ್ತು ಕ್ರಾಂತಿಕಾರಿ ಕಾರ್ಯಾಚರಣೆ-ಯ ಒಂದು ಪ್ರಮುಖ ಪಠ್ಯ ಈ ಭಾಷಣ. ಮೊಂಕಾಡಾ ಬ್ಯಾರಕ್‌ಗಳನ್ನು ವಶಪಡಿಸಿಕೊಂಡ ತಕ್ಷಣದಲ್ಲೇ ರೇಡಿಯೋ ಮೂಲಕ ದೇಶಕ್ಕೆ ಘೋಷಣೆ ಮಾಡುತ್ತಿದ್ದ ಐದು ಕ್ರಾಂತಿಕಾರಿ ಕಾನೂನುಗಳ ಬಗ್ಗೆ ಫಿಡೆಲ್ ಹೇಳಿ, ಕ್ರಾಂತಿಯ ನಂತರ ತರಲಿದ್ದ ಕಾರ್ಷಿಕ ಮತ್ತಿತರ ಸುಧಾರಣೆಗಳ ಬಗ್ಗೆ ಹೇಳುತ್ತಾರೆ ಈ ಕಂತಿನಲ್ಲಿ.

"ಇತಿಹಾಸ ನನ್ನನ್ನು ಮುಕ್ತಗೊಳಿಸುತ್ತದೆ"

ಎರಡನೆಯ ಕ್ರಾಂತಿಕಾರಿ ಕಾನೂನು, ಐದು ಕೆಬಲ್ಲೆರಿಯಾ ಅಥವಾ ಅದಕ್ಕಿಂತ ಕಡಿಮೆ ಭೂಮಿ ಇರುವ ಎಲ್ಲಾ ಗೇಣಿದಾರರಿಗೆ ಮತ್ತು ಉಪ-ಗೇಣಿದಾರ ರೈತರಿಗೆ, ಸಾಗುವಳಿದಾರರಿಗೆ, ಪಾಲುದಾರರಿಗೆ ಅಡಮಾನ-ರಹಿತ ಮತ್ತು ವರ್ಗಾವಣೆ-ರಹಿತ ಭೂಮಿ ಒಡೆತನವನ್ನು ನೀಡುವುದು. ಪ್ರಭುತ್ವವು ಮಾಜಿ ಜಮೀನ್ದಾರರಿಗೆ ಹತ್ತು ವರ್ಷಗಳಲ್ಲಿ ಅವರಿಗೆ ಸಿಗಬಹುದಾದ ಬಾಡಿಗೆಯನ್ನು ಆಧರಿಸಿ ನಷ್ಟ ಪರಿಹಾರವನ್ನು ನೀಡುವುದು.

ಮೂರನೆಯ ಕ್ರಾಂತಿಕಾರಿ ಕಾನೂನು, ಕಾರ್ಮಿಕರಿಗೆ ಮತ್ತು ನೌಕರರಿಗೆ ಸಕ್ಕರೆ ಮಿಲ್‌ಗಳನ್ನೂ ಒಳಗೊಂಡಂತೆ, ಬೃಹತ್ ಕೈಗಾರಿಕೆ, ವಾಣಿಜ್ಯ ಮತ್ತು ಗಣಿ ಉದ್ದಿಮೆಗಳ ಲಾಭದಲ್ಲಿ ಶೇ.30 ರಷ್ಟು ಪಾಲು ಕೊಡುವುದು.

ನಾಲ್ಕನೆಯ ಕ್ರಾಂತಿಕಾರಿ ಕಾನೂನು, ಸಕ್ಕರೆ ಉತ್ಪಾದನೆಯ ಶೇ.55 ರಷ್ಟನ್ನು ಹಂಚುವ ಹಕ್ಕನ್ನು ಎಲ್ಲಾ ಸಕ್ಕರೆ ಉತ್ಪಾದಕರಿಗೆ ಮತ್ತು ಮೂರು ಅಥವಾ ಹೆಚ್ಚು ವರ್ಷಗಳಿಂದ ಸ್ಥಾಪಿಸಲಾಗಿರುವ ಎಲ್ಲಾ ಸಣ್ಣ ಗೇಣಿ ರೈತರಿಗೆ ಕನಿಷ್ಟ ನಲವತ್ತು ಸಾವಿರ ಅರ್ರೊಬಾಸ್‌ಗಳ ಕೋಟಾ ನೀಡುವುದು.

ಐದನೆಯ ಕ್ರಾಂತಿಕಾರಿ ಕಾನೂನು, ಹಿಂದಿನ ಪ್ರಭುತ್ವಗಳ ಅವಧಿಯಲ್ಲಿ ಮೋಸದ ಮೂಲಕ ಗಳಿಸಿದ ಎಲ್ಲಾ ಅಕ್ರಮ ಗಳಿಕೆ ಮತ್ತು ಸಂಪತ್ತನ್ನು ವಶಪಡಿಸಿಕೊಳ್ಳುವುದು ಹಾಗೂ ಅವರ ವಾರಸುದಾರರು ಮತ್ತು ಹಕ್ಕುದಾರರ ಎಲ್ಲಾ ಸಂಪತ್ತು ಮತ್ತು ಅಕ್ರಮ ಗಳಿಕೆಯನ್ನು ವಶಪಡಿಸಿಕೊಳ್ಳುವುದು. ಇದಕ್ಕಾಗಿ ಪೂರ್ಣ ಅಧಿಕಾರಗಳನ್ನು ಹೊಂದಿರುವ ವಿಶೇಷ ಕೋರ್ಟುಗಳನ್ನು ಸ್ಥಾಪಿಸುವುದು ಮತ್ತು ಎಲ್ಲಾ ಕಾರ್ಪೋರೇಷನ್ನುಗಳ ದಾಖಲೆಗಳನ್ನು ಪಡೆಯುವುದು. ಈ ರೀತಿ ಪಡೆದ ಆಸ್ತಿಗಳಲ್ಲಿ ಅರ್ಧ ಭಾಗವನ್ನು ಕಾರ್ಮಿಕರ ನಿವೃತ್ತಿ ಹಣಕ್ಕೆ ಸಬ್ಸಿಡಿ ನೀಡುವುದು ಮತ್ತು ಉಳಿದ ಅರ್ಧ ಹಣವನ್ನು ಆಸ್ಪತ್ರೆಗಳಿಗೆ, ನಿರಾಶ್ರಿತರಿಗೆ ಮತ್ತು ಪರೋಪಕಾರಿ ಸಂಘಟನೆಗಳಿಗೆ ಬಳಸುವುದು.


ಮತ್ತು ಜೊತೆಗೆ, ಅಮೇರಿಕನ್ ಖಂಡದ ಪ್ರಜಾಪ್ರಭುತ್ವ ಜನತೆಯ ಜೊತೆ ಆತ್ಮೀಯ ಸೌಹಾರ್ದತೆಯನ್ನು ಹೊಂದುವುದು ಮತ್ತು ನಮ್ಮ ಸಹೋದರ ದೇಶಗಳನ್ನು ದಮನಿಸುತ್ತಿರುವ ರಕ್ತಪಿಪಾಸು ಪೀಡಕರಿಂದ ರಾಜಕೀಯ ಹಿಂಸೆಗೊಳಗಾದವರಿಗೆ ಉದಾರವಾದ ಆಶ್ರಯ ನೀಡುವುದು ಕ್ಯೂಬನ್ ನೀತಿಯೆಂದು ಘೋಷಿಸುವುದು.

ಕ್ರಾಂತಿಯ ನಂತರ ಭೂಸುಧಾರಣೆ ಇತ್ಯಾದಿ

ಈ ಕಾನೂನುಗಳನ್ನು ತಕ್ಷಣದಲ್ಲೇ ಘೋಷಿಸಲಾಗುತ್ತಿತ್ತು. ಬಂಡಾಯ ಕೊನೆಗೊಳ್ಳುತ್ತಿದ್ದಂತೆ, ಈ ಕಾನೂನುಗಳ ಮುಂದುವರಿಕೆಯಾಗಿ ಮೂಲಭೂತವಾದ ಮತ್ತೊಂದು ಸರಣಿಯ ಕಾನೂನುಗಳನ್ನು, ಉದಾಹರಣೆಗೆ, ಕಾರ್ಷಿಕ ಸುಧಾರಣೆಗಳು, ಸಮಗ್ರ ಶಿಕ್ಷಣ ಸುಧಾರಣೆಗಳು, ವಿದ್ಯುತ್ ಟ್ರಸ್ಟ್ ಮತ್ತು ಟೆಲಿಫೋನ್ ಟ್ರಸ್ಟ್‌ನ ರಾಷ್ಟ್ರೀಕರಣ, ಈ ಕಂಪನಿಗಳು ವಿಧಿಸುತ್ತಿರುವ ಸುಲಿಗೆಕೋರ ಮತ್ತು ಅಕ್ರಮ ದರಗಳ ವಾಪಸಾತಿ, ಇವರಿಂದ ಬರಬೇಕಾದ ಎಲ್ಲಾ ತೆರಿಗೆಗಳ ವಸೂಲಿ ಮಾಡಲಾಗುತ್ತಿತ್ತು.

ಈ ಎಲ್ಲಾ ಕಾನೂನುಗಳು ಸಂವಿಧಾನದ ಎರಡು ಅಗತ್ಯವಾದ ಕಲಮುಗಳನ್ನು ಆಧರಿಸಿ ಇರುತ್ತಿದ್ದವು. ಮೊದಲನೆಯದು, ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಪ್ರತಿಯೊಂದು ವಿಧಾನದ ಕೃಷಿ ಚಟುವಟಿಕೆಗೆ ಗರಿಷ್ಟ ಎಷ್ಟು ಭೂಮಿಯನ್ನು ಹೊಂದಿರಬೇಕು ಎಂಬುದನ್ನು ತೀರ್ಮಾನಿಸಿ ಬೃಹತ್ ಎಸ್ಟೇಟ್‌ಗಳನ್ನು ನಿಷೇಧಿಸಿ ಕ್ಯೂಬನ್ ಜನರಿಗೆ ಹಂಚಲಾಗುತ್ತಿತ್ತು. ಎರಡನೆಯದಾಗಿ ಪ್ರಭುತ್ವ ಎಲ್ಲರಿಗೂ ಉದ್ಯೋಗ ಒದಗಿಸಲು ತನ್ನ ಬಳಿ ಇರುವ ಎಲ್ಲಾ ಸಂಪನ್ಮೂಲಗಳನ್ನು ಬಳಸುತ್ತಿತ್ತು ಮತ್ತು ದೈಹಿಕ ಹಾಗೂ ಬೌದ್ಧಿಕ ಶ್ರಮಿಕರಿಗೆ ಗೌರವಯುತ ಬದುಕನ್ನು ಖಾತ್ರಿಪಡಿಸಲಾಗುತ್ತಿತ್ತು.

ಭೂಮಿಯ ಸಮಸ್ಯೆ, ಕೈಗಾರಿಕೀಕರಣದ ಸಮಸ್ಯೆ, ವಸತಿ ಸಮಸ್ಯೆ, ನಿರುದ್ಯೋಗದ ಸಮಸ್ಯೆ, ಶಿಕ್ಷಣದ ಸಮಸ್ಯೆ ಮತ್ತು ಜನತೆಯ ಆರೋಗ್ಯದ ಸಮಸ್ಯೆ: ಈ ಆರು ಸಮಸ್ಯೆಗಳನ್ನು ಪರಿಹರಿಸಲು ನಾವು ತಕ್ಷಣದ ಕ್ರಮಗಳನ್ನು ಜೊತೆಗೆ ನಾಗರಿಕ ಹಕ್ಕುಗಳು ಹಾಗೂ ರಾಜಕೀಯ ಪ್ರಜಾಪ್ರಭುತ್ವದ ಪುನರಸ್ಥಾಪನೆಯನ್ನು ಮಾಡಲು ಕ್ರಮಕೈಗೊಳ್ಳುತ್ತಿದ್ದೆವು.



ಶೇ.85 ರಷ್ಟು ಕ್ಯೂಬದ ಸಣ್ಣ ರೈತರು ತಾವು ಉಳುವ ಭೂಮಿಗೆ ಬಾಡಿಗೆ ಕೊಡುತ್ತಾ-ರೆ ಮತ್ತು ತಮ್ಮ ಭೂಮಿಯಿಂದ ತಮ್ಮನ್ನು ಒಕ್ಕಲೆಬ್ಬಿಸಬಹುದೆಂಬ ಸತತ ಭಯದಲ್ಲೇ ಬದುಕುತ್ತಾರೆ. ಅರ್ಧಕ್ಕಿಂತಲೂ ಹೆಚ್ಚು ಅತ್ಯಂತ ಫಲವತ್ತಾದ ಭೂಮಿ ವಿದೇಶಿಯರ ಕೈಯಲ್ಲಿದೆ. ಅತ್ಯಂತ ದೊಡ್ಡದಾದ ಓರಿಯಂಟೆ ಪ್ರಾಂತ್ಯದಲ್ಲೇ, ಯುನೈಟೆಡ್ ಫ್ರೂಟ್ ಕಂಪನಿ ಮತ್ತು ವೆಸ್ಟ್ ಇಂಡಿಯನ್ ಕಂಪನಿಗಳ ಭೂಮಿ ಉತ್ತರ ಮತ್ತು ದಕ್ಷಿಣ ಸಮುದ್ರಗಳನ್ನು ಸಂಪರ್ಕಿಸುತ್ತವೆ. ಇನ್ನೂರು ಸಾವಿರ ರೈತ ಕುಟುಂಬಗಳಿಗೆ ಒಂದು ಎಕರೆ ಭೂಮಿಯೂ ಇಲ್ಲದಿರುವುದರಿಂದ ಹಸಿವಿನಿಂದ ನರಳುತ್ತಿರುವ ತಮ್ಮ ಮಕ್ಕಳಿಗೆ ಊಟ ಕೊಡಲಾಗದ ಪರಿಸ್ಥಿತಿಯಿದೆ. ಮತ್ತೊಂದೆಡೆ ಶ್ರೀಮಂತವರ್ಗಗಳು ತಮ್ಮ ಬಳಿ ಹೊಂದಿರುವ ಸುಮಾರು ಮೂರು ಲಕ್ಷ ಕೆಬೆಲ್ಲೇರಿಯಾಗಳಷ್ಟು ಭೂಮಿ ಉಳುಮೆಯಾಗದೆ ಉಳಿದಿದೆ ... ... ಇಂತಹ ಪರಿಸ್ಥಿತಿಯನ್ನು ಮುಂದುವರಿಯಲು ಬಿಡುವುದು ಹೇಗೆ?"

ಕ್ಯೂಬನ್ ಜನತೆ ಅನುಭವಿಸುತ್ತಿರುವ ಸಮಸ್ಯೆಗಳನ್ನು ಬಿಡಿಬಿಡಿಯಾಗಿ ವಿವರಿಸುತ್ತಾ ನಿರುದ್ಯೋಗಿಗಳ ಕುರಿತು ನ್ಯಾಯಾಧೀಶರ ನಿಲುವುಗಳು ಮತ್ತು ನ್ಯಾಯ ವ್ಯವಸ್ಥೆಯ ಬಗ್ಗೆ ಫಿಡೆಲ್ ಮಾಡಿದ ವಾದ ಗಮನಾರ್ಹವಾದುದು:

ಎಂತಹ ನ್ಯಾಯ ವ್ಯವಸ್ಥೆ ಇದು ?

"ಗೌರವಾನ್ವಿತ ನ್ಯಾಯಾಧೀಶರೇ, ಒಬ್ಬ ದರೋಡೆಕೋರನನ್ನು ನೀವು ವಿಚಾರಣೆ ನಡೆಸುವಾಗ, ಅವನು ಎಷ್ಟು ಕಾಲದಿಂದ ನಿರುದ್ಯೋಗಿಯಾಗಿದ್ದಾನೆಂದು ನೀವು ಅವನನ್ನು ಕೇಳಿದ್ದೀರಾ? ಅವನಿಗೆ ಎಷ್ಟು ಮಕ್ಕಳಿದ್ದಾರೆಂದು, ವಾರದ ಯಾವ ದಿನಗಳಲ್ಲಿ ಅವನು ಊಟ ಮಾಡಿದ್ದಾನೆಂದು, ಯಾವ ದಿನಗಳು ಮಾಡಿಲ್ಲವೆಂದು ನೀವು ಅವನನ್ನು ಕೇಳಿದ್ದೀರಾ? ಅವನ ಸಾಮಾಜಿಕ ಸಂದರ್ಭವನ್ನೇನಾದರೂ ನೀವು ತನಿಖೆ ಮಾಡಿದ್ದೀರಾ? ಮುಂದಿನ ಯೋಚನೆಯನ್ನೇ ಮಾಡದೆ ಅವನನ್ನು ನೀವು ಜೈಲಿಗೆ ಕಳುಹಿಸಿಬಿಡುತ್ತೀರಿ. ವಿಮೆ ಹಣ ಪಡೆಯಲು ಉಗ್ರಾಣಗಳಿಗೆ ಮತ್ತು ಮಳಿಗೆಗಳಿಗೆ ಬೆಂಕಿಯಿಕ್ಕುವವರು, ಅದೇ ಬೆಂಕಿಯಲ್ಲಿ ಹಲವು ಮನುಷ್ಯರು ಬೂದಿಯಾದರೂ ಚಿಂತಿಸದವರು, ಜೈಲುಗಳಿಗೆ ಹೋಗುವುದಿಲ್ಲ. ವಿಮೆ ಮಾಡಿಸಿದವರು ವಕೀಲರನ್ನು ನೇಮಿಸಿಕೊಳ್ಳಲು ಮತ್ತು ಜಡ್ಜ್‌ಗಳಿಗೆ ಲಂಚ ಕೊಡಲು ಅವರ ಬಳಿ ಹಣವಿದೆ. ಹಸಿವಿನ ಕಾರಣಕ್ಕಾಗಿ ಕಳ್ಳತನ ಮಾಡಿದ ನಿರ್ಭಾಗ್ಯ ಬಡವನಿಗೆ ನೀವು ಶಿಕ್ಷೆ ಕೊಡುತ್ತೀರಿ; ಆದರೆ ಸರ್ಕಾರದಿಂದ ಮಿಲಿಯಾಂತರ (ಪೆಸೋಗಳನ್ನು) ಕದಿಯುವ ನೂರಾರು ಜನರ ಪೈಕಿ ಒಬ್ಬ ಕೂಡಾ ಒಂದು ರಾತ್ರಿ ಜೈಲಿನಲ್ಲಿ ಎಂದಿಗೂ ಕಳೆದಿಲ್ಲ. ವರ್ಷದ ಕೊನೆಯಲ್ಲಿ ಯಾವುದಾದರೂ ಪ್ರತಿಷ್ಠಿತ ಕ್ಲಬ್ಬಿನಲ್ಲಿ ನೀವು ಅವರೊಂದಿಗೆ ಊಟ ಮಾಡುತ್ತೀರಿ ಮತ್ತು ಅವರು ನಿಮ್ಮ ಗೌರವವನ್ನು ಅನುಭವಿಸುತ್ತಾರೆ. ... ... ಸಂವಿಧಾನದಿಂದ ಸ್ಥಾಪಿಸಲ್ಪಟ್ಟಿರುವ, ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದು ಅವರಿಗೆ (ಶ್ರೀಮಂತನಿಗೆ) ಒಂದು ಮಿಥ್ಯೆ; ಏಕೆಂದರೆ ಕಾನೂನುಗಳಿಗೆ ಅವರು ಅಧೀನರಲ್ಲ: ಬದಲಿಗೆ ಕಾನೂನುಗಳು ಅವರಿಗೆ ಅಧೀನ. ಮಿಲಿಯಾಧಿಪತಿಗಳಿಗೆ ಯಾವುದೇ ಕೋರ್ಟುಗಳೂ ಇಲ್ಲ, ಶಿಕ್ಷೆಯೂ ಇಲ್ಲ."

"ಒಂದು ಡಜನ್ ದೊಡ್ಡ ಬಂಡವಾಳದಾರರ ಸ್ವಾರ್ಥ ಹಿತಾಸಕ್ತಿಗಳಲ್ಲೋ ಅಥವಾ ಹವಾನಿಯಂತ್ರಿತ ಕಛೇರಿಗಳಲ್ಲಿ ಕೂತು ಹತ್ತೋ ಹನ್ನೆರಡೋ ಪ್ರಭಾವಿ ಉದ್ಯಮಿಗಳು ತಮ್ಮ ಲಾಭಗಳ ಬಗ್ಗೆ ಲೆಕ್ಕಾಚಾರಗಳನ್ನು ಮಾಡುವುದರ ಮೇಲೆ ಆಧಾರಪಟ್ಟು ರಾಷ್ಟ್ರದ ಭವಿಷ್ಯ ಮತ್ತು ಅದರ ಸಮಸ್ಯೆಗಳಿಗೆ ಪರಿಹಾರಗಳು ಮುಂದುವರಿಯುವಂತಿಲ್ಲ. ... ನಮ್ಮ ವಿಮೋಚಕರು ಗಣರಾಜ್ಯವನ್ನು ಸ್ಥಾಪಿಸಿದಾಗ ಯಾವ ಉತ್ಸಾಹ, ಪ್ರಾಮಾಣಿಕತೆ ಮತ್ತು ದೇಶಭಕ್ತಿಯಿಂದ ಹೋರಾಟ ನಡೆಸಿದರೋ ಅದೇ ರೀತಿ ಹೋರಾಡಿದಾಗ ಮಾತ್ರ ನಮ್ಮ ಗಣರಾಜ್ಯದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ.... "ಉದ್ಯಮಕ್ಕೆ ಅಂಕೆಯಿಲ್ಲದ ಸ್ವಾತಂತ್ರ್ಯ", "ಹೂಡಿಕೆಯ ಬಂಡವಾಳಕ್ಕೆ ಖಾತ್ರಿಗಳು" ಮತ್ತು "ಪೂರೈಕೆ ಮತ್ತು ಬೇಡಿಕೆ ನಿಯಮ"ದಂತಹ ಅಕರ್ಷಕ ನುಡಿಗಟ್ಟುಗಳ ಮೂಲಕ ಈ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ. ...."

ಕ್ರಾಂತಿಯ ತಾತ್ವಿಕತೆ

ಕ್ಯೂಬಾದ ಪ್ರಾಚೀನ ಕಾಲಘಟ್ಟದ, ಮಧ್ಯಯುಗದ ಮತ್ತು ಸಮಕಾಲೀನ ಸಂದರ್ಭದ ಹತ್ತಾರು ಬರಹಗಾರರ ಬರಹಗಳಿಂದ ಉದಾಹರಣೆಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಮಾತನಾಡಿದ ಫಿಡೆಲ್, ಮುಂದುವರಿದು, "ಗೌರವಾನ್ವಿತ ನ್ಯಾಯಾಧೀಶರೇ, ಇನ್ನೇನು ಬೇಕು, ಒಂದು ರಾಷ್ಟ್ರವಾಗಿ ಕ್ಯೂಬಾದ ಅಸ್ಥಿತ್ವದ ಮೂಲದಲ್ಲಿಯೇ ಬಂಡಾಯದ ಹಕ್ಕನ್ನು ನೀವು ನೋಡಬಹುದು. ಇದರ ದೆಸೆಯಿಂದಾಗಿಯೇ ನೀವಿಂದು ಕ್ಯೂಬನ್ ನ್ಯಾಯಾಧೀಶರ ನಿಲುವಂಗಿಯಲ್ಲಿ ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ನ್ಯಾಯದ ಕಾರಣವನ್ನು ನಿಜವಾಗಿಯೂ ಎತ್ತಿಹಿಡಿಯುವ ವಸ್ತ್ರಗಳಾಗುತ್ತವೆಯೋ ಇವು!

ನಿರಂಕುಶಾಧಿಕಾರದ ಕಾರಣಕ್ಕೆ ಇಂಗ್ಲೆಂಡಿನಲ್ಲಿ ಮೊದಲನೆ ಚಾರ್ಲ್ಸ್ ಮತ್ತು ಎರಡನೆ ಜೇಮ್ಸ್ ಎಂಬಿಬ್ಬರು ರಾಜರನ್ನು 17ನೇ ಶತಮಾನದಲ್ಲಿ ಅಧಿಕಾರದಿಂದ ಕಿತ್ತೊಗೆದ ವಿಚಾರ ಚೆನ್ನಾಗಿ ಗೊತ್ತಿರುವುದೇ. ಈ ಕಾರ್ಯಾಚರಣೆಯು ಉದಾರವಾದಿ ರಾಜಕೀಯ ತತ್ವಜ್ಞಾನದ ಉಗಮ ಮತ್ತು ಊಳಿಗಮಾನ್ಯ ಬಂಧನವನ್ನು ಒಡೆಯಲು ಆಗ ಸೆಣಸಾಡುತ್ತಿದ್ದ ನೂತನ ಸಾಮಾಜಿಕ ವರ್ಗಕ್ಕೆ ಸೈದ್ಧಾಂತಿಕ ತಳಹದಿಯನ್ನು ಒದಗಿಸಿದ್ದರ ಜೊತೆ ತಾಳೆ ಹೊಂದಿತು. ಈ ಹೊಸ ತಾತ್ವಿಕತೆಯು, ದೈವಿಕ ಬೆಂಬಲದ ನಿರಂಕುಶ ಪ್ರಭುತ್ವಗಳ ವಿರುದ್ಧ, ಸಾಮಾಜಿಕ ಒಪ್ಪಂದದ ಮತ್ತು ಆಳಿಸಿಕೊಳ್ಳುವವರ (ಜನತೆಯ) ಒಪ್ಪಿಗೆಯ ತತ್ವವನ್ನು ಎತ್ತಿ ಹಿಡಿಯಿತು, ಮತ್ತು 1688 ರ ಇಂಗ್ಲಿಷ್ ಕ್ರಾಂತಿ, 1775 ರ ಅಮೇರಿಕನ್ ಕ್ರಾಂತಿ ಮತ್ತು 1789 ರ ಫ್ರೆಂಚ್ ಕ್ರಾಂತಿಗಳ ತಳಹದಿಯಾಗಿ ರೂಪುಗೊಂಡಿತ್ತು. ಈ ಮಹೋನ್ನತ ಕ್ರಾಂತಿಕಾರಿ ಘಟನೆಗಳು ಹೊಸ ಜಗತ್ತಿನ ಸ್ಪಾನಿಷ್ ವಸಾಹತುಗಳ ವಿಮೋಚನೆಗೆ ದಾರಿಮಾಡಿತು – ಈ ಸರಪಳಿಯ ಕೊನೆಯ ಕೊಂಡಿಯನ್ನು ಕ್ಯೂಬಾ ಕಿತ್ತುಹಾಕಿತು.

ಈ ನೂತನ ತಾತ್ವಿಕತೆಯು ನಮ್ಮದೇ ಆದ ರಾಜಕೀಯ ಚಿಂತನೆಗಳನ್ನು ಪೋಷಿಸಿದೆ ಮತ್ತು ಗ್ವಾಯ್‌ಮರೊ ಸಂವಿಧಾನದಿಂದ ಹಿಡಿದು 1940ರ ಸಂವಿಧಾನದವರೆಗೂ, ನಮ್ಮ ಸಂವಿಧಾನಗಳನ್ನು ವಿಕಾಸಗೊಳಿಸಲು ಸಹಾಯ ಮಾಡಿದೆ. ಕೊನೆಯದನ್ನು ನಮ್ಮ ಕಾಲದ ಸಮಾಜವಾದಿ ಚಿಂತನೆಗಳು ಪ್ರಭಾವ ಬೀರಿವೆ; ಆಸ್ತಿಯ ಸಾಮಾಜಿಕ ನಿರ್ವಹಣೆ ಮತ್ತು ಮನುಷ್ಯನ ಗೌರವಯುತ ಜೀವನದ ಬೇರ್ಪಡಿಸಲಾಗದ ಹಕ್ಕಿನ ತತ್ವವನ್ನು ಇದಕ್ಕೆ ಸೇರಿಸಲಾಗಿತ್ತು. ಆದರೆ ಈ ಹಕ್ಕುಗಳ ಪೂರ್ಣ ಜಾರಿಯನ್ನು ದೊಡ್ಡ ಸ್ಥಾಪಿತ ಹಿತಾಸಕ್ತಿಗಳು ತಡೆದಾಗಲೂ ಈ ತತ್ವಗಳನ್ನು ಸೇರಿಸಲಾಗಿತ್ತು. ಆಗ ದಮನದ ವಿರುದ್ಧ ದಂಗೆ ಏಳುವ ಹಕ್ಕು ತನ್ನ ಅಂತಿಮ ಪವಿತ್ರೀಕರಣವನ್ನು ದಾಟಿತು ಮತ್ತು ರಾಜಕೀಯ ಸ್ವಾತಂತ್ರ್ಯದ ಮೂಲಭೂತ ಅಂಶವಾಯಿತು.

1649 ರಷ್ಟು ಹಿಂದಕ್ಕೇ, ಜಾನ್ ಮಿಲ್ಟನ್ ಬರೆದದ್ದೇನೆಂದರೆ, ರಾಜರನ್ನು ಅಧಿಕ್ಕಾರಕ್ಕೆ ಏರಿಸುವ ಮತ್ತು ಕಿತ್ತೊಗೆಯುವ ರಾಜಕೀಯ ಅಧಿಕಾರವು ಜನತೆಯ ಬಳಿಯಿದೆ, ಮತ್ತು ದಮನಕರನ್ನು ತೆಗೆದೊಗೆಯುವ ಕರ್ತವ್ಯ ಅವರಿಗಿದೆ ಎಂದು.

ಸರ್ಕಾರ ಎಂಬ ತನ್ನ ಪ್ರಬಂಧದಲ್ಲಿ, ಜಾನ್ ಲಾಕ್ ಹೇಳಿದ್ದು, ಮನುಷ್ಯನ ನೈಸರ್ಗಿಕ ಹಕ್ಕುಗಳು ಉಲ್ಲಂಘನೆಯಾದಾಗ, ಸರ್ಕಾರವನ್ನು ಬದಲಾಯಿಸುವ ಅಥವಾ ಅದನ್ನು ನಾಶ ಮಾಡುವ ಹಕ್ಕು ಮತ್ತು ಕರ್ತವ್ಯ ಜನರಿಗಿದೆ. ಆತ ಹೇಳಿದ್ದು, "ಅನಧಿಕೃತ ಶಕ್ತಿಗಳಿಗೆ (ಒತ್ತಾಯಗಳಿಗೆ) ಒಂದೇ ಪರಿಹಾರವೇನೆಂದರೆ ಶಕ್ತಿಯಿಂದಲೇ ಅದನ್ನು ವಿರೋಧಿಸುವುದು".


ತನ್ನ ಸಾಮಾಜಿಕ ಒಪ್ಪಂದದಲ್ಲಿ ರೂಸೊ ವಿಶೇಷವಾದ ವಾಗ್ಮಿಯತೆ ಬಳಸಿ ಹೇಳಿದ್ದೇನೆಂದರೆ: " ... ಅತ್ಯಂತ ಬಲಿಷ್ಟ ಮನುಷ್ಯ, ಒತ್ತಾಯವನ್ನು ಹಕ್ಕನ್ನಾಗಿ ವಿಧೇಯತೆಯನ್ನು ಕರ್ತವ್ಯವನ್ನಾಗಿ ಮಾರ್ಪಡಿಸದಿದ್ದರೆ, ಎಂದೆಂದಿಗೂ ಅಧಿಪತಿಯಾಗಿರಲು ಎಂದಿಗೂ ಸಮರ್ಥನಾಗಿರುವುದಿಲ್ಲ. ಒತ್ತಾಯ (ಶಕ್ತಿಯ ಬಳಕೆ) ಒಂದು ಭೌತಿಕ ಶಕ್ತಿ; ಇದರ ಬಳಕೆಯಿಂದ ಯಾರಾದರೂ ಅದ್ಯಾವ ನೈತಿಕತೆಯನ್ನು ಪಡೆಯುತ್ತಾರೋ ನಾ ಕಾಣೆ. ಒತ್ತಾಯಕ್ಕೆ ಮಣಿಯುವುದು ಅನಿವಾರ್ಯದ ಕೆಲಸವಾಗುತ್ತದೆಯೇ ಹೊರತು, ಇಚ್ಛೆಯಿಂದಲ್ಲ; ಹೆಚ್ಚೆಂದರೆ ಅದು ಚಾಣಾಕ್ಷತನದ ನಡೆ. ಇದನ್ನು ಅದ್ಯಾವ ರೀತಿಯಲ್ಲಿ ಕರ್ತವ್ಯವೆಂದು ಕರೆಯಲು ಸಾಧ್ಯ?" ಸ್ವಾತಂತ್ರ್ಯವನ್ನು ಬಿಟ್ಟುಕೊಡುವುದೆಂದರೆ ತನ್ನ ಮನುಷ್ಯ ಸ್ಥಾನಮಾನವನ್ನು ಒಬ್ಬ ಬಿಟ್ಟುಕೊಡುವುದು ಎಂದರ್ಥ, ತನ್ನ ಕರ್ತವ್ಯಗಳನ್ನು ಒಳಗೊಂಡು ತನ್ನ ಮಾನವ ಹಕ್ಕುಗಳನ್ನು ಬಿಟ್ಟುಕೊಡುವುದು ಎಂದರ್ಥ. ಎಲ್ಲವನ್ನೂ ತ್ಯಜಿಸುವುದರಿಂದ ಯಾವುದೇ ಪರಿಹಾರದ ಸಾಧ್ಯತೆಗಳಿಲ್ಲ. ಸಂಪೂರ್ಣ ತ್ಯಜಿಸುವಿಕೆಯೆಂಬುದು ಮನುಷ್ಯ ಸ್ವಭಾವಕ್ಕೆ ಹೊಂದಾಣಿಕೆಯಾಗುವುದಿಲ್ಲ ಮತ್ತು ಮುಕ್ತ ಸಂಕಲ್ಪವನ್ನು ಪೂರ್ಣವಾಗಿ ನಾಶಪಡಿಸುವುದೆಂದರೆ ನಡವಳಿಕೆಯ ಎಲ್ಲಾ ನೈತಿಕತೆಯನ್ನು ಇಲ್ಲವಾಗಿಸುವುದು ಎಂದರ್ಥ. ಸಂಕ್ಷಿಪ್ತವಾಗಿ, ಒಂದು ಕಡೆ ನಿರಂಕುಶ ಅಧಿಕಾರವನ್ನು ಮತ್ತೊಂದು ಕಡೆ ಅನಿಯಂತ್ರಿತ ವಿಧೇಯತೆಯನ್ನು ಒತ್ತಾಯಪಡಿಸುವುದು ಪರಸ್ಪರ ವಿರುದ್ಧವಾದದ್ದು ಮತ್ತು ನಿಷ್ಪ್ರಯೋಜಕವಾದದ್ದು. ..."


"ಒಬ್ಬ ಕಳ್ಳ ರಾಜನಿಗಿಂತ ಒಬ್ಬ ಉತ್ತಮ ಮನುಷ್ಯ ಹೆಚ್ಚು ಗೌರವಕ್ಕೆ ಪಾತ್ರನಾಗುತ್ತಾನೆ" ಎಂದು ಥಾಮಸ್ ಪೈನ್ ಹೇಳಿದ್ದಾನೆ.

●

ಎಪ್ರಿಲ್ ತಿಂಗಳಲ್ಲಿ ಹಣದುಬ್ಬರ ಏರಿದೆ, ಕೈಗಾರಿಕಾ ಉತ್ಪಾದನೆ ಇಳಿದಿದೆ
ಮತದಾನ ಮುಗಿಯುತ್ತಿದ್ದಂತೆ ಮತ್ತೆ ಪೆಟ್ರೋಲ್, ಡೀಸೆಲ್ ದರಗಳಲ್ಲೂ ಏರಿಕೆ

ಜೂನ್ ತಿಂಗಳಲ್ಲಿ ರಿಝರ್ವ್ ಬ್ಯಾಂಕ್ ಬ್ಯಾಂಕ್ ಬಡ್ಡಿ ದರಗಳನ್ನು ಇಳಿಸಿ ತಮಗೆ ಇನ್ನಷ್ಟು ಅಗ್ಗ ದರದಲ್ಲಿ ಸಾಲ ಸಿಗುವಂತಾಗಬಹುದು ಎಂದು ಆಶಿಸುತ್ತಿರುವ ಕಾರ್ಪೊರೇಟ್ ಕುಳಗಳಿಗೆ ಮತ್ತೊಮ್ಮೆ ನಿರಾಶೆ ಉಂಟಾಗಿದೆ. ಇತ್ತೀಚೆಗೆ ಪ್ರಕಟಗೊಂಡ ಮಾಹಿತಿಗಳ ಪ್ರಕಾರ ಎಪ್ರಿಲ್ 2016ರಲ್ಲಿ ಚಿಲ್ಲರೆ ಹಣದುಬ್ಬರ ದರ ಕಳೆದ ತಿಂಗಳ 4.83ಶೇ.ದಿಂದ 5.39ಕ್ಕೇರಿದೆ. ಅದೇ ವೇಳೆಯಲ್ಲಿ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಮಾರ್ಚ್ ತಿಂಗಳಲ್ಲಿ ಕೇವಲ 0.1ಶೇ. ಏರಿಕೆ ತೋರಿಸಿದೆ. ಹಿಂದಿನ ತಿಂಗಳು ಅದು 2ಶೇ. ಇತ್ತು. ರಿಝರ್ವ್ ಬ್ಯಾಂಕ್ ಗವರ್ನರ್ ಹಣದುಬ್ಬರ ದರ 5ಶೃ.ಕ್ಕೆ ಸೀಮಿತಗೊಳಿಸುವ ಗುರಿ ಹೊಂದಿರುವುದರಿಂದಾಗಿ, ಕೈಗಾರಿಕಾ ಉತ್ಪಾದನೆಗೆ 'ಉತ್ತೇಜನ' ಕೊಡುವ ಹೆಸರಿನಲ್ಲಿ ಬಡ್ಡಿದರ ಇಳಿಸಬಹುದಾದರೂ ಇಳಿಸಲಿಕ್ಕಿಲ್ಲ ಎಂಬುದು ಕಾರ್ಪೊರೇಟ್‌ಗಳ ಇತ್ತೀಚಿನ ಅನುಭವ.





ಜನವರಿ ತಿಂಗಳ ನಂತರ ಹಣದುಬ್ಬರ ದರ ಮತ್ತೆ ಏರಲಾರಂಭಿಸಿದೆ. ಇದಕ್ಕೆ ಮುಖ್ಯ ಕಾರಣ ಬೇಳೆಕಾಳುಗಳ ಬೆಲೆಗಳಲ್ಲಿ 34ಶೇ. ಹೆಚ್ಚಳ.

ಕೃಷಿ ರಫ್ತಿನಲ್ಲೂ ಈ ವರ್ಷ 20ಶೇ. ಇಳಿಕೆಯಾಗಿದೆಯಂತೆ. ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳು ಮತ್ತು ರಫ್ತು ಅಭಿವೃದ್ಧಿ ಪ್ರಾಧಿಕಾರದ ಮಾಹಿತಿಗಳ ಪ್ರಕಾರ 2014–15ರಲ್ಲಿ ಒಟ್ಟು ಕೃಷಿ ಉತ್ಪನ್ನಗಳ ರಫ್ತು 1.31ಲಕ್ಷ ಕೋಟಿರೂ. ಇದ್ದದ್ದು ಈ 2015–16ರಲ್ಲಿ 1.05 ಲಕ್ಷ ಕೋಟಿ ರೂ.ಗೆ ಇಳಿದಿದೆ.

ಮೇ 16 ರಂದು ಉಳಿದ ಮೂರು ರಾಜ್ಯಗಳಲ್ಲೂ ವಿಧಾನಸಭಾ ಚುನಾವಣೆಗಳಿಗೆ ಮತದಾನ ಮುಗಿದು ಜನ ಎಕ್ಸಿಟ್ ಪೋಲ್‌ಗಳ ಚರ್ಚೆಗಳಲ್ಲಿ ಮಗ್ನರಾಗಿದ್ದಂತೆಯೇ ತೈಲ ಮಾರಾಟ ಕಂಪನಿಗಳು ಮೇ ತಿಂಗಳ ಎರಡನೇ ದರ ಏರಿಕೆಯನ್ನು ಪ್ರಕಟಿಸಿದವು– ಜನಗಳು ಇತ್ತ ಹೆಚ್ಚಿನ ಗಮನವನ್ನು ಹರಿಸಲಿಕ್ಕಿಲ್ಲ ಎಂದಿರಬಹುದು.

ಬೆಂಗಳೂರಿನಲ್ಲಿ ಇದರಿಂದಾಗಿ ಪೆಟ್ರೋಲ್ ದರ ಲೀಟರಿಗೆ ರೂ.65.73ರಿಂದ ರೂ.67.64ಕ್ಕೆ ಏರಿದರೆ, ಡೀಸೆಲ್ ದರ ರೂ.50.91ರಿಂದ 55.32ಕ್ಕೆ ಏರಿದೆ.

ಈ ಹಿಂದೆ ಯುಪಿಎ ಸರಕಾರ ಪೆಟ್ರೋಲ್–ಡೀಸೆಲ್ ದರಗಳ ಏರಿಕೆಯಾಗುತ್ತಿದ್ದಾಗ ಜನಗಳ ಮೇಲೆ ಹೊರೆ ಹಾಕುತ್ತಿದ್ದಾರೆ ಎಂದು ಟ್ವೀಟ್ ಮಾಡುತ್ತಿದ್ದ ಸಿಎಂ ನರೇಂದ್ರ ಮೋದಿಯವರು ಈಗ ಪಿಎಂ ಆಗಿ ಹಾಗೆ ಟ್ವೀಟ್ ಮಾಡುವಂತಿಲ್ಲ. ಆದರೆ ಈ ಏರಿಕೆಯ ಹೊರೆ ಹೊರಬೇಕಾದವರಿಗೆ ಅಂತಹ ಮುಲಾಜು ಏನೂ ಇಲ್ಲ ತಾನೇ? ಕೆಲವು ಟ್ವೀಟ್‌ಗಳನ್ನು ನೋಡಿ:

* ವಿರಾಟ್ ಕೊಹ್ಲಿ ಬ್ಯಾಟ್ ಮಾಡುತ್ತಿರುವಾಗ ಸರಕಾರ ಸದ್ದಿಲ್ಲದೆ ಪೆಟ್ರೋಲ್ ದರ ಏರಿಸುತ್ತದೆ– ಯಾರೂ ಗಮನಿಸುತ್ತಿಲ್ಲ ಎಂದು.
* ಮತ್ತೆ ಪೆಟ್ರೋಲ್ ದರ ಏರಿದೆ. ದಯವಿಟ್ಟು ಯಾರಾದರೂ ನನಗೆ ಹಿಂದೂ ದೇವತೆಗಳು ಬಳಸುತ್ತಿದ್ದ 'ವಾಹನ'ಗಳನ್ನು ಕೊಡಿಸಿ. ಅದು ಪರಿಸರ ಮಾಲಿನ್ಯವನ್ನೂ ಕಡಿಮೆ ಮಾಡಬಹುದು.
* ಮತ್ತೆ ಪೆಟ್ರೋಲ್ ದರ ಏರಿಕೆ. ಮಾತಿನ ಮಂಟಪಕ್ಕೆ ಮರುಳಾದ 31% ಮೂರ್ಖರಿಂದಾಗಿ ಭಾರತದ 100% ನಾಗರಿಕರಿಗೆ ಕೊಡುಗೆ.
* ಈಗ ಪೆಟ್ರೋಲ್ ದರ ಏರಿಸುವುದು ಕಂಪನಿಗಳಂತೆ. ಅವರೂ ಮತದಾನ ಮುಗಿಯುವುದನ್ನೇ ಕಾಯುತ್ತಾರೆ!

ಎನ್‌ಐಎ ಮಾಲೇಗಾಂವ್ ತಿಪ್ಪರಲಾಗ: ಹೇಮಂತ ಕರ್ಕರೆಯವರನ್ನು ಮತ್ತೆ ಸಾಯಿಸಬೇಕಿತ್ತೇ?

ಮಾಲೇಗಾಂವ್ ಸ್ಫೋಟದ ಹಿಂದುತ್ವವಾದಿ ಆಪಾದಿತರ ವಿರುದ್ಧ ಸಾಕ್ಷಿಗಳಿಲ್ಲ ಎಂದು ಈಗ ಸಪ್ಲಿಮೆಂಟರಿ ಚಾರ್ಜ್‌ಶೀಟ್ ಹಾಕಿರುವ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಈ ತೀರ್ಮಾನಕ್ಕೆ ಬರುವಾಗ ಈ ಹಿಂದೆ ಇದರ ತನಿಖೆ ನಡೆಸಿದ್ದ ಮಹಾರಾಷ್ಟ್ರದ ಭಯೋತ್ಪಾದನೆ–ನಿರೋಧಕ ದಳ (ಎಟಿಎಸ್) ಮಾಡಿದ ತನಿಖೆಯೇ ಸರಿಯಿಲ್ಲ, ಸಾಕ್ಷ್ಯಗಳನ್ನು ಸೃಷ್ಟಿಸಿದೆ, ಆರ್‌ಡಿಎಕ್ಸ್ ಸ್ಫೋಟಕವನ್ನು ಅದೇ ಇರಿಸಿರಬಹುದು ಎಂಬಿತ್ಯಾದಿ ಅಭಿಪ್ರಾಯಕ್ಕೆ ಬಂದಿದೆ ಎಂದು ವರದಿಯಾಗಿದೆ.

ಈ ಎಟಿಎಸ್‌ನ ನೇತೃತ್ವ ವಹಿಸಿದವರು ಮಹಾರಾಷ್ಟ್ರದ ಅತ್ಯಂತ ಪ್ರಾಮಾಣಿಕ, ಶಿಸ್ತಿನ ಪೋಲೀಸ್ ಅಧಿಕಾರಿಗಳಲ್ಲೊಬ್ಬರಾದ ಹೇಮಂತ ಕರ್ಕರೆ. ಇವರು ಈ ಸಾಕ್ಷ್ಯಗಳನ್ನು ಸಂಗ್ರಹಿಸಿದ ಒಂದು ತಿಂಗಳಲ್ಲೇ ಮುಂಬೈ ಮೇಲೆ ಭಯೋತ್ಪಾದಕ ದಾಳಿಯ ವಿರುದ್ಧ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದಾಗ ಭಯೋತ್ಪಾದಕರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಹಿಂದುತ್ವ ಭಯೋತ್ಪಾದನೆಯ ಆರೋಪ ಹೊತ್ತವರ ಮೇಲಿನ ಆರೋಪಗಳನ್ನು ಇಳಿಸಲು ಹೇಮಂತ ಕರ್ಕರೆಯಂತವರನ್ನು ಮತ್ತೆ ಸಾಯಿಸಬೇಕಿತ್ತೇ ಎಂದು ಒಬ್ಬ ಪತ್ರಕರ್ತರು ಪ್ರಶ್ನಿಸಿದ್ದಾರೆ(ಸೈಕತ್ ದತ್ತ, ಸ್ಕ್ರಾಲ್.ಇನ್).

ಕರ್ಕರೆಯವರು ಸಾಕ್ಷ್ಯಗಳನ್ನು ಸೃಷ್ಟಿಸಿರಲು ಸಾಧ್ಯವೇ ಇಲ್ಲ, ತನ್ನ ಮೇಲಿನ ಇಂತಹ ಆಪಾದನೆಗಳಿಗೆ ಉತ್ತರ ಕೊಡಲು ಅವರು ಬದುಕಿಲ್ಲ ಆದರೆ ಈ ರೀತಿಯ ಆಪಾದನೆ ಹಾಕುವ ಶಕ್ತಿಗಳಿಗೆ ಸವಾಲು ಹಾಕದೆ ಬಿಡಲಾಗದು ಎಂದು ಇನ್ನೊಬ್ಬ ಪ್ರಖ್ಯಾತ ಪೋಲೀಸ್ ಅಧಿಕಾರಿ ಜೂಲಿಯಸ್ ರಿಬೆರೋ ಹೇಳಿದ್ದಾರೆ(ಇಂಡಿಯನ್ ಎಕ್ಸ್‌ಪ್ರೆಸ್, ಮೇ 18). ಕರ್ಕರೆಯವರು ಹಿಂದುತ್ವವಾದಿ ಗುಂಪಿನ ಕೈವಾಡದ ಶಂಕೆಯ ಸಾಕ್ಷ್ಯಗಳನ್ನು ಹಿಡಿದುಕೊಂಡು ರಿಬೆರೋ ಬಳಿ ಕಸಿವಿಸಿಯಿಂದ ಬಂದಿದ್ದರಂತೆ, ಕಸಿವಿಸಿ ಏಕೆಂದರೆ ಹಿರಿಯ ಬಿಜೆಪಿ ಮುಖಂಡ ಎಲ್.ಕೆ.ಅಡ್ವಾಣಿ ಸಾಧ್ವಿ ಪ್ರಜ್ಞಾಸಿಂಗ್ ಮತ್ತಿತರನ್ನು ಸುಮ್ಮನೇ ಈ ಕೇಸಿನಲ್ಲಿ ಸಿಗಿಸುತ್ತಿದ್ದಾರೆ ಎಂದಿದ್ದರು. ರಿಬೆರೋ ಅವರಿಗೆ ಆಗ ಕರ್ಕರೆಯವರು ತಂದಿದ್ದ ಸಾಕ್ಷ್ಯಗಳನ್ನು ನೋಡುವಷ್ಟು ತಾಳ್ಮೆ ಇರಲಿಲ್ಲವಂತೆ. ಆದರೆ ಕರ್ಕರೆ ಸುಮ್ಮನೇ ಮಾತನಾಡುವವರಲ್ಲ, ಆದ್ದರಿಂದ ಕರ್ಕರೆಯವರಿಗೆ ನೀವು ಮುಂದುವರೆಯಿರಿ, ಅಡ್ವಾಣಿಯವರಿಗೆ ನಾನು ಹೇಳುತ್ತೇನೆ ಎಂದಿದ್ದರಂತೆ. ಬಹುಶಃ ಆಗ ಅವುಗಳನ್ನು ನೋಡಿದ್ದರೆ ನಾನೀಗ ಕ್ಕವಕ್ಕೆಲ್ಲ ಉತ್ತರ ಕೊಡಬಹುದಿತ್ತು ಎಂದು ರಿಬೆರೊ ಹೇಳಿದ್ದಾರೆ.


ಮಾಲೇಗಾಂವ್ ಸ್ಫೋಟದ ಕೇಸಿನಲ್ಲಿ ಮೊದಲು ಬಂಧಿಸಿದ್ದ ಮುಸ್ಲಿಮ್ ಆರೋಪಿಗಳನ್ನೆಲ್ಲ ಅವರ ವಿರುದ್ಧ ಸಾಕ್ಷ್ಯಗಳಿಲ್ಲ ಎಂದು ಬಿಡುಗಡೆ ಮಾಡಲಾಯಿತು. ಈಗ ಹಿಂದುತ್ವವಾದಿ ಗುಂಪನ್ನೂ ಆರೋಪಮುಕ್ತಗೊಳಿಸಲಾಗುತ್ತಿದೆ. ಹಾಗಿದ್ದರೆ ಸ್ಫೋಟ ನಡೆಸಿದವರು ಯಾರು ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ.

ಅಲ್ಲದೆ ಇನ್ನೂ ಹಲವು ಪ್ರಶ್ನೆಗಳು ಏಳುತ್ತವೆ ಎಂದಿದ್ದಾರೆ ದೀಪ್ತಿಮಾನ್ ತಿವಾರಿ(ಇಂಡಿಯನ್ ಎಕ್ಸ್‌ಪ್ರೆಸ್, ಮೇ 16).


ಮಾಲೇಗಾಂವ್ ಸ್ಫೋಟಕ್ಕೆ ಬಳಸಿದ್ದು ಮಿಲಿಟರಿ ಗ್ರೇಡ್‌ಆರ್‌ಡಿಎಕ್ಸ್ ಎಂಬುದನ್ನು ಎನ್‌ಐಎ ನಿರಾಕರಿಸಿಲ್ಲ. ಅದನ್ನು ಒದಗಿಸಿದ ಆಪಾದನೆ ಇರುವ ಸೇನಾ ಗುಪ್ತಚರ ವಿಭಾಗದಲ್ಲಿದ್ದ ಕರ್ನಲ್ ಪುರೋಹಿತ್ ಅದನ್ನು ಮಿಲಿಟರಿ ಮೂಲಗಳಿಂದ ಪಡೆದಿರುವ ಸಾಧ್ಯತೆ ಇಲ್ಲ ಎಂದು ಖಚಿತಪಡಿಸಿಕೊಂಡಿರುವುದಾಗಿ ಹೇಳಿರುವ ಎನ್‌ಐಎ, ಹಾಗಿದ್ದರೆ ಅದು ಎಲ್ಲಿಂದ ಬಂತು ಎಂಬ ಬಗ್ಗೆ ಮೌನವಾಗಿದೆ ಎನ್ನುತ್ತಾರೆ.

ಮಾಲೆಗಾಂವ್‌ನಲ್ಲಿ ಸ್ಫೋಟಿಸಿದ ಬಾಂಬನ್ನು ಎಲ್ಲಿ ಜೋಡಿಸಲಾಯಿತು, ಅದನ್ನು ಸ್ಫೋಟದ ಸ್ಥಳಕ್ಕೆ ಹೇಗೆ ಒಯ್ಯಲಾಯಿತು ಎಂಬುದಕ್ಕೆ ಸಂಬಂಧಪಟ್ಟಂತೆ ಎಟಿಎಸ್ ನೀಡಿರುವ ವಿವರಣೆಯನ್ನು ಎನ್‌ಐಎ ಈಗ ತಿರಸ್ಕರಿಸಿದೆ. ಆದರೆ ಅದನ್ನು ಜೋಡಿಸಿದ್ದು, ಮತ್ತು ಮಾಲೇಗಾಂವ್‌ಗೆ ಒಯ್ದದ್ದಂತೂ ನಿಜ, ಹಾಗಿದ್ದರೆ ಈ ಕೆಲಸವನ್ನು ಯಾರು ಎಲ್ಲಿ ಮಾಡಿದರು ಎಂಬ ಬಗ್ಗೆಯೂ ಎನ್‌ಐಎ ಮೌನವಾಗಿದೆ ಎನ್ನುತ್ತಾರೆ ತಿವಾರಿಯವರು.

ಈ ಕೇಸಿನಲ್ಲಿ ನಯವಾಗಿ ವರ್ತಿಸಿರಿ ಎಂದು ವಿಶೇಷ ಪ್ರಾಸಿಕ್ಯೂಟರ್ ಆಗಿದ್ದ ರೋಹಿಣಿ ಸಾಲ್ಯಾನ್‌ರ ಮೇಲೆ ಎನ್‌ಐಎ ಒತ್ತಡ ಹಾಕಿತ್ತು ಎಂದು ಜೂನ್ 2015ರಲ್ಲಿ ಬಯಲಿಗೆ ಬಂದಿತ್ತು. ನಂತರ ಈ ಕೇಸಿನ ಪ್ರಾಸಿಕ್ಯೂಟರನ್ನು ಬದಲಿಸಲಾಗಿತ್ತು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ರೋಹಿಣಿಯವರ ಪ್ರಕಾರ ಈ ಸಪ್ಲಿಮೆಂಟರಿ ಚಾರ್ಜ್‌ಶೀಟ್ ಎನ್‌ಐಎ ಅಭಿಪ್ರಾಯವಷ್ಟೇ. 2009ರಲ್ಲಿ ಎಟಿಎಸ್ ಸಲ್ಲಿಸಿದ 5000 ಪುಟಗಳ ಚಾರ್ಜ್‌ಶೀಟ್ ನಂತರವೇ ಈ ಕೇಸ್ ಸುಪ್ರಿಂ ಕೋರ್ಟಿಗೆ ತಲುಪಿದೆ. ಆದ್ದರಿಂದ ಎಟಿಎಸ್ ಬಗ್ಗೆ ಎನ್‌ಐಎ ತೀರ್ಪು ನೀಡುವಂತಿಲ್ಲ. ಅದಕ್ಕೆ ಕೊಟ್ಟಿರುವ ಕೆಲಸ ಎಟಿಎಸ್‌ನ ತನಿಖೆ ಮಾಡುವುದಲ್ಲ, ಮಾಲೆಗಾಂವ್ ಸ್ಫೋಟದ ತನಿಖೆ ಮಾಡುವುದು ಎಂದು ರೋಹಿಣಿ ಸಾಲ್ಯಾನ್ ಹೇಳಿದ್ದಾರೆ.



ವ್ಯಂಗ್ಯಚಿತ್ರ:ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ



706 ದಿನಗಳಲ್ಲಿ 363 ಭಾಷಣಗಳು! ಸೆಲ್ಫಿ ಪ್ರಧಾನಿ ತಮ್ಮ ಟಾಕ್ ಟೈಮ್ ಮುಗಿಸಿದ್ದಾರೆಯೇ?

ಇದು ಒಬ್ಬ ಪತ್ರಕರ್ತ ಕೇಳಿರುವ ಪ್ರಶ್ನೆ. www.pmindia.gov.in ಮತ್ತು www.narendramodi.in ಈ ಎರಡು ವೆಬ್‌ತಾಣಗಳಿಂದ ಅವರು ಕಲೆ ಹಾಕಿದ ಮಾಹಿತಿಗಳ ಪ್ರಕಾರ 2014ರ ಮೇ ತಿಂಗಳ ಕೊನೆಯಲ್ಲಿ ಪ್ರಧಾನಿ ಪಟ್ಟಕ್ಕೇರಿದ ನಂತರ ಈ ವರ್ಷದ ಮೇ 1ರ ವರೆಗಿನ 706 ದಿನಗಳಲ್ಲಿ ಪ್ರಧಾನಿಗಳು ದೇಶದ ಒಳಗೆ 219 ಭಾಷಣಗಳನ್ನು ಮಾಡಿದ್ದಾರೆ, ವಿದೇಶಗಳಲ್ಲಿ 144 ಭಾಷಣಗಳನ್ನು ಮಾಡಿದ್ದಾರೆ. ಒಟ್ಟು 363 ಭಾಷಣಗಳು(ಮೇ 1 ರ ನಂತರ ಕೇರಳದಲ್ಲಿ ಮಾಡಿದ 'ಸೊಮಾಲಿಯ' ಮತ್ತಿತರ ಭಾಷಣಗಳು ಇದರಲ್ಲಿ ಸೇರಿಲ್ಲ).

ಅಂದರೆ ಪ್ರತಿ 45.6 ಗಂಟೆ ಅಥವ 1.9ದಿನಗಳಿಗೊಂದು ಭಾಷಣ. ಇದರಲ್ಲಿ ಸಂಸತ್ತಿನಲ್ಲಿ ಮಾಡಿದ ಭಾಷಣಗಳು ಸೇರಿಲ್ಲ. ಅದರಿಂದೇನೂ ಮಹಾ ವ್ಯತ್ಯಾಸವಾಗುವುದಿಲ್ಲ. ಏಕೆಂದರೆ ಅಲ್ಲಿ ಮಾತಾಡಿದ್ದು ಬಹಳ ಕಡಿಮೆ. ಮಾತಾಡಲೇ ಬೇಕಾಗಿದ್ದಾಗಲೂ ಮಾತಾಡಿಲ್ಲ, ಹೊರಗಂತೂ ಹೀಗೆ ಮಾತಾಡಲೇ ಬೇಕಿದ್ದಾಗ ಮಾತಾಡದಿರುವುದು ಸಾಕಷ್ಟು ಇದೆ–ಉದಾ: ತಮ್ಮ ಸಂಪುಟದ ಸಹಯೋಗಿಗಳು ಸಾರ್ವಜನಿಕವಾಗಿ ಕೋಮು ವಿಷ ಕಾರುತ್ತಿದ್ದಾಗ, ಉತ್ತರ ಪ್ರದೇಶದಲ್ಲಿ ಗೋಮಾಂಸ ಇಟ್ಟುಕೊಂಡಿದ್ದಾನೆಂಬ ಸುಳ್ಳು ಸುದ್ದಿಯ ಆಧಾರದಲ್ಲಿ ಒಬ್ಬ ಮುಗ್ಧ ನಾಗರಿಕನನ್ನು ಕೊಚ್ಚಿ ಹಾಕಿದಾಗ, ಹಸುವಿನ ಹೆಸರಲ್ಲೇ ಇಬ್ಬರನ್ನು ಮರಕ್ಕೆ ನೇಣು ಹಾಕಿ ಸಾಯಿಸಿದಾಗ, ಸಂಶೋಧನಾ ವಿದ್ಯಾರ್ಥಿ ರೋಹಿತ್ ವೆಮುಲ ಅವರ ಸಹಯೋಗಿ ಮಂತ್ರಿಗಳ ಸತತ ಒತ್ತಡದಿಂದಾಗಿ ವಿವಿ ಆಡಳಿತದ ಕಿರುಕುಳಗಳಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಾಗ –ಇತ್ಯಾದಿ, ಇತ್ಯಾದಿ.

ಈ ಅವಧಿಯಲ್ಲಿ ಪ್ರಧಾನಿಗಳು 41 ಸ್ಕೀಮುಗಳನ್ನು ಅಥವ ಕಾರ್ಯಕ್ರಮಗಳನ್ನು ಉದ್ಘಾಟಿಸಿದ್ದಾರಂತೆ.

ಬಿಹಾರ ವಿಧಾನಸಭಾ ಚುನಾವಣೆಗಳಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕುಪ್ಪಳಿಸುತ್ತಿದ್ದಾಗ ಮೊಬೈಲ್ ಭಾಷೆಯ ಜೋಕ್ "ತನ್ನ ಟಾಕ್‌ಟೈಮ್ ಮುಗಿದಿದೆಯೆಂದು ಪ್ರಧಾನ ಮಂತ್ರಿಗಳಿಗೆ ಇನ್ನೂ ಗೊತ್ತಾಗಿಲ್ಲ" ಹಲವರ ಬಾಯಲ್ಲಿತ್ತಂತೆ.

ಕೇವಲ 'ಅಚ್ಛೇ ದಿನ್' ಪ್ರಚಾರಕ್ಕೆ ಒಂದು ವರ್ಷದಲ್ಲಿ 1000 ಕೋಟಿ ರೂ.

ಕೇಂದ್ರ ಸರಕಾರ ತನ್ನ 'ಸಾಧನೆ'ಗಳ ಪ್ರಚಾರಕ್ಕೆ ಕಳೆದ 11 ವರ್ಷಗಳಲ್ಲಿ 6000 ಕೋಟಿ ರೂ.ಗಳನ್ನು ಖರ್ಚು ಮಾಡಿದೆ, ಇದರಲ್ಲಿ ಸುಮಾರು 1000 ಕೋಟಿ ರೂ. ಬಿಜೆಪಿ ನೇತೃತ್ವದ 'ಅಚ್ಛೇ ದಿನ್' ಸರಕಾರ ಖರ್ಚು ಮಾಡಿದೆ ಎಂದು ವರದಿಯಾಗಿದೆ. ಎಡಪಕ್ಷಗಳ ಬೆಂಬಲವನ್ನು ಆಧರಿಸಿದ್ದರಿಂದ ಸಾಮಾನ್ಯ ಜನರಿಗಾಗಿ ಸ್ವಲ್ಪ ಹೆಚ್ಚು ಕೆಲಸ ಮಾಡಿದ ಯುಪಿಎ–1 ಸರಕಾರ ಸರಾಸರಿ ವರ್ಷಕ್ಕೆ 312 ಕೋಟಿರೂ. ಖರ್ಚು ಮಾಡಿದರೆ, ಎಡಪಕ್ಷಗಳ ಬೆಂಬಲದಿಂದ 'ಮುಕ್ತ'ವಾದ ಯುಪಿಎ–2 ಸರಕಾರ ಡಬ್ಬಲ್, ಅಂದರೆ ಸರಾಸರಿ 696 ಕೋಟಿ ರೂ. ಖರ್ಚು ಮಾಡಿದೆ, ಬಿಜೆಪಿ ಸರಕಾರ ತನ್ನ ಮೊದಲ ವರ್ಷದಲ್ಲೇ ಅದರ ಒಂದೂವರೆ ಪಟ್ಟು ,ಅಂದರೆ 993 ಕೋಟಿ ರೂ. ಖರ್ಚು ಮಾಡಿದೆ. ಇದರಲ್ಲಿ 100 ಕೋಟಿ ರೂ.ಗಳಷ್ಟು ಕೇವಲ 'ಸ್ವಚ್ಛ ಭಾರತ' ಪ್ರಚಾರಕ್ಕೇ ಖರ್ಚು ಮಾಡಲಾಗಿದೆ ಎಂದು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ದೊರೆತ ಮಾಹಿತಿ ಹೇಳುತ್ತದೆ.

ಪ್ರಧಾನ ಮಂತ್ರಿಗಳು ಕೇರಳವನ್ನು ಸೊಮಾಲಿಯಾದೊಂದಿಗೆ ಹೋಲಿಸಿದ್ದಕ್ಕೆ ಎದ್ದು ಬಂದ ಆಕ್ರೋಶಕ್ಕೆ ಉತ್ತರ ಕೊಡಲೆಂದು ಬಿಜೆಪಿ ಅಧ್ಯಕ್ಷರು ಆಂಗ್ಲಪತ್ರಿಕೆಯೊಂದರ ಮುಖಪುಟದಲ್ಲಿ ಪ್ರಕಟವಾದ ಚಿತ್ರವನ್ನು ಪ್ರದರ್ಶಿಸಿದರು. ಆದರೆ ಅದೂ ಕೇರಳದ್ದಾಗಿರದೆ ಶ್ರೀಲಂಕಾದ್ದಾಗಿತ್ತು ಎಂದು ಬೇಗನೇ ಬಯಲಾಯಿತು–ಸುದ್ದಿ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್



ಕೆ.ಎಂ.ನಾಗರಾಜ್

ಮಹಿಳೆಯರ ವಿರುದ್ಧ ಯುದ್ಧ ಸಾರಿದ ಮೋದಿ ಸರ್ಕಾರದ ಎರಡು ಬರಡು ವರ್ಷಗಳು

DoSaalJantaBehaal
#೨_ವರ್ಷ_ ತರಲಿಲ್ಲ_ಹರ್ಷ

2014ರ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಬಿಜೆಪಿ ಘೋಷಿಸಿದ ಬಳಿಕ ಮೋದಿಯವರು 'ಒಳ್ಳೆಯ ದಿನಗಳು' ಬರಲಿವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಕೊನೆಯ ಪಕ್ಷ 31% ಮತದಾರರು ಅವರನ್ನು ನಂಬಿದರು. ಮೋದಿ ಸರ್ಕಾರ ಅಧಿಕಾರ ಹಿಡಿದು ಎರಡು ವರ್ಷಗಳಾದರೂ ಅವರು ಕೊಟ್ಟಿದ್ದ ಯಾವ ಭರವಸೆಯೂ ಈಡೇರಿಲ್ಲ. ಒಳ್ಳೆಯ ದಿನಗಳ ನಿರೀಕ್ಷೆ ಹುಸಿಯಾಗಿದೆ.

ಚುನಾವಣಾ ಪ್ರಚಾರದಲ್ಲಿ ಮತ್ತು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕವೂ ಮೋದಿಯವರು ನಮ್ಮ ಸಮಾಜ ಮಹಿಳೆಯರಿಗೆ ಉನ್ನತ ಸ್ಥಾನ ನೀಡಿದೆ ಎಂದು ಹಾಡಿ ಹೊಗಳಿದ್ದಾರೆ. ಮಹಿಳೆಯರ ಕೊಡುಗೆ ಇಲ್ಲದೆ ದೇಶದ ಅಭಿವೃದ್ಧಿ ಸಾಧ್ಯವೇ ಇಲ್ಲ ಎಂದು ಘಂಟಾಘೋಷವಾಗಿ ಹೇಳಿದ್ದಾರೆ. ಮಹಿಳೆಯರ ಬಗ್ಗೆ ಗೌರವಪೂರ್ಣವಾಗಿ ಮತ್ತು ತುಂಬು ಹೃದಯದಿಂದ ಅವರು ಮಾತಾಡಿರುವುದನ್ನು ಗಮನಿಸಿದರೆ, ಮಹಿಳೆಯರ ಸ್ಥಿತಿ–ಗತಿಗಳನ್ನು ಉತ್ತಮಗೊಳಿಸಲು ಅವರು ಅಧಿಕಾರ ಹಿಡಿದ ದಿನದಿಂದಲೂ, ಹಗಲಿರುಳೂ ಎಡೆ ಬಿಡದೆ ದುಡಿದಿದ್ದಾರೆ ಎಂದು ಯಾರಿಗಾದರೂ ಅನಿಸಬಹುದು. ಆದರೆ, ಮಹಿಳೆಯರ ಸ್ಥಿತಿ–ಗತಿ ಹೇಗಿದೆ?

ತಳದಲ್ಲಿರುವ ಮಹಿಳೆಯರ ಸ್ಥಿತಿ–ಗತಿ

ಈ ಎರಡು ವರ್ಷಗಳಲ್ಲಿ ಮಹಿಳೆರಿಗೆ, ಅದರಲ್ಲೂ ತಳದಲ್ಲಿರುವ ಮಹಿಳೆಯರಿಗೆ ಸಂಬಂಧಪಟ್ಟ ಸರಕಾರೀ ಸಕೀಮುಗಳಿಗೆ ನೀಡಿರುವ ಹಣದ ಪ್ರಮಾಣ ಈ ಸರಕಾರದ ಕಾಳಜಿಯನ್ನು ತೋರಿಸುತ್ತದೆ.

ದೇಶದ ಬಹುಸಂಖ್ಯಾತ ಮಹಿಳೆಯರ ಬಗ್ಗೆ ಯೋಚಿಸಿದಾಗ, ಹಳ್ಳಿಗಳಲ್ಲಿ ದೂರದಿಂದ ನೀರು ಹೊತ್ತು ತರುವ, ನಗರಗಳ ಕೊಳೆಗೇರಿಗಳಲ್ಲಿ ನಲ್ಲಿಯ ಸುತ್ತ ನಿಂತಿರುವ ಅಸಂಖ್ಯಾತ ಮಹಿಳೆಯರ ದೃಶ್ಯ ತೀರ ಸಾಮಾನ್ಯ. ಅದರ ಜೊತೆಗೆ ಸಂಸಾರ ನಿರ್ವಹಣೆಯ ಕಾಯಕದಲ್ಲಿ ತೊಡಗುವ ಸಾಮಾನ್ಯ ಮಹಿಳೆಯ ಸಮಸ್ಯೆಗಳಿಗೆ ಜಾಹಿರಾತಿನ ಮೂಲಕ "ಎಲ್ಲ ಸಮಸ್ಯೆಗಳಿಗೆ ಪರಿಹಾರ; ಮೋದಿ ಸರ್ಕಾರ" ಎಂದು ಬಿಂಬಿಸಿಕೊಂಡಿದ್ದ ಸರ್ಕಾರದಿಂದ ಯಾವ ಪರಿಹಾರವೂ ದೊರೆತಿಲ್ಲ. ಗ್ರಾಮೀಣ ಕೃಷಿ ಕೂಲಿಗಾರ ಮಹಿಳೆಯರಿಗೆ, ಅಂಗನವಾಡಿ, ಶಾಲಾ ಮಕ್ಕಳಿಗೆ ಬಿಸಿಯೂಟ, ಆಶಾ ಮತ್ತಿತರ ಸೇವೆಗಳಲ್ಲಿ 1500ರಿಂದ 3000 ರೂಪಾಯಿಗಳಿಗೆ ದುಡಿಯುವ ಮಹಿಯರಿಗೆ 'ಒಳ್ಳೆಯ ದಿನಗಳು' ಬರಲೇ ಇಲ್ಲ.

ತಮ್ಮ ಭಾಷಣಗಳಲ್ಲಿ ಮಾತ್ರ ಮಹಿಳೆಯರಿಗೆ ಉನ್ನತ ಸ್ಥಾನ ಕಲ್ಪಿಸಿರುವ ಮೋದಿಯವರು ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ 2016–17ರ ಬಜೆಟ್‌ನಲ್ಲಿ ಶೇ.50 ಹಣ ಕಡಿತವಾಗಿದೆ. ಸರ್ಕಾರ ಮಾಡಿರುವ ಈ ಕಡಿತಗಳಿಂದಾಗಿ ಮಹಿಳೆಯರ ಮತ್ತು ನಿರ್ಗತಿಕರ ಸಂಕಷ್ಟಗಳು ಹೆಚ್ಚುತ್ತವೆ. ಬರಗಾಲ ಮತ್ತು ಕೃಷಿ ಬಿಕ್ಕಟ್ಟಿನಿಂದಾಗಿ ಜನ ಪಟ್ಟಣಗಳಿಗೆ ಗುಳೆ ಹೋಗುವುದು ತೀವ್ರಗೊಳ್ಳುತ್ತದೆ.

2013–14 ರಿಂದ 2016–17ರ ಬಜೆಟ್‌ಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಜೀವನದ ಮೇಲೆ ಪರಿಣಾಮ ಬೀರುವ ಯೋಜನೆಗಳಿಗೆ ನಿಗದಿಪಡಿಸಿರುವ ಹಣದ ವಿವರ ಕೆಳಗೆ ಕೊಟ್ಟಿರುವ ಕೋಷ್ಟಕದಲ್ಲಿದೆ.

ಮಹಿಳೆಯರು ರಾಷ್ಟ್ರ ನಿರ್ಮಾಪಕರು' ಎಂದು ತನ್ನ 2014ರ ಲೋಕ ಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದ ಬಿಜೆಪಿ, ಅಧಿಕಾರ ಹಿಡಿದ ನಂತರ ಮಹಿಳೆಯರ ಬಗ್ಗೆ ತಳೆದಿರುವ ಕೆಲವು ಧೋರಣೆಗಳು ಅವರನ್ನು ಆರ್ಥಿಕವಾಗಿ ಮಾತ್ರವಲ್ಲ, ಇತರ ರಂಗಗಳಲ್ಲೂ ಮುಖ್ಯವಾಹಿನಿಯಿಂದ ದೂರ ಮಾಡಿವೆ. ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯರನ್ನು ವಂಚಿಸುತ್ತಿವೆ.

ಮಹಿಳೆಯರನ್ನು ಚುನಾಯಿತ ಹುದ್ದೆಗಳಿಂದ ಹೊರಗಿಟ್ಟದ್ದು

ಪಾರ್ಲಿಮೆಂಟಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರಕ್ಕೆ ತಾನು ಬದ್ಧವೆಂದು ಘೋಷಿಸಿದ್ದ ಬಿಜೆಪಿ ಈಗ ಅದರ ಬಗ್ಗೆ ಚಕಾರ ಎತ್ತುತ್ತಿಲ್ಲ. ಮಹಿಳಾ ಮೀಸಲಾತಿ ಮಸೂದೆಯು ರಾಜ್ಯ ಸಭೆಯ ಅಂಗೀಕಾರ ಪಡೆದು ಈಗಾಗಲೇ ಎರಡು ವರ್ಷಗಳಾಗಿವೆ. ಶೀಘ್ರದಲ್ಲೇ ಲೋಕ ಸಭೆಯಲ್ಲಿ ಮಂಡಿಸಲಾಗುವುದು ಎಂದಷ್ಟೇ ಅದು ಹೇಳಿದೆ. ಶೀಘ್ರದಲ್ಲಿ ಎಂದರೆ ಯಾವ ಕಾಲದಲ್ಲಿ ಎಂಬುದು ಸ್ಪಷ್ಟವಾಗಿಲ್ಲ. ಮುಂದಿನ ವರ್ಷ ದೇಶವು ಸ್ವಾತಂತ್ರ್ಯದ 70ನೇ ವಾರ್ಷಿಕೋತ್ಸವ ಆಚರಿಸಲಿರುವ ಸಂದರ್ಭದಲ್ಲಿಯೂ ಲೋಕ ಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೇವಲ 11% ಇರುತ್ತದೆ. ಲೋಕ ಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸುವುದೇ ಮಹಿಳಾ ಮೀಸಲಾತಿಯ ಉದ್ದೇಶ.


ಹಿಂದಿದ್ದ ಸರ್ಕಾರಗಳೂ ಲೋಕ ಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸಲು ಆಸಕ್ತಿ ವಹಿಸಿರಲಿಲ್ಲ ಎಂಬುದು ನಿಜ. ಆದರೆ, ಬಿಜೆಪಿ ನೇತೃತ್ವದ ರಾಜಾಸ್ಥಾನ ಮತ್ತು ಹರ್‍ಯಾಣ ಸರ್ಕಾರಗಳು ಅದನ್ನು ಮತ್ತಷ್ಟು ಕಡಿತ ಮಾಡಲು ಮುಂದಾಗಿವೆ. ಅದಕ್ಕಾಗಿ ಮಹಿಳೆಯರ ಸಂವೈಧಾನಿಕ ಹಕ್ಕುಗಳ ಮೇಲೆ ದಾಳಿ ಆರಂಭಿಸಿವೆ. ಈ ಸರ್ಕಾರಗಳು, ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಶಿಕ್ಷಣ ಪಡೆದಿರುವ ಮತ್ತು ತಮ್ಮ ಮನೆಯಲ್ಲಿ ಶೌಚಾಲಯ ಹೊಂದಿರದ ಮಹಿಳೆಯರು ಗ್ರಾಮ ಪಂಚಾಯ್ತಿಯ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಕೆಲವು ಅವೈಚಾರಿಕ ಅರ್ಹತೆಗಳನ್ನು ನಿಗದಿಪಡಿಸಿವೆ. ಇದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ.

ಬಿಜೆಪಿ ಸರ್ಕಾರಗಳು ವಿಧಿಸಿರುವ ಇಂತಹ ಅಸಂವೈಧಾನಿಕ ನಿರ್ಬಂಧಗಳಿಂದಾಗಿ ದಲಿತರು ಮತ್ತು ಹಿಂದುಳಿದ ಪಂಗಡಗಳಿಗೆ ಸೇರಿದ ಸುಮಾರು 80% ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸುವ ತಮ್ಮ ಹಕ್ಕುಗಳಿಂದ ವಂಚಿತರಾದರು. ನ್ಯಾಯಾಲಯದಲ್ಲಿ ಈ ನಿರ್ಬಂಧಗಳನ್ನು ಪ್ರಶ್ನಿಸಲಾಯಿತು. ದುರದೃಷ್ಟವಷಾತ್, ನ್ಯಾಯಾಲಯಗಳು ಅವರ ಕೋರಿಕೆಯನ್ನು ಮಾನ್ಯಮಾಡಲಿಲ್ಲ. ಪರಿಣಾಮವಾಗಿ, ಅನೇಕ ಸೀಟುಗಳಲ್ಲಿ ಅವಿರೋಧ ಆಯ್ಕೆಗಳಾದವು ಮತ್ತು ಹಲವು ಸೀಟುಗಳು ಅಭ್ಯರ್ಥಿಗಳ ಕೊರತೆಯಿಂದಾಗಿ ಖಾಲಿ ಉಳಿದಿವೆ.

ಒಂದಲ್ಲಾ ಒಂದು ನೆಪದ ಮೇಲೆ ಮಹಿಳಾ ಮೀಸಲಾತಿ ಮಸೂದೆ ಲೋಕ ಸಭೆಯಲ್ಲಿ ಮಂಡನೆಯಾಗದಂತೆ ತಡೆದಿರುವುದರ ಜೊತೆ–ಗೆ ಪ್ರಜಾಪ್ರಭುತ್ವದ ತಳಮಟ್ಟದ ಸಂಸ್ಥೆಗಳಲ್ಲೂ ಮಹಿಳೆಯರ ಭಾಗವಹಿಸುವಿಕೆಯನ್ನು ಬಿಜೆಪಿಯು ತಪ್ಪಿಸಿದೆ. 'ಎಲ್ಲರ ಜೊತೆಯಲ್ಲಿ ಮತ್ತು ಎಲ್ಲರ ವಿಕಾಸ' ಎನ್ನುವ ಬಿಜೆಪಿಯ ಘೋಷಣೆಯು ವೋಟು ಗಳಿಸುವ ತಂತ್ರಗಾರಿಕೆಯಲ್ಲದೆ ಬೇರೇನೂ ಅಲ್ಲ. ಮಹಿಳೆಯರು ರಾಷ್ಟ್ರ ನಿರ್ಮಾಪರು ಎಂದು ಹೊಗಳಿದ ಬಿಜೆಪಿ ಶಿಕ್ಷಣ ಪಡೆಯದ ದಲಿತ–ಹಿಂದುಳಿದ ಮಹಿಳೆಯರನ್ನು ಕಾಲ ಕಸದಂತೆ ಕಾಣುತ್ತಿದೆ.

ಭ್ರೂಣ ಲಿಂಗ ಪರೀಕ್ಷೆ ಮತ್ತು ಬಿಜೆಪಿ

ದೇಶದ ಅನೇಕ ಭಾಗಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟಲು ಒಂದು ಕಾಯ್ದೆಯನ್ನು 1994ರಲ್ಲಿ ಜಾರಿಮಾಡಲಾಗಿತ್ತು. ಕಾಯ್ದೆಯ ಜಾರಿ ಅಸಮರ್ಪಕವಾಗಿದೆ ಎಂಬ ಕಾರಣದ ಮೇಲೆ ಲಿಂಗ ಪರೀಕ್ಷೆಯನ್ನು ಕಡ್ಡಾಯಮಾಡುವ ಇಂಗಿತವನ್ನು ಮೋದಿ ಸರ್ಕಾರದ ಮಹಿಳಾ ಮತ್ತು ಶಿಶು ಕಲ್ಯಾಣ ಸಚಿವೆ ಮನೇಕಾ ಗಾಂಧಿ ವ್ಯಕ್ತಪಡಿಸಿದ್ದಾರೆ. ಇದು ಜಾರಿಗೆ ಬಂದರೆ, ಹೆಣ್ಣು ಮಗು ಹುಟ್ಟದಂತೆ ತಡೆಯಲು ವೈದ್ಯಕೀಯ ತಾಂತ್ರಿಕತೆಯನ್ನು ಬಳಸಿಕೊಳ್ಳುತ್ತಿರುವ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಹೆರಿಗೆ ವಯಸ್ಸಿನ ಮಹಿಳೆಯರ ಜೀವನ ನರಕವಾಗುತ್ತದೆ. ಒಂದು ವೇಳೆ ಭ್ರೂಣ ಲಿಂಗ ಪರೀಕ್ಷೆಯನ್ನು ಕಡ್ಡಾಯಮಾಡಿದರೆ ಈಗಾಗಲೇ ಭಾರಿ ಹಣ ಮಾಡುತ್ತಿರುವ ವೈದ್ಯರು– ಅಲ್ಟ್ರಾ ಸೌಂಡ್ ಉಪಕರಣ ತಯಾರಕರ ಕೂಟವು ಹಣ ಮಾಡುವ ಯಂತ್ರಗಳಾಗುತ್ತಾರೆ. ಮೇಲಾಗಿ, ಭ್ರೂಣ ಲಿಂಗ ಪರೀಕ್ಷೆಗೆ ಒಳಗಾದ ನಂತರ ತಾಯಿ ಆಗುವ ಪ್ರತಿ ಹೆಣ್ಣಿನ ಮೇಲೂ ನಿಗಾ ಇಡುವ ಸಾಮರ್ಥ್ಯ ಸರ್ಕಾರದ ಬಳಿ ಇದೆಯೇ? ಅದಕ್ಕೂ ಮಿಗಿಲಾಗಿ, ತಾಯಿ ಆಗುವ ಹೆಣ್ಣನ್ನು ಸಂಪೂರ್ಣವಾಗಿ ಹೊಣೆಗಾರಳನ್ನಾಗಿ ಮಾಡುವ ಈ ವ್ಯವಸ್ಥೆಯು ಮತ್ತು ಸಿದ್ಧಾಂತವು ಮಹಿಳಾ–ವಿರೋಧಿಯಾಗಿವೆ.



ದೋ ಸಾಲ್ ಬೇಮಿಸಾಲ್: ಅಭೂತಪೂರ್ವ ಎರಡು ವರ್ಷಗಳು–ಆಹಾ! ಎಂತಹ ಘೋಷಣೆ
(ಜನರಿಗೆ ಅಚ್ಛೇದಿನ್, ಮೇಕ್‌ಇನಿಂಡಿಯಾ ಇತ್ಯಾದಿ ಇತ್ಯಾದಿ ಘೋಷಣೆಗಳ ಹೊದಿಸಿ)
ಸತೀಶ್ ಆಚಾರ್ಯ ಅವರ ವ್ಯಂಗ್ಯಚಿತ್ರ

ವೈವಾಹಿಕ ಅತ್ಯಾಚಾರ ಮತ್ತು ಬಿಜೆಪಿ

ಈ ವರ್ಷದ ಮಹಿಳಾ ದಿನಾಚರಣೆಯ ನಂತರದಲ್ಲಿ, "ಭಾರತದ ಸನ್ನಿವೇಶದಲ್ಲಿ ವೈವಾಹಿಕ ಅತ್ಯಾಚಾರ ಎಂಬ ನೆಲೆಯನ್ನು ಒಪ್ಪಿಕೊಳ್ಳಲಾಗದು" ಎಂಬುದಾಗಿ ಮೋದಿ ಸರ್ಕಾರದ ಸಚಿವೆ ಮನೇಕಾ ಗಾಂಧಿಯವರು ಹೇಳಿರುವುದು ಅವರ ಮಹಿಳಾ ವಿರೋಧಿ ನಿಲುವಿನ ಮತ್ತೊಂದು ನಿದರ್ಶನವಾಗಿದೆ. ಗಂಡ ತನ್ನ ಹೆಂಡತಿಯ ಇಷ್ಟಕ್ಕೆ ವಿರುದ್ಧವಾಗಿ ಅವಳ ಮೇಲೆ ಬಲಾತ್ಕಾರ ಸಂಭೋಗ ನಡೆಸಬಹುದು, ಅದರಲ್ಲಿ ತಪ್ಪೇನಿಲ್ಲ ಎಂಬ ಸಾಮಾನ್ಯ ಭಾರತೀಯ ಅಭಿಪ್ರಾಯವನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಒಪ್ಪುತ್ತವೆ. ಒಂದು ವೇಳೆ ವೈವಾಹಿಕ ಅತ್ಯಾಚಾರವನ್ನು ಅಪರಾಧೀಕರಣಗೊಳಿಸಿದರೆ ಅದು ಕುಟುಂಬ ಜೀವನವನ್ನು ಅಲ್ಲೋಲ ಕಲ್ಲೋಲಗೊಳಿಸುತ್ತದೆ ಎಂದು ಮನೇಕಾ ಗಾಂಧಿ ಹೇಳುತ್ತಾರೆ. ಹಿಂಸೆ ಮತ್ತು ಬಲವಂತಗಳ ಮೂಲಕ ಕುಟುಂಬದ ಐಕ್ಯತೆಯನ್ನು ಕಾಪಾಡಬಹುದೆಂಬುದು ಅವರ ಯೋಚನೆ.

ಮಹಿಳೆ– ಶಿಕ್ಷಣ– ಬಿಜೆಪಿ

'ಹೆಣ್ಣು ಮಗಳನ್ನು ಓದಿಸಿ, ಹೆಣ್ಣು ಮಗಳನ್ನು ರಕ್ಷಿಸಿ' ಎಂಬುದು ಮೋದಿ ಸರ್ಕಾರದ ಹೆಮ್ಮೆಯ ಘೋಷಣೆ. ರಾಜಾಸ್ಥಾನದಲ್ಲಿ ಮಹಿಳಾ ಸಾಕ್ಷರತೆ ಕೇವಲ 52%. ಅಲ್ಲಿನ ಬಿಜೆಪಿ ಸರ್ಕಾರ 13,000 ಶಾಲೆಗಳನ್ನು ಮುಚ್ಚಿದೆ. ಪಂಚಾಯ್ತಿ ಚುನಾವಣೆಗಳಲ್ಲಿ ಸ್ಪರ್ಧಿಸಲು ಕನಿಷ್ಠ ವಿದ್ಯಾರ್ಹತೆ ನಿಗದಿಪಡಿಸಿದೆ. ಶಾಲಾ ಬಾಲಕಿಯರ ಮೇಲೆ ಅತ್ಯಾಚಾರಗಳು ನಡೆದಿವೆ. ಇಂತಹ ಹಲವು ಕಾರಣಗಳಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸವು ಹಲವು ರಾಜ್ಯಗಳಲ್ಲಿ ಕುಂಠಿತವಾಗುತ್ತಿದೆ.

ಸಂಘ ಪರಿವಾರ ಮತ್ತು ಬಿಜೆಪಿ ಎತ್ತಿ ಹಿಡಿಯುವ ಹಿಂದೂ ಮೂಲಭೂತವಾದಿ ಸಿದ್ಧಾಂತವೂ ಸಮಾಜದಲ್ಲಿ ಮಹಿಳೆಯರ ಸ್ಥಾನ ಮಾನ ಕುಗ್ಗಲು ಕಾರಣವಾಗಿದೆ. ಅದು ಮಹಿಳೆಯರನ್ನು ಒಂದು ವಸ್ತುವನ್ನಾಗಿ ನೋಡುತ್ತದೆ. ಮಹಿಳೆಯ ಸ್ವತಂತ್ರ ವ್ಯಕ್ತಿತ್ವವನ್ನು ಅದು ಒಪ್ಪುವುದಿಲ್ಲ. ಗಂಡಸಿನ ಜೀವನದಲ್ಲಿ ಮಹಿಳೆಗೆ ಪಾರಂಪರಿಕವಾದ ಒಂದು ಪಾತ್ರವಿದೆ ಎಂಬುದನ್ನು ಮಾತ್ರ ಒಪ್ಪುತ್ತದೆ. ಹೆಂಗಸರ ಸೆರಗು ಜಾರಿದರೂ ಅವರ ಕುಟುಂಬದ ಗಂಡಸರಿಗೆ ಅವಮಾನವಾಗುತ್ತದೆ. ಅವಳು ತೊಡುವ ಜೀನ್ಸ್ ಪ್ಯಾಂಟ್/ಸ್ಕರ್ಟ್ ಬೇರೆ ಗಂಡಸರನ್ನು ವಿಚಲಿತಗೊಳಿಸುತ್ತವೆ. ಮಹಿಳೆ ಬೇ–ರೊಂದು ಜಾತಿಯ ಅಥವಾ ಧರ್ಮದ ಪುರುಷನನ್ನು ಮದುವೆಯಾದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ವಿಶ್ವ ವಿದ್ಯಾಲಯಗಳ ಆವರಣದಲ್ಲಿ ಕಾಂಡೋಮ್ ಎಣಿಸುವ ಬಿಜೆಪಿಯ ಎಂ.ಎಲ್‌ಎಗಳು ಅಲ್ಲಿ ಓದುವ ಹೆಣ್ಣುಮಕ್ಕಳ ನಡತೆ–ಯ ಬಗ್ಗೆ ಪ್ರಮಾಣ ಪತ್ರ ವಿತರಿಸಲು ಆರಂಭಿಸಿದ್ದಾರೆ. ಕ್ಷುಲ್ಲಕ ವಿಷಯಗಳನ್ನು ಮೈಯೆಲ್ಲಾ ಕಣ್ಣಾಗಿ ನೋಡುವ ಬಿಜೆಪಿ ಮಂದಿಗೆ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳ ಸಮಸ್ಯೆ ಎದುರಾದಾಗ ಮಹಿಳೆಯರು ಒಂದು ಸಮುದಾಯವಾಗಿ ಅವರ ಕಣ್ಣಿಗೆ ಕಾಣುವುದೇ ಇಲ್ಲ. ಆರ್‌ಎಸ್‌ಎಸ್‌ನ ಸಿದ್ಧಾಂತವನ್ನು ಜಾರಿಮಾಡುವುದಕ್ಕೆ ಮೋದಿ ಸರ್ಕಾರ ಬದ್ಧವಾಗಿರುವುದರಿಂದ, ಹೋರಾಟಗಳ ಮೂಲಕ ಗಳಿಸಿದ ಎಲ್ಲವನ್ನೂ ಕಳೆದುಕೊಳ್ಳುವ ಅಪಾಯದಲ್ಲಿ ಮಹಿಳೆಯರಿದ್ದಾರೆ. ●

2013–14 ರಿಂದ(ಅಂದರೆ ಯುಪಿಎ–2 ಸರಕಾರದ ಕೊನೆಯ ವರ್ಷ)ದಿಂದ 2016–17ರ ವರೆಗೆ ಬಜೆಟ್‌ಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಜೀವನದ ಮೇಲೆ ಪರಿಣಾಮ ಬೀರುವ ಯೋಜನೆಗಳಿಗೆ ನಿಗದಿಪಡಿಸಿರುವ ಹಣದ ವಿವರ
(ಕೋಟಿ ರೂಪಾಯಿಗಳಲ್ಲಿ)

ಸ್ಕೀಂ	2013–14	2014–15	2015–16	2016–17
ಸಮಗ್ರ ಶಿಶು ಕಲ್ಯಾಣ	16,400.8	16,683.6	15,584.2	14,862.9
ಬಿಸಿಯೂಟ	10,917.6	10,523.5	9,236.4	9,700.0
ಸಬಲ	603.0	622.4	475.5	460.0
ಆರೋಗ್ಯ	18,633.8	19,751.5	19,122.0	19,037.0
ಕುಡಿಯುವ ನೀರು – ಗ್ರಾಮೀಣ	9,691.3	9,242.8	4,373.0	5,000.0

ಭೂಮಿ ಹಕ್ಕಿನ ರಕ್ಷಣೆಗೆ ಹಿಮಾಚಲ ರೈತರ ಬೃಹತ್ ಚಳುವಳಿ

ಮೇ 3 ಮತ್ತು 4 ರಂದು ಹಿಮಾಚಲ ಪ್ರದೇಶದ ರೈತರು ಭಾರೀ ಮಳೆ ಮತ್ತು ಸುಂಟರಗಾಳಿಯನ್ನೂ ಲೆಕ್ಕಿಸದೆ ಭೂಮಿ ಹಕ್ಕುಗಳ ರಕ್ಷಣೆಗಾಗಿ ಬೃಹತ್ ಧರಣಿ ನಡೆಸಿದರು. ಇದಕ್ಕೆ ಮೊದಲು ರೈತರು ಹಿಮಾಚಲ ಕಿಸಾನ್ ಸಭಾ ಮತ್ತು ಹಿಮಾಚಲ ಸೇಬು ಬೆಳೆಗಾರರ ಸಂಘದ ನೇತೃತ್ವದಲ್ಲಿ 72 ದಿನಗಳ ರಾಜ್ಯವ್ಯಾಪಿ ಪ್ರಚಾರಾಂದೋಲನ ನಡೆಸಿದ್ದರು.

ಈ ರಾಜ್ಯದ 90ಶೇ. ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಬೆಳೆಗಾರರಲ್ಲಿ 56ಶೇ. ಮಹಿಳೆಯರು. ಕಿಸಾನ್ ಸಭಾ ನೇತೃತ್ವದ ಸತತ ಹೋರಾಟಗಳಿಂದಾಗಿ ಕಾಂಗ್ರೆಸ್ ಸರಕಾರ ಬಡವರು ಬೇಸಾಯ ಮಾಡುವ 10 ಬೀಘಾಗಳ ವರೆಗಿನ ಜಮೀನನ್ನು ಸಕ್ರಮಗೊಳಿಸಲು ಒಪ್ಪಿತ್ತು. ಆದರೆ ಆ ವಚನವನ್ನು ಪಾಲಿಸಲಿಲ್ಲ. ಬದಲಿಗೆ, ಈ ಜಮೀನುಗಳಲ್ಲಿ ರೈತರು ಕಷ್ಟಪಟ್ಟು ಬೆಳೆಸಿದ್ದ ಸೇಬು ಮತ್ತಿತರ ಹಣ್ಣು ಕೊಡುವ ಮರಗಳನ್ನು ಕಡಿದುಹಾಕಲಾಗಿದೆ, ನೀರು ಮತ್ತು ವಿದ್ಯುತ್ ಸಂಪರ್ಕಗಳನ್ನು ಕಡಿದು ಹಾಕಲಾಗಿದೆ. ಇದನ್ನು ಪ್ರತಿಭಟಿಸಿ, ರೈತರ ಭೂಹಕ್ಕುಗಳ ಮೇಲಿನ ದಾಳಿಗಳನ್ನು ವಿರೋಧಿಸಿ ಈ ಚಳುವಳಿ ನಡೆದಿತ್ತು.

ಬಡ, ಸಣ್ಣ ಮತ್ತು ಅಂಚಿನಲ್ಲಿರುವ ರೈತರು, ದಲಿತರು, ವಿಧವೆಯರು ಮತ್ತು ಹುತಾತ್ಮರ ಕುಟುಂಬಗಳು ಸರಕಾರೀ ಭೂಮಿಯಲ್ಲಿ ಬೇಸಾಯ ಮಾಡುತ್ತಿರುವ 5 ಬೀಘಾ ವರೆಗಿನ ಜಮೀನನ್ನು ಸಕ್ರಮಗೊಳಿಸಬೇಕು, ನ್ಯಾಯ ದರಗಳಲ್ಲಿ 25 ಬೀಘಾ ಜಮೀನನನು ರೈತರಿಗೆ ಲೀಸಿಗೆ ಕೊಡಬೇಕು, ಅರಣ್ಯ ಹಕ್ಕು ಕಾಯ್ದೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಅರಣ್ಯವಾಸಿಗಳಿಗೆ ಜಮೀನು ಪಟ್ಟಾಗಳನ್ನು ಕೊಡಬೇಕು, ರೈತರನ್ನು ಒಕ್ಕಲೆಬ್ಬಿಸುವುದು, ಕಾನೂನುಬಾಹಿರವಾಗಿ ಹಣ್ಣಿನ ಮರಗಳನ್ನು ಕಡಿದು ಹಾಕುವುದು ಇವನ್ನೆಲ್ಲ ನಿಲ್ಲಿಸಬೇಕು ಮುಂತಾದವು ಹಿಮಾಚಲ ರೈತರ ಈ ಚಳುವಳಿಯ ಬೇಡಿಕೆಗಳು.

ರಾಜ್ಯದ ಹಿರಿಯ ಕಾರ್ಮಿಕ ಮುಖಂಡರೂ, ಈ ಹಿಂದೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳೂ ಆಗಿದ್ದ ರಾಕೇಶ್ ಸಿಂಘಾ ಧರಣಿಯನ್ನು ಉದ್ಘಾಟಿಸಿ ಮಾತನಾಡುತ್ತ ಸರಕಾರ ರೈತರ ಜೀವನಾಧಾರಕ್ಕೆ ಏಟು ಹಾಕುತ್ತಿದೆ, ಇದನ್ನು ಎದುರಿಸಬೇಕು ಎನ್ನುತ್ತ ಕಾಂಗ್ರೆಸ್ ಮತ್ತು ಬಿಜೆಪಿ ಇಬ್ಬರೂ ಅರಣ್ಯ ಹಕ್ಕು ಕಾಯ್ದೆಯ ವಿಷಯದಲ್ಲಿ ಗೋಸುಂಬೆತನ ಪ್ರದರ್ಶಿಸುತ್ತಿದ್ದಾರೆ, ಇದನ್ನು ಬಯಲಿಗೆಳೆಯಬೇಕು ಎಂದರು.



ಹಿಮಾಚಲ ರೈತರ ಈ ಹೋರಾಟಕ್ಕೆ ಅಖಿಲ ಭಾರತ ಕಿಸಾನ್ ಸಭಾದ ಬೆಂಬಲವನ್ನು ವ್ಯಕ್ತಪಡಿಸುತ್ತ ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಬೆಳೆದು ನಿಂತಿರುವ ಹಣ್ಣಿನ ಮರಗಳನ್ನು ಕಡಿಯುವ, ಮನೆಗಳನ್ನು ಧ್ವಂಸ ಮಾಡುವ ಅಮಾನವೀಯ ಕೃತ್ಯಗಳ ವಿರುದ್ಧ ಐಕ್ಯ ಪ್ರತಿರೋಧವನ್ನು ಕಟ್ಟಬೇಕು ಎಂದು ಕರೆ ನೀಡಿದರು.

24 ಗಂಟೆಗಳ ಧರಣಿಯ ನಂತರ ಈ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ಮತ್ತು ಈ ಬೇಡಿಕೆಗಳ ಈಡೇರಿಕೆ ಆಗುವ ವರೆಗೆ ಹೋರಾಟವನ್ನು ಇನ್ನಷ್ಟು ತೀವ್ರವಾಗಿ ಮುಂದುವರೆಸುವ ನಿರ್ಧಾರ ಕೈಗೊಳ್ಳಲಾಯಿತು. ಈ ಬಗ್ಗೆ ಚರ್ಚಿಸಿ ಕಾರ್ಯಾಚರಣೆಯನ್ನು ರೂಪಿಸಲು ಮೇ 21–22ರಂದು ರಾಜ್ಯ ಮಟ್ಟದ ಸಮಾವೇಶ ನಡೆಯಲಿದೆ.



ಒಲಿಂಪಿಕ್ ಪಂದ್ಯಗಳಲ್ಲಿ ಸ್ಪರ್ಧಿಸಲು ಅರ್ಹ ಳಾಗಿರುವ ಮೊದಲ ಭಾರತೀಯ ಮಹಿಳಾ ಕುಸ್ತಿಪಟು ದೀಪಾ ಕರ್ಮಕರ್ ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ರವರನ್ನು ಭೇಟಿ ಮಾಡಿದಾಗ. ತ್ರಿಪುರಾ ಮುಖ್ಯಮಂತ್ರಿಗಳು ಆಕೆಯನ್ನು ಈ ಸಾಧನೆಗೆ ಅಭಿನಂದಿಸುತ್ತ ಆಕೆಗೆ ಅಗತ್ಯವಾದ ಎಲ್ಲ ಬೆಂಬಲಗಳನ್ನು ಒದಗಿಸುವುದಾಗಿ ಭರವಸೆ ನೀಡಿದರು.

ಪಂಜಾಬ್: ಸಾರಿಗೆ ಕಾರ್ಮಿಕರ ಮೂರು ದಿನಗಳ ಮುಷ್ಕರ

ಕಾನೂನು ಬಾಹಿರ ಕಾಂಟ್ರಾಕ್ಟ್ ಪದ್ಧತಿಯನ್ನು ರದ್ದು ಮಾಡಬೇಕು ಮತ್ತು ಸಮಾನಕೆಲಸಕ್ಕೆ ಸಮಾನ ಸಂಬಳ ಕೊಡಬೇಕು ಎಂದು ಆಗ್ರಹಿಸಿ ಪಂಜಾಬ್ ರೋಡ್‌ವೇಸ್ ಕಾಂಟ್ರಾಕ್ಟ್ ಕಾರ್ಮಿಕರ ಸಂಗ ಮೇ17ರಿಂದ 19ರ ವರೆಗೆ ಮೂರು ದಿನಗಳ ಮುಷ್ಕರಕ್ಕೆ ಕರೆ ಕೊಟ್ಟಿತು. ಇದಕ್ಕೆ ಓಗೊಟ್ಟು ಜಾಲಂಧರ್‌ನಲ್ಲಿ 3500 ಚಾಲಕರು, ನಿರ್ವಾಹಕರು ಮತ್ತು ವರ್ಕ್‌ಶಾಪ್ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಮೇ18ರಂದು ನಡೆದ ಒಂದು ಬೃಹತ್ ಪ್ರತಿಭಟನೆಯಿಂದಾಗಿ ಪಂಜಾಬ್ ಮುಖ್ಯಮಂತ್ರಿಗಳ ಮೇ26ರಂದು ಕಾರ್ಮಿಕರ ಪ್ರತಿನಿಧಿಗಳನ್ನು ಚಂಡೀಗಡದಲ್ಲಿ ಭೇಟಿಯಾಗಲು ಒಪ್ಪಿಕೊಳ್ಳಬೇಕಾಗಿ ಬಂದಿದೆ. ರ‍್ಯಾಲಿಯನನು ಉದ್ದೇಶಿಸಿ ಸೈಟಿಯು ಪಂಜಾಬ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಾಥ್ ಸಿಂಗ್, ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟದ ಕಾರ್ಯದರ್ಶಿ ಚಂದರ್ ಶೇಖರ್ ಮತ್ತಿತರ ಮುಖಂಡರು ಮಾತನಾಡಿದರು.



ಹೆಚ್ಚುವರಿ ವಂತಿಗೆ ಪಡೆಯುವ ಶಾಲೆಗಳ ಮಾಹಿತಿ ದಾಖಲೆ ಸಮೇತ ಬಿಡುಗಡೆ

ನಿಯಮ ಉಲ್ಲಂಘಿಸಿ ಪೋಷಕರಿಂದ ಹಣ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಜರುಗಿಸಲು ಒತ್ತಾಯಿಸಿ ದಾಖಲೆ ಸಮೇತ ಎಸ್.ಎಫ್.ಐ ರಾಜ್ಯ ನಿಯೋಗ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಆನಂದ ರವರಿಗೆ ಮೇ 18ರಂದು ದೂರು ಸಲ್ಲಿಸಿದರು. ಇದೇ ವೇಳೆ ಆರ್.ಟಿ.ಇ ಗೊಂದಲ ನಿವಾರಿಸುವಂತೆ ಒತ್ತಾಯಿಸಲಾಯಿತು.



ಮನವಿ ಸ್ವೀಕರಿಸಿ ಮಾತನಾಡಿದ ಆನಂದ್ ರವರು ಫ್ಲೆಕ್ಸ್ ಹಾಕದ ಶಾಲೆಗಳ ಮೇಲೆ ಹಾಗೂ ಹೆಚ್ಚುವರಿ ಹಣ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಜರುಗಿಸಲು ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಉಪ ನಿರ್ದೇಶಕರ ಜತೆ ಮಾತನಾಡಿ ವರದಿ ತರಸಿಕೊಳ್ಳಲಾಗುವುದು ನಂತರದಲ್ಲಿ ಶಿಕ್ಷಣ ಹಕ್ಕು ಉಲ್ಲಂಘನೆಯಡಿಯಲ್ಲಿ ಕ್ರಮ ಜರುಗಿಸುತ್ತೇವೆ ಹಾಗೂ ಆರ್.ಟಿ.ಇ.ದಲ್ಲಿನ ವಾರ್ಡ್ ಗೊಂದಲವನ್ನು ನಿವಾರಣೆ ಮಾಡುವುದಕ್ಕಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಪುರಸಭೆ/ ನಗರಸಭೆಯ ಆಯುಕ್ತರು, ಡಿ.ಡಿ.ಪಿ.ಐ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಇದರ ಸದಸ್ಯರಾಗಿದ್ದಾರೆ. ಆಯ್ಕೆಯಾಗಿರುವ ಮಗುವಿನ ವಾರ್ಡ್ ಸಮಸ್ಯೆಯನ್ನು ಬಗೆ ಹರಿಸಿ ಅರ್ಜಿ ತಿರಸ್ಕರಿಸುವ ಹಾಗೂ ಪುರಸ್ಕರಿಸುವ ಜವಾಬ್ದಾರಿಯನ್ನು ಈ ಸಮಿತಿಗೆ ನೀಡಲಾಗಿದೆ ಎಂದು ತಿಳಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳು 10*6 ಬ್ಯಾನರನ್ನು ಹಾಕಬೇಕು, ಬ್ಯಾನರ್‌ನಲ್ಲಿ ಶಾಲೆಯ ನೋಂದಣಿ, ಶಿಕ್ಷಕರ ಸಂಖ್ಯೆ, ಮಾಧ್ಯಮ, ಶುಲ್ಕದ ವಿವರ, ಸೌಲಭ್ಯಗಳ ಮಾಹಿತಿಗಳನ್ನು ತಿಳಿಸಬೇಕು ಎಂದು ಹೇಳಿದ್ದರೂ, ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಕುತ್ತಿಲ್ಲ. ಇದು ಶಿಕ್ಷಣ ಹಕ್ಕಿನ ಉಲ್ಲಂಘನೆಯಾಗಿದೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಎಸ್.ಎಫ್.ಎಸ್ ಪಬ್ಲಿಕ್ ಶಾಲೆ, ಹೆಗ್ಗನಳ್ಳಿಯ ಅಪೋಲೊ ಪಬ್ಲಿಕ್ ಶಾಲೆ, ಮುನೇಶ್ವರ ನಗರದ ಪ್ರಸನ್ ಪಬ್ಲಿಕ್ ಶಾಲೆ, ಮಿಲ್ಲತ್ಹಳ್ಳಿ (ನಾಗರಬಾವಿ) ಕನ್ಯಾಕುಮಾರಿ ವಿದ್ಯಾಸಂಸ್ಥೆ, ಕ್ರೈಸ್ತಕಿಂಗ್ ಪಬ್ಲಿಕ್ ಶಾಲೆ, ಸಂಪಂಗಿ ರಾಮನಗರದ ಕೆಂಬ್ರಿಡ್ಜ್ ಪಬ್ಲಿಕ್ ಶಾಲೆ. ಕೊಪ್ಪಳ ಜಿಲ್ಲೆಯ ಎಸ್.ಎಫ್.ಎಸ್. ಪಬ್ಲಿಕ್ ಶಾಲೆ, ಟ್ರಿನಿಟಿ ಪಬ್ಲಿಕ್ ಶಾಲೆ, ಸ್ವಾಮಿ ವಿವೇಕಾನಂದ ಶಾಲೆ, ಆಕ್ಸಫರ್ಡ ಪಬ್ಲಿಕ್ ಶಾಲೆ, ಚೈತನ್ಯ ಪಬ್ಲಿಕ್ ಶಾಲೆ, ವಿದ್ಯಾನಿಕೇತನ, ಲಿಟ್ಲ್ ಹಾರ್ಟ್ಸ ಪಬ್ಲಿಕ್ ಶಾಲೆ, ಭೆಥಲ್ ಪಬ್ಲಿಕ್ ಶಾಲೆ, ಹಾವೇರಿಯ ಕೆ.ಎಲ್.ಇ ಪಬ್ಲಿಕ್ ಶಾಲೆ, ಶ್ರೀಸಾಯಿಗುರುಕುಲ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಎನಪೂಯ ಶಾಲೆ, ಶಾರದಾ ವಿದ್ಯಾಲಯ, ಪ್ರೆಸ್ಟೆಜ್ ಪಬ್ಲಿಕ್ ಶಾಲೆ, ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಸೆಂಟ್ ಜೋಸೆಫ್, ದೀಪಾಯನ, ಜಾಯ್ಕಾಸ್, ನ್ಯಾಶನಲ್, ನಿವೇದಿತಾ, ಎಲ್.ಎಫ್.ಎಸ್. ಪಬ್ಲಿಕ್ ಶಾಲೆ, ಕೋಲಾರದ ಗ್ರೀನ್ ವ್ಯಾಲಿ, ಆರ್.ವಿ, ವಿದ್ಯಾಜ್ಯೋತಿ, ಆರ್.ಎಲ್.ಜಾಲಪ್ಪ ಪಬ್ಲಿಕ್ ಶಾಲೆಗಳು ಹೆಚ್ಚುವರಿ ವಂತಿಗೆ ಪಡೆಯುತ್ತಿವೆ. ಜೊತೆಯಲ್ಲಿ 10*6 ಫ್ಲೆಕ್ಸ್, ಹಾಗೂ ನೋಟೀಸ್ ಬೋರ್ಡನಲ್ಲಿ ಯಾವುದೇ ಮಾಹಿತಿ ಹಾಕದೆ ವಂಚಿಸುತ್ತಿವೆ ಎಂದು ಎಸ್. ಎಫ್.ಐ. ನಿಯೋಗವು ತಿಳಿಸಿದೆ.

ಬಹುತೇಕ ಖಾಸಗಿ ಶಾಲೆಗಳು ಆರ್.ಟಿ.ಇ ನಲ್ಲಿ ಆಯ್ಕೆಯಾದ ಮಗುವಿಗೆ ವಾಹನ, ಬಟ್ಟೆ, ಷೂ, ಸಾಕ್ಸ್, ಪೆನ್ಸಿಲ್, ಶಾಲಾಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಹಣ ಕೇಳುತ್ತಿದ್ದು ಕೂಡಲೇ ಅದನ್ನು ನಿಲ್ಲಿಸಬೇಕು ಹಾಗೂ ಬೇಡಿಕೆ ಇಟ್ಟ ಶಾಲೆಗಳ ಮೇಲೆ ಕ್ರಮ ಜರುಗಿಸಲು ಮುಂದಾಗಬೇಕು ಎಂದು ಒತ್ತಾಯಿಸಲಾಯಿತು. ಕೆಲ ಖಾಸಗಿ ಶಾಲೆಗಳ ಅಗತ್ಯ ದಾಖಲೆಯನ್ನು ನೀಡಿರುತ್ತೇವೆ. ಕೂಡಲೆ ಕ್ರಮ ಜರುಗಿಸಬೇಕೆಂದು ಆಗ್ರಹಿಸಲಾಯಿತು.

ರಾಜ್ಯ ನಿಯೋಗದಲ್ಲಿ ಎಸ್.ಎಫ್.ಐ ರಾಜ್ಯಕಾರ್ಯದರ್ಶಿ ಗುರುರಾಜ್ ದೇಸಾಯಿ, ಹನಮಂತ್ ದುರ್ಗದ್, ಸಾಗರ್, ವೆಂಕಟೇಶ್, ಮೋನಿಷಾ ಪೋಷಕರಾದ ವೇಣು, ರುದ್ರಮೂರ್ತಿ, ರಾಮಣ್ಣ, ನರಸಿಂಹ ಮೂರ್ತಿ, ಸೇರಿದಂತೆ ಅನೇಕರಿದ್ದರು.

ಬಿಎಸ್ಪಿ ಬೆಂಬಲಿಗರೊಬ್ಬರು "ದಲಿತರು ಕಮ್ಯುನಿಷ್ಟರ ಹತ್ತಿರ ಹೋಗಬೇಡಿ ಎಂದು ಅಂಬೇಡ್ಕರ್ ಹೇಳಿದ್ದಾರೆ." ಎನ್ನುತ್ತಾರೆ.

"ಕಮ್ಯುನಿಷ್ಟರ ಹತ್ತಿರ ಹೋಗ್ಬೇಡಿ. ಬಿಎಸ್ಪಿ ಯವರು ಬರೋ ತನಕ ಕಾಯ್ತಾಯಿರಿ. ಅವರೂ ನಿಮ್ಮ ಸಹಾಯಕ್ಕೆ ಬರದೇ ಇದ್ರೆ ಹಾಗೇ ಅಸ್ಪೃಶ್ಯತೆಯ ನಡುವೆಯೇ ಬದುಕು ಸವೆಸಿರಿ" ಅಂತ ಏನಾದ್ರೂ ಅಂಬೇಡ್ಕರ್ ಹೇಳಿದ್ರಾ? ಈ ರೀತಿಯ ವಾದಗಳನ್ನು ಬಿಟ್ಟು ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯಿಂದ ದಲಿತರನ್ನು ಹೊರತರಲು ಹೋರಾಡಿ. ಸಣ್ಣ ಪಕ್ಷವಾಗಿರುವ ಕಮ್ಯುನಿಷ್ಟರ ಜೊತೆ ಸೇರಿ, ವೈಯಕ್ತಿಕ ಹಿತವನ್ನು ಬದಿಗೊತ್ತಿ ಸಮಾಜದಲ್ಲಿನ ಅಸಮಾನತೆಗಳ ವಿರುದ್ಧ ಹೊರಾಡಲು ಕೈಜೋಡಿಸಿರುವ ದಲಿತರಿಗೇಕೆ ಬಲೆ ಬೀಸುತ್ತಾ ಕುಳಿತಿದ್ದೀರಿ? ಕಮ್ಯುನಿಸಂ ಹೆಸರನ್ನೇ ಕೇಳದ ಕೋಟ್ಯಾಂತರ ದಲಿತರು ಈ ದೇಶದಲ್ಲಿ ಇದ್ದಾರೆ. ನೀವಾಗಲೀ ನಾವಾಗಲೀ ಸಂಘಟಿಸದ ಬಹುಸಂಖ್ಯೆಯ ದಲಿತರಿದ್ದಾರೆ. ಮೊದಲು ದಲಿತರನ್ನು ಸಂಘಟಿಸುವ ಪ್ರಯತ್ನ ಮಾಡಿ. ಅವರ ಹಸಿವು, ಬಡತನ, ಅನಕ್ಷರತೆ, ನಿರುದ್ಯೋಗ, ಅಸ್ಪೃಶ್ಯತೆ, ಮಹಿಳೆಯರ ಮೇಲಿನ ದೌರ್ಜನ್ಯ, ಕೂಲಿ ಕೊಡುವಲ್ಲಿ ವಂಚನೆ ಇವುಗಳ ವಿರುದ್ಧ ಹೋರಾಡಿ. ನೀವು ಪ್ರತಿಪಾದಿಸುವ ಸಿದ್ಧಾಂತ ಸರಿಯೆನಿಸಿದರೆ ದಲಿತರು ತಾವಾಗಿಯೇ ನಿಮ್ಮ ಬಿಎಸ್ಪಿ ಸೇರಿಕೊಳ್ಳುತ್ತಾರೆ. ಕಮ್ಯುನಿಷ್ಟರನ್ನು ಟೀಕಿಸಿದರಷ್ಟೇ ಬಿಎಸ್ಪಿ ಬೆಳೆಯುವುದಿಲ್ಲ. ತಮ್ಮ ಸಿದ್ಧಾಂತ ಅದಕ್ಕಿಂತಲೂ ಹೇಗೆ ಉತ್ತಮ ಎಂಬುದರ ಬಗ್ಗೆ ತಿಳಿಸಿ ಜನರ ಒಲವು ಗಳಿಸುವ ಯತ್ನ ಮಾಡಿ.

– ಸಿ. ಸಿದ್ದಯ್ಯ





ಜಗದ ಸುತ್ತ

ಶರತ್‌ಚಂದ್ರ

ಫ್ರಾನ್ಸ್ ಕಾರ್ಮಿಕರ ಯುವಕರ ದಂಗೆ

ಕಳೆದ ಕೆಲವು ವಾರಗಳಿಂದ ಪ್ಯಾರಿಸ್ ಮತ್ತು ಫ್ರಾನ್ಸಿನ ಹಲವು ನಗರಗಳು ರಣರಂಗವಾಗಿವೆ. ಕಳೆದ ನವೆಂಬರಿನ ಭಯೋತ್ಪಾದಕ ಕೃತ್ಯಗಳ ನಂತರ ಹಿಂದ–ಕ್ಕೆ ಸರಿದಿದ್ದ ಆರ್ಥಿಕ ಸಮಸ್ಯೆಗಳ ಬಗ್ಗೆ ಹೋರಾಟ ಪುನಃ ತೀವ್ರಗೊಂಡಿದೆ. ಕಾರ್ಮಿಕ ಕಾನೂನುಗಳನ್ನು ಕಾರ್ಮಿಕ–ವಿರೋಧಿ ದಿಕ್ಕಿನಲ್ಲಿ ಬದಲಾಯಿಸುವ ಅಧ್ಯಕ್ಷ ಹೊಲಾಂದ್ ಅವರ ಪ್ರಸ್ತಾವಗಳಿಗೆ ತೀವ್ರ ವಿರೋಧ ವ್ಯಕ್ತವಾಗಿದೆ. ಈ ಪ್ರಸ್ತಾವಗಳ ಪ್ರಕಾರ ಕಾರ್ಮಿಕರನ್ನು ಸುಲಭವಾಗಿ 'ಹೈರ್–ಫೈರ್' ಮಾಡುವ ಪದ್ಧತಿ ಜಾರಿಗೆ ಬರುತ್ತದೆ. ಕಾರ್ಮಿಕರಿಗೆ ಹಲವು ಸವಲತ್ತುಗಳನ್ನು ಕಡ್ಡಾಯವಾಗಿ ಕೊಡುವ ಕಾನೂನುಗಳನ್ನು ಸಡಿಲಿಸಿ 'ಹೂಡಿಕೆದಾರ–ಸ್ನೇಹಿ' ಪರಿಸರ ನಿರ್ಮಾಣ ಮಾಡಲಾಗುತ್ತದೆ. ಇದು ಯುರೋಪಿನಲ್ಲೇ ಅತ್ಯಂತ ಹೆಚ್ಚು ನಿರುದ್ಯೋಗ ಮಟ್ಟ ಇರುವ ದೇಶಗಳಲ್ಲಿ ಒಂದಾದ ಫ್ರಾನ್ಸಿನ ನಿರುದ್ಯೋಗ ಸಮಸ್ಯೆ ಪರಿಹರಿಸಲು ಸಹಾಯಕವಾಗುತ್ತದೆ ಎಂದು ಫ್ರೆಂಚ್ ಅಧ್ಯಕ್ಷರ ಮತ್ತು ಸರಕಾರದ ಅಂಬೋಣ. ಆದರೆ ಇದನ್ನು ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ನಿರುದ್ಯೋಗಿ ಯುವಕರು ನಂಬಿಲ್ಲ ಮತ್ತು ತೀವ್ರವಾಗಿ ವಿರೋದಿಸುತ್ತಿದ್ದಾರೆ.

ಕಳೆದ ಕೆಲವು ವಾರಗಳಿಂದ ಪ್ಯಾರಿಸ್ ಮತ್ತು ಫ್ರಾನ್ಸಿನ ಹಲವು ನಗರಗಳಲ್ಲಿ ವಿದ್ಯಾರ್ಥಿ–ಯುವಜನರ, ಕಾರ್ಮಿಕರು ಪ್ರತಿಭಟನೆಗಳು ನಡೆದವು. ಪೋಲಿಸ್ ಮತ್ತು ವಿದ್ಯಾರ್ಥಿ–ಯುವಜನರ–ಕಾರ್ಮಿಕರ ನಡುವೆ ಘರ್ಷಣೆಗಳು ನಡೆದಿವೆ. ಪೋಲಿಸರು ಅಶ್ರುವಾಯು, ಪಟಾಕಿಗಳು, ಗ್ರೇನೇಡುಗಳನ್ನು ಬಳಸಿ ಪ್ರತಿಭಟನಾಕಾರರನ್ನು ಚದುರಿಸಲು ಬಳಸಿದರು. ಇದರಿಂದ ಆಕ್ರೋಶಗೊಂಡ ವಿದ್ಯಾರ್ಥಿ–ಯುವಜನರು ಕಾರ್ಮಿಕರು ಸಿಕ್ಕ ಬಾಟಲಿ, ಕಲ್ಲುಗಳಿಂದ ಪೋಲಿಸರ ಮೇಲೆ ದಾಳಿ ನಡೆಸಿದ್ದಾರೆ. ಪೋಲಿಸರ ವಾಹನಗಳಿಗೆ ಬೆಂಕಿ ಹಾಕಿದ್ದಾರೆ. ಈ ಬಾರಿಯ ಮೇ ದಿನದಂದು ಕಾರ್ಮಿಕ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ವಿರೋಧಿಸಿ ಭಾರೀ ಪ್ರತಿಭಟನೆಗಳು ನಡೆದವು. ಈ ಘರ್ಷಣೆಗಳು 1968ರ ಕೆಂಪು ಮೇ ಎಂದು ಹೆಸರಾದ ಕಾರ್ಮಿಕ–ರೈತ ದಂಗೆಗಳನ್ನು ನೆನಪಿಸುವಂತಿತ್ತು ಎಂದು ಹೇಳಲಾಗಿದೆ.

ಮೇ 18ರಿಂದ ಫ್ರಾನ್ಸಿನಾದ್ಯಂತ ಸಾರಿಗೆ ನೌಕರರು ಕಾರ್ಮಿಕ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ವಿರೋಧಿಸಿ 3–ದಿನಗಳ ಮುಷ್ಕರ ಹೂಡಿದರು. ರೈಲ್ವೇ, ನೌಕಾ ಸಾರಿಗೆ, ಟ್ರಕ್ಕುಗಳು, ಬಂದರುಗಳ ಕಾರ್ಮಿಕರ ಮುಷ್ಕರದಿಂದ ಇಡೀ ಫ್ರಾನ್ಸೇ ಸ್ತಬ್ಧವಾಗಿದೆ. ಈ ಮುಷ್ಕರಗಳು, ದಂಗೆಗಳು ಜನಜೀವನ ಅಸ್ತವ್ಯಸ್ತಗೊಳಿಸಿದ್ದರೂ, ಸಮೀಕ್ಷೆಯೊಂದರಲ್ಲಿ ಭಾಗವಹಿಸಿದ ನಾಲ್ವರಲ್ಲಿ ಮೂವರು ಕಾರ್ಮಿಕ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ವಿರೋಧಿಸಿದ್ದಾರೆ.

ಬ್ರೆಜಿಲಿನ ಕ್ಷಿಪ್ರಕ್ರಾಂತಿ : 'ಮೇಡ್ ಇನ್ ಯು.ಎಸ್.ಎ.'



ಬ್ರೆಜಿಲಿನಲ್ಲಿ ಅಧ್ಯಕ್ಷೆ ದಿಲ್ಮಾ ರೂಸೆಫ್ ಅವರ ಮೇಲೆ ದೋಷಾರೋಪಣೆಯನ್ನು ಪಾರ್ಲಿಮೆಂಟಿನ ಕೆಳಸದನ (ಪ್ರತಿನಿಧಿ ಸಭೆ) ಮಂಜೂರು ಮಾಡಿದ್ದು, ಅಮೆರಿಕನ್ ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ ಆಳುವ ವರ್ಗಗಳು ಮತ್ತು ವಿರೋಧ ಪಕ್ಷಗಳು ಯೋಜಿಸಿದ ಪ್ರಜಾಪ್ರಭುತ್ವ–ವಿರೋಧಿ 'ಕ್ಷಿಪ್ರ ಕ್ರಾಂತಿ' ಆರಂಭವಾಗಿದೆ. ದೋಷಾರೋಪಣೆಯ ಬಗ್ಗೆ ಪೂರ್ಣ ತನಿಖೆ ಆಗುವವರೆಗೆ ದಿಲ್ಮಾ ರೂಸೆಫ್ ಅಮಾನತಿನಲ್ಲಿರುತ್ತಾರೆ. ತನಿಖೆ 6 ತಿಂಗಳೊಳಗೆ ಮುಗಿಯಬೇಕು. ಆ ವರೆಗೆ ಉಪಾಧ್ಯಕ್ಷ ಮೈಕೆಲ್ ಟೆಮೆರ್ ಅಧ್ಯಕ್ಷರ ಜವಾಬ್ದಾರಿ ನಿರ್ವಹಿಸುತ್ತಾರೆ. ತನಿಖಾ ವರದಿಯನ್ನು ಸೆನೆಟಿನಲ್ಲಿ ಮಂಡಿಸಿ ಅದರಲ್ಲಿ ಮೂರನೇ ಎರಡು ಬಹುಮತದಿಂದ ಪಾಸಾದರೆ ದಿಲ್ಮಾ ಶಾಶ್ವತವಾಗಿ ಅಧಿಕಾರ ಕಳೆದುಕೊಳ್ಳುತ್ತಾರೆ.

ದಿಲ್ಮಾ ರೂಸೆಫ್ ಅವರ ಮೇಲೆ ಯಾವುದೇ ಭ್ರಷ್ಟಾಚಾರದ ಆಪಾದನೆ ಇಲ್ಲ. ಅವರ ಮೇಲೆ ಆಪಾದನೆ ಇರುವುದು ಬಜೆಟ್ ತಯಾರಿ ಮತ್ತು ಮಂಡನೆಯಲ್ಲಿ ಕೆಲವು ತಪ್ಪು ಅಂಕೆಸಂಖ್ಯೆಗಳನ್ನು ಬಳಸಿದ್ದಾರೆ ಅಂತ! ಬೂರ್ಜ್ವಾ ದೇಶಗಳಲ್ಲಿ ಬಜೆಟ್ ಇರುವುದೇ ಯಾವುದೇ ಆಧಾರವಿಲ್ಲದ ಅರ್ಥವಿಲ್ಲದ ಅಂಕೆಸಂಖ್ಯೆಗಳನ್ನು ಬಳಸಿ ಜನರಿಗೆ ಮೋಸ ಮಾಡಲು. ಅದರಲ್ಲಿ ಅಪರಾಧವೆಲ್ಲಿ ಬಂತು? ಅಂತ ಕೆಲವರು ಜೋಕ್ ಮಾಡಿದ್ದಾರಂತೆ. ಆದರೆ ಪ್ರತಿನಿಧಿ ಸಭೆಯಲ್ಲಿ ದೋಷಾರೋಪಣೆ ಪ್ರಸ್ತಾವ ಪಾಸಾಗಿದೆ. ಆದ್ದರಿಂದಲೇ ಇದಕ್ಕೆ 'ಸಂವೈಧಾನಿಕ ಕ್ಷಿಪ್ರ ಕ್ರಾಂತಿ' ಎಂದು ಕರೆಯಲಾಗಿದೆ. ತಮಾಷೆಯ ಸಂಗತಿಯೆಂದರೆ ಬ್ರೆಜಿಲಿನ ಶೇ. 60 ಪಾರ್ಲಿಮೆಂಟ್ ಸದಸ್ಯರ ಮೇಲೆ ಭ್ರಷ್ಟಾಚಾರದ ಆಪಾದನೆ ಇದೆ. ಅಲ್ಲದೆ ಕೆಳಸದಸನದಲ್ಲಿ ದಿಲ್ಮಾ ವಿರುದ್ಧ ದೋಷಾರೋಪಣೆ ಪ್ರಸ್ತಾವ ಮಂಡಿಸಿದ ಸದನದ ಅಧ್ಯಕ್ಷ ಎಡುವರ್ಡೊ ಕುನ್ಹಾ ವಿರುದ್ಧ ಸ್ವಿಸ್ ಬ್ಯಾಂಕಿನ ಗುಪ್ತ ಖಾತೆಗಳಲ್ಲಿ ಕಪ್ಪು ಹಣ ಇಟ್ಟಿರುವ, ಅದರ ಬಗ್ಗೆ ಸುಳ್ಳು ಹೇಳಿರುವ ಆಪಾದನೆಗಳಿವೆ. ಇಂತಹ ಒಂದು ಭ್ರಷ್ಟಾಚಾರ ಪ್ರಕರಣದಲ್ಲಿ ಕೋರ್ಟು ತೀರ್ಪು ಬಂದಿದ್ದು ಅವರ ಸದನದ ಸದಸ್ಯತ್ವವೇ ರದ್ದಾಗಿದೆ! ಅದರೆ ಕೆಳಸದನದ ದೋಷಾರೋಪಣೆ ಪಾಸಾದ ನಂತರ ಈ ತೀರ್ಪು ಬಂದಿದೆ. ಬಾಲಿವುಡ್ ಸಿನಿಮಾದಲ್ಲಿ ಎಲ್ಲಾ ಮುಗಿದ ನಂತರ ಪೋಲೀಸರು ಬರುವ ಹಾಗೆ!

ಬ್ರೆಜಿಲಿನಲ್ಲಿ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಸತತವಾಗಿ ನಾಲ್ಕು ಬಾರಿ ಅಧ್ಯಕ್ಷೀಯ ಚುನಾವಣೆಗಳನ್ನು ಗೆದ್ದಿದ್ದು ನವ–ಉದಾರವಾದಿ ಅಲ್ಲದ ಜನಪರ ಆರ್ಥಿಕ ನೀತಿಗಳನ್ನು ಪಾಲಿಸುತ್ತಾ ಬಂದಿವೆ. ಇದು ಬ್ರೆಜಿಲಿನ ಕೆಲವು ನಡು–ಬಲ ಮತ್ತು ಬಲಪಂಥಿಯ ಶಕ್ತಿಗಳಿಗೆ ನುಂಗಲಾರದ ತುತ್ತಾಗಿದೆ. ಮಾಧ್ಯಮ ಮತ್ತಿತರ ಕಾರ್ಪೊರೆಟ್ ವಲಯಗಳು, ಮಧ್ಯಮ ವರ್ಗದ ಕೆಲವು ವಿಭಾಗಗಳು, ಮಾಧ್ಯಮ ಕಂಪನಿಗಳು, ನ್ಯಾಯಾಂಗದ ಒಂದು ವಿಭಾಗ – ಇವುಗಳು 2016ರ ಚುನಾವಣಾ ಸೋಲಿನ ನಂತರ ಹತಾಶವಾಗಿವೆ. ಹೇಗಾದರೂ ಮಾಡಿ ದಿಲ್ಮಾ ರೂಸೆಫ್ ಸರಕಾರವನ್ನು ಉರುಳಿಸಲೇ ಬೇಕೆಂದು ಪಣ ತೊಟ್ಟಿವೆ. ದಿಲ್ಮಾ ತಮ್ಮ ಎರಡನೇ ಅವಧಿಯಲ್ಲಿ ದುಡಿಯುವ ಜನತೆಯ ಆಕ್ರೋಶಕ್ಕೆ ಕಾರಣವಾದ ಕೆಲವು ನವ–ಉದಾರವಾದಿ ನೀತಿಯನ್ನು ಅನುಸರಿಸಲು ಆರಂಭಿಸಿದ್ದು, ರಾಜಕೀಯವಾಗಿ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರನ್ನು ಅಣಿನೆರೆಸದೆ ಹೋದದ್ದು ಅವರಿಗೆ ಅನುಕೂಲಕರವಾಗಿದೆ. ಇದೇ ಅವಧಿಯಲ್ಲಿ ಬ್ರೆಜಿಲಿನ ಪ್ರಮುಖ ಆರ್ಥಿಕ ಶಕ್ತಿಯಾದ ತೈಲ ಮತ್ತು ಇತರ ಪ್ರಾಥಮಿಕ ಸರಕುಗಳ ಬೆಲೆ ಕುಸಿದಿದ್ದು ತೀವ್ರ ಆರ್ಥಿಕ ಬಿಕ್ಕಟ್ಟು ಉಂಟಾಗಿದೆ. ಭ್ರಷ್ಟಾಚಾರದ ಆಪಾದನೆಯಿಂದ ಆರಂಭವಾದ ಈ ಪ್ರಯತ್ನ ಈಗ 'ಸಂವೈಧಾನಿಕ ಕ್ಷಿಪ್ರ ಕ್ರಾಂತಿ'ಯಾಗಿ ಹೊಮ್ಮಿದೆ.

ಬ್ರೆಜಿಲಿನ ಅಧ್ಯಕ್ಷೆ ದಿಲ್ಮಾ ವಿರುದ್ಧದ ಈ 'ಸಂವೈಧಾನಿಕ ಕ್ಷಿಪ್ರ ಕ್ರಾಂತಿ'ಯ ಹಿಂದೆ ಅಮೆರಿಕನ್ ಸರಕಾರದ ಕೈವಾಡ ಇದೆ ಎಂದು ವಿಕಿಲೀಕ್ಸ್ ಪುರಾವೆ ಸಮೇತ ಬಹಿರಂಗ ಪಡಿಸಿದೆ. ಪಾರ್ಲಿಮೆಂಟಿನ ಪ್ರತಿನಿಧಿ ಸಭೆ ಮತ್ತು ಸೆನೆಟ್ ಎರಡರಲ್ಲೂ ದೋಷಾರೋಪಣೆ ಪ್ರಸ್ತಾವ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ ಇಬ್ಬರೂ ಅಮೆರಿಕನ್ ಸರಕಾರದ ಜತೆ ಸತತ ಸಂಪರ್ಕದಲ್ಲಿದ್ದರು ಮತ್ತು ಅವರಲ್ಲಿ ಒಬ್ಬರು ಈ 'ಕ್ಷಿಪ್ರ ಕ್ರಾಂತಿ' ಆದ ಕೂಡಲೇ ಅಮೆರಿಕಕ್ಕೆ ತೆರಳಿ ಅಲ್ಲಿ ಸರಕಾರದ ಪ್ರತಿನಿಧಿಗಳನ್ನು ಭೇಟಿಯಾದರು. ಈಗ ಹಂಗಾಮಿ ಅಧ್ಯಕ್ಷತೆ ವಹಿಸಿಕೊಂಡಿರುವ ಉಪಾಧ್ಯಕ್ಷ ಸಹ ಅಮೆರಿಕನ್ ಸರಕಾರದ ಜತೆ ಸತತ ಸಂಪರ್ಕದಲ್ಲಿದ್ದರು. ಇಂತಹ 'ಸಂವೈಧಾನಿಕ ಕ್ಷಿಪ್ರ ಕ್ರಾಂತಿ'ಗಳನ್ನು (2009ರಲ್ಲಿ ಹೊಂಡುರಸ್ ಮಮತ್ತು 2012ರಲ್ಲಿ ಪರಾಗುವೇಯಲ್ಲಿ) ಸಫಲವಾಗಿ ನಿರ್ವಹಿಸಿದ ಅನುಭವ ಇರುವ ವ್ಯಕ್ತಿಯನ್ನು ಈಗ ಬ್ರೆಜಿಲಿನಲ್ಲಿ ಅಮೆರಿಕದ ರಾಯಭಾರಿಯಾಗಿ ನೇಮಿಸಲಾಗಿದೆ. ಹೀಗೆ ಬ್ರೆಜಿಲಿನ 'ಸಂವೈಧಾನಿಕ ಕ್ಷಿಪ್ರ ಕ್ರಾಂತಿ' ಪೂರ್ಣವಾಗಿ 'ಮೇಡ್ ಇನ್ ಯು.ಎಸ್.ಎ.'.

ಮಿಲಿಟರಿ ಕ್ಷಿಪ್ರಕ್ರಾಂತಿ ಮತ್ತು ಚುನಾವಣೆಯ ಮೂಲಕ ನವ–ಉದಾರವಾದಿ–ವಿರೋಧಿ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಮಟ್ಟ ಹಾಕುವುದು ಕಷ್ಟ ಸಾಧ್ಯ ಎಂದು ಅರಿತ ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ತಂತ್ರಗಳನ್ನು ಬದಲಾಯಿಸಿ ಈ 'ಸಂವೈಧಾನಿಕ ಕ್ಷಿಪ್ರ ಕ್ರಾಂತಿ'ಯ ಹೊಸ ಹಾದಿ ಹುಡುಕಿದೆ. ಈಗಾಗಲೇ 2009ರಲ್ಲಿ ಹೊಂಡುರಸ್ ಮಮತ್ತು 2012ರಲ್ಲಿ ಪರಾಗುವೇಯಲ್ಲಿ ಈ ತಂತ್ರ ಪ್ರಯೋಗಿಸಿದ್ದು ಬ್ರೆಜಿಲಿನಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಯೋಗಿಸಲು ಹೊರಟಿದೆ. ವೆನೆಜುವೇಲಾದಲ್ಲೂ ಸಂವಿದಾನದಲ್ಲಿ ಅಧ್ಯಕ್ಷರನ್ನು 'ಹಿಂದಕ್ಕೆ ಕರೆಯುವ' ಜನಮತ ಸಂಗ್ರಹದ ಸಂವೈಧಾನಿಕ ಕಲಮನ್ನು ಅಧ್ಯಕ್ಷ ಮದುರೊ ಅವರ ಮೇಲೆ ಪ್ರಯೋಗಿಸಲು ಭರದಿಂದ ಸಿದ್ಧತೆ ನಡೆಸಿದೆ. ಆದ್ದರಿಂದ ಲ್ಯಾಟಿನ್ ಅಮೆರಿಕದ ನವ–ಉದಾರವಾದಿ–ವಿರೋಧಿ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಈ ತಂತ್ರದ ವಿರುದ್ಧ ಹೋರಾಡುವ ಪ್ರತಿತಂತ್ರ ಹೂಡಲು ಸಜ್ಜಾಗಬೇಕಾಗಿದೆ. ಬ್ರೆಜಿಲಿನಲ್ಲಿ ಈ ಪ್ರತಿತಂತ್ರವನ್ನು ರೂಪಿಸಬೇಕಾಗಿದೆ. ಹಂಗಾಮಿ ಅಧ್ಯಕ್ಷರ ಆಡಳಿತದಲ್ಲಿ, ಪಾರ್ಲಿಮೆಂಟಿನಲ್ಲಿ, ಕೋರ್ಟುಗಳಲ್ಲಿ ಮತ್ತು ಕೊನೆಯದಾಗಿ ದುಡಿಯುವ ಜನತೆಯನ್ನು ಅಣಿ ನೆರೆಸಿ ಬೀದಿಯಲ್ಲಿ ರಾಜಕೀಯವಾಗಿ – ಹೀಗೆ ನಾಲ್ಕು ರಂಗಗಳಲ್ಲಿ ಹೋರಾಟ ನಡೆಸಬೇಕಾಗಿದೆ. ಬ್ರೆಜಿಲಿನ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಇದ–ಕ್ಕೆ ಮಾದರಿಯಾಗಬೇಕಾಗಿದೆ. ಇದರ ಸಫಲತೆ–ವೈಫಲ್ಯ ಇಡೀ ಲ್ಯಾಟಿನ್ ಅಮೆರಿಕದ ಪ್ರಗತಿಪರ ನವ–ಉದಾರವಾದಿ–ವಿರೋದಿ ಚಳುವಳಿಯ ಈ ವರೆಗಿನ ಸಾಧನೆಗಳನ್ನು ಎಷ್ಟರ ಮಟ್ಟಿಗೆ ಉಳಿಸಿ ಬೆಳೆಸಬಹುದು ಎಂಬುದನ್ನು ನಿರ್ಧರಿಸುತ್ತದೆ. ●

ನಮ್ಮ ಚುರು-ಟ್ವೀಟ್

@AashishKhetan

ಮೋದಿಜಿ ಸುಬ್ರಮಣ್ಯಸ್ವಾಮಿಯನ್ನು ಆರ.ಬಿ.ಐ. ಗವರ್ನರ್ ರಾಜನ್ ಮೇಲೆ ದಾಳಿ ಮಾಡಲು ಬಳಸಿಕೊಳ್ಳುತ್ತಿದ್ದಾರೆ. ಯಾಕೆ–ಂದರೆ ಅವರು ಅಂಬಾನಿ ಎಸ್ಸಾರ್ ಜಯಪೀ ಮತ್ತು ಅದಾನಿಯಂತಹ ಬ್ಯಾಂಕ್ ಸಾಲ ಮರುಪಾವತಿ ದೊಡ್ಡ ಸಾಲಗಾರರ ವಿರುದ್ಧ ಮಾತನಾಡುತ್ತಾರೆ

–ಆಶೀಶ್ ಖೈತಾನ್

JANASHAKTHI KANNADA VARA PATRIKE MAY 29, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಸಿ.ಐ.ಟಿ.ಯು ಉಡುಪಿ ಜಿಲ್ಲಾ 5ನೇ ಸಮ್ಮೇಳನ

ಬಂಡವಾಳಶಾಹಿ ವ್ಯವಸ್ಥೆ ಎಲ್ಲಿ ಗಟ್ಟಿಯಾಗಿದೆಯೋ, ಅಲ್ಲೆಲ್ಲಾ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ : ಮೀನಾಕ್ಷಿಸುಂದರಂ

ವರದಿ: ವೆಂಕಟೇಶ ಕೋಣಿ

ಹಲವು ಆಶ್ವಾಸನೆಗಳನ್ನು ನೀಡಿ ಅಧಿಕಾರಕ್ಕೆ ಬಂದ ಮೋದಿ ಸರಕಾರ ಕಾರ್ಮಿಕರನ್ನು ಕಡೆಗಣಿಸಿದೆ. ಕೇಂದ್ರ ಸರಕಾರದ ಕಾರ್ಮಿಕ ಇಲಾಖೆ ಒಂದು ಸಮೀಕ್ಷೆ ನಡೆಸಿದ ಪ್ರಕಾರ ಕಳೆದ 2 ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಉದ್ಯೋಗಗಳೆ ಸೃಷ್ಟಿಯಾಗಿಲ್ಲ, ಬದಲಾಗಿ ಕೈಗಾರಿಕೆಗಳಲ್ಲಿ ಉದ್ಯೋಗದ ಕುಸಿತವಾಗಿದೆ. ದೇಶದ ಶೇಕಡಾ 50ರಷ್ಟು ಆಸ್ತಿ ಕೇವಲ ಶೇಕಡಾ 1ರಷ್ಟು ಜನರ ಕೈಯಲ್ಲಿದೆ. ಎಂದು ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿಸುಂದರಂ ಹೇಳಿದರು.

ಉಡುಪಿಯಲ್ಲಿ ಕಾಂ॥ ಅಬ್ರಾಹಂ ಕರ್ಕಡ ನಗರದ ಕಾ॥ ಸಿ.ನಾರಾಯಣ ವೇದಿಕೆಯ ಸಭಾಂಗಣದಲ್ಲಿ ಸಿ.ಐ.ಟಿ.ಯು 5ನೇ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳ ಹೊರತಾಗಿ ನಮ್ಮ ದೇಶವಿಲ್ಲ. ಇನ್ನೊಂದು ಸಮಾಜ ಜಗತ್ತಿನಲ್ಲಿ ಹುಟ್ಟಲು ಸಾಧ್ಯವಿಲ್ಲ ಎಂಬುದನ್ನು ಸಾಧಿಸಲೇ ದೇಶದಲ್ಲಿ ಕೆಲವರು ಹುಟ್ಟಿದ್ದಾರೆ. ಬಂಡವಾಳ ಶಾಹಿ ವ್ಯವಸ್ಥೆ ಎಲ್ಲಿ ಗಟ್ಟಿಯಾಗಿದೆಯೋ ಅಲ್ಲೆಲ್ಲಾ ಭ್ರಷ್ಟಚಾರ ತುಂಬಿತುಳುಕುತ್ತಿದೆ. ಕರಾವಳಿ ಜಿಲ್ಲೆಗಳಲ್ಲಿ ಬೀಡಿ ಉದ್ಯಮವನ್ನೇ ನಂಬಿಕೊಂಡು ಬದುಕುತ್ತಿರುವ ಅನೇಕ ಕಾರ್ಮಿಕ ಕುಟುಂಬಗಳಿವೆ. ಒಂದು ವೇಳೆ ತಂಬಾಕು ನಿಷೇದಿಸಿದ್ದೇ ಆದಲ್ಲಿ ಈ ಉದ್ಯಮವನ್ನೇ ನಂಬಿ ಬದುಕುತ್ತಿರುವ ಸಾವಿರಾರು ಕುಟುಂಬಗಳು ಬೀದಿಗೆ ಬರುತ್ತವೆ.

ಕಾರ್ಮಿಕರಿಗೆ ತುಟ್ಟಿ ಭತ್ತೆಯನ್ನು ನೀಡಲಾಗಿಲ್ಲ ಇತ್ತೀಚಿಗೆ ರಾಜ್ಯ ಕಾರ್ಮಿಕ ಸಚಿವರೊಂದಿಗೆ ;ನಡೆದ ಸಭೆಯಲ್ಲಿ ಇದನ್ನು ಸೃಷ್ಟಿಸಲಾಗಿದೆ. ಕಂಪನಿ, ಕಾರ್ಖಾನೆ ಮಾಲಿಕರು ರಾಜಕೀಯ ಸಂಘ ಸಂಸ್ಥೆಗಳಿಗೆ ಕೈ ತುಂಬ ದೇಣಿಗೆ ನೀಡುತ್ತಿವೆ. ಆದರೆ ಭತ್ಯೆ ಸೌಲಭ್ಯಗಳ ವಿಚಾರದಲ್ಲಿ ಕಾರ್ಮಿಕರನ್ನು ಕಡೆಗಣಿಸುತ್ತಿದ್ದಾರೆ ಎಂದು ಮೀನಾಕ್ಷಿಸುಂದರಂ ಆರೋಪಿಸಿದರು.

ಸಮ್ಮೇಳನದ ಉದ್ಘಾಟನಾ ಅಮಾರಂಭದ ಅಧ್ಯ ಕ್ಷತೆ ವಹಿಸಿದ್ದ ಸಿ.ಐ.ಟಿ.ಯು ಉಡುಪಿ ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಶಂಕರ ಧ್ವಜಾರೋಹಣ ನೆರವೇರಿಸಿದರು. ವೇದಿಕೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಪಿ. ವಿಶ್ವಾನಾಥ ರೈ, ಸಿ.ಐ.ಟಿ.ಯು ಮುಖಂಡರಾದ ಎಚ್.ನರಸಿಂಹ, ಶಶಿದರ ಗೊಲ್ಲ, ಕೆ.ಲಕ್ಷ್ಮಣ, ಮಹಾಬಲ ವಡೇರ್ ಹೊಬಳಿ, ಜೀವ ವಿಮ ನೌಕರರ ಸಂಘದ ಕಾರ್ಯದರ್ಶಿ ಗುರುದತ್, ಎ,ಐ.ಟಿ.ಯು.ಸಿನ ಕೆ.ವಿ ಭಟ್ ಉಪಸ್ಥಿತರಿದ್ದರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುರೇಶ ಕಲ್ಲಾಗರ ಕಾರ್ಯಕ್ರಮ ನಿರುಪಿಸಿದರು.

ಕಾರ್ಮಿಕರ ವರ್ಣರಂಜಿತ ಬೃಹತ್ ಮೆರವಣಿಗೆ– ಕೆಂಪಾಗಿ ರಂಗೇರಿದ ಉಡುಪಿ ನಗರ

ಸಮ್ಮೇಳನದ 2ನೇ ದಿನದಂದು ಜಿಲ್ಲೆಯಾದ್ಯಂತ ಸಿ.ಐ.ಟಿ.ಯುಗೆ ಸಂಯೋಜಿಸಲ್ಪಟ್ಟ ವಿವಿಧ ಕಾರ್ಮಿಕ ಸಂಘಗಳ ಸದಸ್ಯ ಕಾರ್ಮಿಕರ ವರ್ಣರಂಜಿತ ತಾಳ ;ಮೇಳ ಬ್ಯಾಂಡ್‌ಗಳನ್ನೊಳಗೊಂಡ ಆಕರ್ಷಕ ಬೃಹತ್ ಮೆರವಣಿಗೆಯು ಉಡುಪಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಬಳಿಕ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಉಡುಪಿ ನಗರವನ್ನು ಅಲಂಕರಿಸಲಾಗಿದ್ದು ಕೆಂಪು ಸಮವಸ್ತ್ರದಾರಿ ಸ್ವಯಂ ಸೇವಕರ ಪಥ ಸಂಚಲದಿಂದ ಉಡುಪಿ ನಗರವೇ ಕೆಂಪಾಗಿ ರಂಗೇರಿತ್ತು. ಉಡುಪಿ ಚಿತ್ತರಂಜನ್ ಸರ್ಕಲ್ ಬಳಿ







ಕಾಂ॥ ದೋಗು ಸುವರ್ಣ ವೇದಿಕೆಯಲ್ಲಿ ಬೃಹತ್ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿಸುಂದರಂ ಮತ್ತು ದ.ಕ ಜಿಲ್ಲಾ ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಭಾಷಣ ಮಾಡಿದರು.

ವೇತನ ಆಯೋಗದ ಶಿಫಾರಸ್ಸಿನ ಪ್ರಕಾರ ಭಾರತದಲ್ಲಿ ಒಬ್ಬ ಯೋಗ್ಯ ಜೀವನ ನೆಡೆಸಲು ಆತನಿಗೆ ಮಾಸಿಕ 18 ಸಾವಿರ ರೂ ಸಂಬಳವಿರಬೇಕು. ಬಡವರು ಕೂಡ ಇಂದು ನೀರಿಗೆ ಹಣ ಕೊಟ್ಟು ಕುಡಿಯುವ ಪರಿಸ್ಥಿತಿ ಇದೆ. ಇದೇ ರೀತಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಆದರೆ ಈ ಶಿಫಾರಸ್ಸು ಜ್ಯಾರಿಗೊಳಿಸಲು ಕೇಂದ್ರ ಸರಕಾರ ಹಿಂದೇಟು ಹಾಕುತ್ತಿದೆ. ಉತ್ತರಖಾಂಡದಲ್ಲಿಂದ ಪ್ರಜಾಪ್ರಭುತ್ವ ಸರಕಾರವನ್ನು ಉರುಳಿಸುದ್ದಾಕ್ಕಾಗಿ ಕೇಂದ್ರದ ಮೋದಿ ಸರಕಾರವು ರಾಷ್ಟ್ರಪತಿ ಆಡಳಿತ ಕುರಿತ ಹೈಕೋರ್ಟ ತಡೆಯಾಜ್ಞೆ ವಿರುದ್ಧ ಕೇವಲ 18 ಗಂಟೆಯೊಳಗೆ ಸುಪ್ರೀಮ್ ಕೋರ್ಟಗೆ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ತಂದಿದೆ. ಆದರೆ ಕೇಂದ್ರ ಸರಕಾರ ಬೋನಸ್ ಜಾಸ್ತಿ ಮಾಡಿರುವುದಕ್ಕಾಗಿ ಕೇರಳ, ;ತಮಿಳುನಾಡು, ಕರ್ನಾಟಕ ಸರಕಾರ ತಡೆಯಾಜ್ಞೆ ನೀಡಿ ಹಲವು ಸಮಯ ಕಳೆದರೂ ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಕೇಂದ್ರ ಸರಕಾರಕ್ಕೆ ಪುರುಸೊತ್ತೇ ಇಲ್ಲಾ. ಕೇಂದ್ರ ಸರಕಾರ ಇಡೀ ದೇಶವನ್ನು ಸೋಮಾಲಿಯ ಮಾಡಲು ಹೊರಟಿದೆ. ಕಾರ್ಮಿಕರು ದುಡಿದು ಕಟ್ಟಿದ ಭವಿಷ್ಯ ನಿಧಿ ಹಣ ತೆಗೆಯುವುದಾದರೆ ತೆರಿಗೆ ಕಟ್ಟಬೇಕು ಎಂದು ಬಜೆಟ್‌ನಲ್ಲಿ ಪ್ರಸ್ತಾಪ ಇಡಲಾಯಿತು. ಇದಕ್ಕೆ ವಿರೋಧ ಬಂದ ಬಳಿಕ ಈ ಪ್ರಸ್ತಾಪ ಹಿಂತೆಗೆದುಕೊಂಡರು. ಜೊತೆ–ಗೆ ನಿವೃತ್ತರಾಗದೆ ಶೇಕಡಾ 50ರಷ್ಟು ಹಿಂದಕ್ಕೆ ತೆಗೆದುಕೊಳ್ಳುವಂತಿಲ್ಲ ಎಂದು ಮಾಡಿದರು. ಇ.ಎಸ್.ಐ ಸೌಲಭ್ಯದಿಂದ ಕಾರ್ಮಿಕರ ಕುಟುಂಬಕ್ಕೆ ಆರೋಗ್ಯದ ಭದ್ರತೆ ಇತ್ತು. ಅದನ್ನು ಬದಲಾಯಿಸಿ ಕೆಲಸಕ್ಕೆ ಸೇರಿದ ಬಳಿಕ ಬಂದ ರೋಗಗಳಿಗಷ್ಟೇ ಇ.ಎಸ್.ಐ ಸೌಲಭ್ಯ ಎಂದು ಮಾಡಿದ್ದಾರೆ. ಅಂದರೆ ಕೆಲಸಕ್ಕೆ ಸೇರುವ ಮೊದಲೇ ಮದುವೆಯಾಗಿ ಮಗುವಾಗಿದ್ದರೆ ಅದ–ಕ್ಕೆ ಅನಾರೋಗ್ಯ ಇದ್ದರೆ ಇ.ಎಸ್.ಐ ಸೌಲಭ್ಯ ದೊರೆಯುವುದಿಲ್ಲ. ವಿ.ಆರ್.ಎಸ್ ಎಂದರೆ ಸ್ವಯಂ ನಿವೃತ್ತಿ ಯೋಜನೆ ಎಂಬುದೊಂದಿತ್ತು. ಅದನ್ನು ಪಿ.ಆರ್.ಎಸ್ ಎಂದು ಮಾಡಿದ್ದಾರೆ. ಅಂದರೆ ಕಾರ್ಮಿಕನಿಗೆ 45 ವರ್ಷ ದಾಟಿದರೆ ಮಾಲಕರೆ ಬಲವಂತವಾಗಿ ನಿವೃತ್ತಿ ನೀಡಿ ಕಳುಹಿಸುವುದು. ಮಾಲೀಕರಿಗೆ ಮಾತ್ರ ಬಜೆಟ್‌ನ ಮೊತ್ತಕ್ಕಿಂತ ಜಾಸ್ತಿ ತೆರಿಗೆ ರಿಯಾಯ್ತಿ ನೀಡಲಾಗುತ್ತಿದೆ. ದೇಶ ಆರ್ಥಿಕ ಅಭಿವೃದ್ಧಿ ಹೊಂದಲು ಪೂರಕವಾದ ಆರ್ಥಿಕ ಕೈಗಾರಿಕೆ ನೀತಿಗಳನ್ನು ಅನುಸರಿಸಬೇಕಿದ್ದು ಇದರಿಂದ ಉದ್ಯೋಗ ಸೃಷ್ಟಿಯೂ ಆಗುತ್ತದೆ. ಕಾರ್ಮಿಕರ ಒಗ್ಗೂಡಿಸುವಿಕೆ ಕಾರ್ಯ ನಿರಂತರವಾಗಿ ನಡೆಯಬೇಕು. ಈ ಹಿನ್ನೆಲೆಯಲ್ಲಿ 2ಸಪ್ಟೆಂಬರ್ 2016 ರಂದು ಜರಗುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸುವುದಕ್ಕೆ ಮೀನಾಕ್ಷಿಸುಂದರಂ ಕರೆ ನೀಡಿದರು.

ಸಿ.ಐ.ಟಿ.ಯು ಉಡುಪಿ ಜಿಲ್ಲಾ ಸಮಿತಿಗೆ ಆಯ್ಕೆ:

ಪಿ.ವಿಶ್ವನಾಥ ರೈ (ಅಧ್ಯಕ್ಷ) ಕೆ.ಶಂಕರ (ಪ್ರಧಾನ ಕಾರ್ಯದರ್ಶಿ) ಮಹಾಬಲ ವಡೇರ್ ಹೋಬಳಿ, ಬಾಲಕೃಷ್ಣ ಶೆಟ್ಟಿ, ಉಮೇಶ್ ಕುಂದರ್, ಬಲ್ಕೀಸ್, ಕೆ.ಲಕ್ಷ್ಮಣ (ಉಪಾಧ್ಯಕ್ಷರು), ಹೆಚ್ ನರಸಿಂಹ, ಸುರೇಶ ಕಲ್ಲಾಗರ, ಸುಜಾತ ಶೆಟ್ಟಿ, ಶೇಖರ ಬಂಗೇರ (ಕಾರ್ಯದರ್ಶಿಗಳು), ಶಶಿಧರ ಗೊಲ್ಲ (ಕೋಶಾಧಿಕಾರಿ), ಇವರನ್ನೊಳಗೊಂಡ 40 ಮಂದಿ ಕಾರ್ಯಾಕಾರಿ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಾರ್ವಜನಿಕ ಸಭೆಯ ಸಂದರ್ಭದಲ್ಲಿ ಗಣೇಶ ಗಂಗೊಳ್ಳಿ ತಂಡದಿಂದ ಕ್ರಾಂತಿಗೀತೆ ಹಾಗೂ ಜನಪದ ಹಾಡು ರಂಗಗೀತೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.



ಪಿ.ವಿಶ್ವನಾಥ ರೈ (ಅಧ್ಯಕ್ಷರು) ಕೆ.ಶಂಕರ (ಪ್ರಧಾನ ಕಾರ್ಯದರ್ಶಿ)

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**